ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ

ಹುಬ್ಬಳ್ಳಿ ತಾ. [illegible]

ಸಂಪುಟ ೨೮] [[illegible]

ಸಂಪಾದಕರು:
ಹ. ರಾ. ಪುರೋಹಿತ]

[ಸಂಸ್ಥಾಪಕರು— [illegible]
ರಂ. ರಾ. ದಿವಾಕರ

ಪ್ರಾಣಿಶರೀರದಲ್ಲಿ ಹೇಗೋ ಹಾಗೆಯೇ ರಾಷ್ಟ್ರದ ರಾಜಕೀಯ ಶರೀರದಲ್ಲಿಯೂ ಯಾವುದಾದರೊಂದು ವೇದನೆಯಿದ್ದರೆ ಅದು ನಿಜವಾಗಿ ಇರುವ ಸ್ಥಳವೆಲ್ಲೋ ನೋವೆನಿಸುವ ಸ್ಥಳವೆಲ್ಲೋ ಎಂದೆನಿಸುವದುಂಟು. ಕಾಲು ಕಡಿದ ಮನುಷ್ಯನಿಗೆ ಹೆಬ್ಬೆರಳು ನೋಯುತಿದೆಯೆಂಬ ಭ್ರಮೆಯಾದ ಹಾಗೆ.

—ವೆಂಕಾಲೆ

★

ಸ್ವೈರಣೆಗೆಟ್ಟವನು ದೇಹವನ್ನಾಗಲಿ ಆತ್ಮವನ್ನಾಗಲಿ ಅಧೀನದಲ್ಲಿಟ್ಟುಕೊಳ್ಳಲಾರ.

—ಬೇಕನ್

★


ಸಂಗೀತದಿಂದ ಆತ್ಮದಲ್ಲಿ ಒಂದು ಬಗೆಯ ಸಾಮಂಜಸ್ಯವೂ ಲಯವೂ ಉದ್ಭವಿಸುವವು. ಆದರಿಂದ ನ್ಯಾಯಬುದ್ಧಿ ಕೂಡ ಉಂಟಾಗುವದೆಂದು ಹೇಳಬಹುದು; ಏಕೆಂದರೆ ಸಮಂಜಸ ಹೃದಯಿಯಾದವನು ಅನ್ಯಾಯಕ್ಕೆ ಹೇಗೆ ಎಳಸಲಾಪನು?

—ಪ್ಲೇಟೊ

★

ಒಂದೊಂದು ಅತಿರೇಕವೂ ಒಂದೊಂದು ದೋಷಕ್ಕೆ ಕಾರಣವಾಗುವದು. ಒಂದೊಂದು ದೋಷದಿಂದ ಒಂದೊಂದು ಅತಿರೇಕ ಹುಟ್ಟುವದು. ಒಂದೊಂದು ಸವಿಗೂ ಒಂದೊಂದು ಕಹಿಯಿದೆ, ಒಂದೊಂದು ಕೆಡುಕಿಗೂ ಒಂದೊಂದು ಒಳಿತುಂಟು. ರಸಾಸ್ವಾದದ ಒಂದೊಂದು ಇಂದ್ರಿಯಕ್ಕೂ ದುರುಪಯೋಗಕ್ಕಾಗಿ ಶಿಕ್ಷೆ ಕಾದಿದೆ. ಸಂಯಮದಿಂದ ಜೀವನವನ್ನು ಭೋಗಿಸುವದೇ ಸುಖದ ದಾರಿ.

—ಎಮರ್ಸನ್



ಜಯಪುರ ಕಾಂಗ್ರೆಸ್ ಅಧ್ಯಕ್ಷ
ಡಾ. ಪಟ್ಟಾಭಿ ಸೀತಾರಾಮಯ್ಯನವರು

೩೩ ವರುಷಗಳ ಕಾಂಗ್ರೆಸ್ಸಿನ ಸೇವೆಯ ತರುವಾಯ ಆಂಧ್ರದ ಡಾ. ಪಟ್ಟಾಭಿಯವರು ಕಾಂಗ್ರೆಸ್ ಅಧ್ಯಕ್ಷತೆಯ ಗದ್ದುಗೆಯನ್ನೇರಿದ್ದಾರೆ. ಶಾಂತಪ್ರಕೃತಿಯ ಕರ್ತೃತ್ವಶಾಲಿಯಾದ ಈ ಹೊಸ ಅಧ್ಯಕ್ಷರ ನೇತೃತ್ವದಲ್ಲಿ ಕಾಂಗ್ರೆಸ್ಸಿನ ಪ್ರಗತಿ ಉತ್ತರೋತ್ತರವಾಗಲೆಂದು ಹಾರೈಸೋಣ

ಕಾಂಗ್ರೆಸ್ಸಿನ ಹೊಸ ಅಧ್ಯಕ್ಷ ಡಾ. ಪಟ್ಟಾಭಿ

—ಪುಟ ೧೨

ಸುಂದರ ಸ್ವಿಝರ್ಲಂಡ್

—ಪುಟ ೫

ಚಿಕ್ಕಕತೆ

ಶ್ರೀ ಕೃಷ್ಣ ಪಾಟೀಲ
ಕಲ್ಲುಮುಟ್ಟೆ
ಬೆಳಗಾವಿ

ಸ್ವರ್ಗದಿಂದ ಭೂಮಿಗೆ

ಮುಕುಂದರಾಯರು ಅಕಾಲ ಮರಣಕ್ಕೆ ಬಲಿಯಾದರು. ಅವರನ್ನು ಬದುಕಿಸಿಕೊಳ್ಳಲು ಎಲ್ಲ ಪ್ರಯತ್ನಗಳು ವ್ಯರ್ಥವಾದವು. ಅದೃಶ್ಯ ಮತ್ತು ತನ್ನ ಲೀಲಾವಿನೋದವನ್ನು ಹರಡಿ ಮುಕುಂದರಾಯರ ಪ್ರಾಣಪಕ್ಷಿಯನ್ನು ಎತ್ತಿಕೊಂಡು ಹೋಯಿತು. ಜನನ-ಮರಣ ಚಕ್ರದಲ್ಲಿ ನಮ್ಮ ಸುಂಕದ ಕಟ್ಟೆಯ ಮಾರ್ತಾಂಡ ಕಾರಕೂನರು "ಸವಡೇಸ" ಎಂದು ಸತ್ತ ಕೋಷ್ಟಕವನ್ನು ತುಂಬಿ ಪೂರ್ತಿ ಮಾಡಿದರು. ಅವರ ಉದ್ದಂಡ ಜೀವನಕ್ಕೆ ರಾಜಕೀಯ ಗೌರವವು ಇಷ್ಟೇ ಸರಿ!

ಆದರೆ ಜನರ ಬಾಯಿಯ ವಾದಸರಣಿಯು ಬೇರೆ ಇದ್ದಿತು.

—ಓ! ಮುಕುಂದರಾಯರು ಮಹಾದಾನಿಗಳು. ಅವರ ಜೀವಮಾನದಲ್ಲಿ ನಾವು ಉಂಡ ಊಟವೇನು! ಪಡೆದ ದಾನವೇನು! ಸ್ವೀಕರಿಸಿದ ಸಹಾಯವೇನು! ವರ್ಣಿಸಲು ಅಸದಳವಾದುದು. ಅವರು ಕಲಿಯುಗದ ಕರ್ಣರೇ ಸರಿ! ಅವರಂತಹ ಪುಣ್ಯಾತ್ಮರು ಭೂಮಿಗೂ ಬೇಕು. ಅದಕ್ಕೇ ದೇವರು ಅವರನ್ನು ಇಷ್ಟು ಚಿಕ್ಕ ವಯಸ್ಸಿನಲ್ಲಿ ತನ್ನ ಲೋಕಕ್ಕೆ ತೆಗೆದುಕೊಂಡು ಹೋದನು. ಈಗ ಅವರ ಕೃಪಾಛತ್ರ ತಪ್ಪಿದ ನಾವು ಪರದೇಸಿಗಳು. ಆ ಪುಣ್ಯಾತ್ಮನು ತ್ರಿಕಾಲಕ್ಕೂ ಬೇಕು. ಅವರು ಈಗ ಸ್ವರ್ಗಸಿಂಹಾಸನದಲ್ಲಿ ವಿರಾಜಮಾನರಾಗಿರಬೇಕು! ಎಂದು ಸೀತಾಬಾಯಿಯ ಮುಸ್ಸಂಜೆ ಬೃಹದ್ವೃಂದವು ತಂಬುಲ ರಸವನ್ನು ನುಂಗುತ್ತ ಕೊಂಡಾಡಿತು.

—ಅವರ ಹೃದಯವೈಶಾಲ್ಯದನ್ನು ಅಳೆಯಲು ಈ ಪೊಳ್ಳು ಬ್ರಹ್ಮಾಂಡ ಸಾಲದು. ಮನಸೂ, ಮಾತೂ ಅಷ್ಟೇ ದೊಡ್ಡವು. ಅವರು ಇಡೀ ಜೀವಮಾನದಲ್ಲಿ ತೆರೆದ ಕೈಯನ್ನು ಮುಚ್ಚಲಿಲ್ಲ. ಬಾಗಿಲಿಗೆ ಬಂದವನನ್ನು ಬರಿಗೈಯಿಂದ ಕಳಿಸಿದುದನ್ನು ಕಾಲಪುರುಷನು ಸಹ ಅರಿಯನು. ಮಾತುಗಳು ಮುತ್ತಾಗುವಂತಿದ್ದರೆ ಅದೊಂದು ಪರ್ವತರಾಶಿಯಾಗಬೇಕು. ಅವರು ಗಳಿಸಿದ ಪುಣ್ಯದ ಶಿಖರ ಸ್ವರ್ಗವನ್ನು ತಗುಲಿರಬೇಕು. ಕಲಿಯುಗದಲ್ಲಿ ಇಂಥವರು ಕೋಟಿಗೊಬ್ಬರು ಸಹ ಹುಟ್ಟಲಾರರು. ಸ್ವರ್ಗದಲ್ಲಿ ದಾನ-ಧರ್ಮಕ್ಕೆ ಎಡೆಯಿಲ್ಲವೆಂದು ಅವರು ತಿರುಗಿ ಭೂಲೋಕಕ್ಕೆ ಬರುವಂತಹ ಧೀರೋದಾತ್ತರು ಎಂದು ಮುಗಿಲ ಕಡೆಗೆ ಕೈಮಾಡಿ ಮಾಸಿಕ ಶ್ರಾದ್ಧದ ದಿನ ಒಬ್ಬ ವ್ಯಾಖ್ಯಾತರು ಅವರ ಉಪಕೃತವೃಂದದ ನಡುವೆ ಎದ್ದುನಿಂತು ಗುಣಗಾನ ಮಾಡಿದರು.

—ರಾಯರ ಆಕಸ್ಮಿಕ ಅಗಲುವಿಕೆಯಿಂದ ನಮ್ಮ ದೇಶವು ಕಳವಳಗೊಂಡಿದೆ. ನಮಗಾದ ಹಾನಿಯನ್ನು ಯಾವ ಭವಿಷ್ಯ ಪುರುಷನೂ ತುಂಬಿ ಕೊಡಲಾರನು. ಅವರು ನಮ್ಮ ಕಾಲದ ವಿದ್ಯಾವಾಚಸ್ಪತಿಗಳು. ಸರ್ವಧರ್ಮ ಸಮನ್ವಯ ದ್ರಷ್ಟಾರರು. ರಾಜಕಾರಣದಲ್ಲಿ ಆಕಸ್ಮಿಕ ಶುಭಧೀರರು. ದೇವಾಂಶ ಸಂಭೂತರು. ನಮ್ಮ ನಾಡು, ನುಡಿಯು, ನಾಗರಿಕರು, ವೃತ್ತಪತ್ರ ವ್ಯವಸಾಯಗಾರರು ಅವರ ಮುಕ್ತಹಸ್ತಕ್ಕೆ ಚಿರಋಣಿಗಳು. ಅವರು ತೋರಿಸಿಕೊಟ್ಟ ರಾಜಮಾರ್ಗದರ್ಶನವೇ ನಮ್ಮೆಲ್ಲರ ಚುಕ್ಕಾಣಿ. ದೇವರು ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೊಡಲಿ. ಅವರ ಅಷ್ಟೇಶ್ವರ ಸುಖ ದುಃಖಗಳಲ್ಲಿ ನಾವೂ ಪಾಲುಗಾರರು! ಎಂದು ನಮ್ಮಲ್ಲಿಯ ವರ್ತಮಾನ ಪತ್ರಗಳು ತಿಲಾಂಜಲಿಯ ಪುಟದಲ್ಲಿ, ಕಪ್ಪು ಪಟ್ಟೆ ಗೆರೆಯ ಚೌಕಟ್ಟಿನಲ್ಲಿ ದಪ್ಪಕ್ಷರದಿಂದ ಬರೆದು ಪ್ರಸಿದ್ಧಿಸಿದವು.

ಅಹುದು....

ಆಗ ರಾಯರು ಸ್ವರ್ಗದಲ್ಲಿದ್ದರು.

ಊರ್ವಶಿ, ರಂಭೆ, ಮೇನಕೆ, ತಿಲೋತ್ತಮೆ, ಹಾಹಾ, ಹೂಹೂ ಇವರ ನಡುವೆ ರಾಯರು ಸ್ವರ್ಗಾಸನ್ನರಾಗಿರುವರು. ಒಬ್ಬಳು ಶಾಲೊತ್ತುತ್ತಿರುವಳು, ಒಬ್ಬಳು ಇನಿಗೊರಲಿನ ಕಂಠದಿಂದ ಶ್ರೀರಾಗವನ್ನು ಹಾಡುತ್ತಿರುವಳು. ಇನ್ನೊಬ್ಬಳು ಕೈ, ಕಣ್ಣು, ಮೈಗಳನ್ನು ತಿರುವುತ್ತ ಭರತನಾಟ್ಯವಾಡುತ್ತಿರುವಳು. ಮಗುದೊಬ್ಬಳು ಸುಧಾರಸವನ್ನು ಬಟ್ಟಲಿನಲ್ಲಿ ತುಂಬಿ ಕುಡಿಸುತ್ತಿರುವಳು. ಪುಣ್ಯ ಮಹಾತ್ಮೆಯ ಸಹಾ ಪ್ರದರ್ಶನ ವೈಖರಿಯಿಂದ ನಡೆದಿದೆ. ರಾಯರು ಪುಣ್ಯಸಂಚಯಕಾರಣವಾದ ಭೂಲೋಕವನ್ನು ಮರೆತಿರುವರು. ಅತೃಪ್ತ ಭಾವಾಂತರವನ್ನು ತೃಪ್ತತೆಯಲ್ಲಿ ಉಂಟ ಬಯಸುತ್ತಿರುವರು. ಅಲ್ಲದೆ ಸುಧೆಯ ಉನ್ನತ ಚಾಪಲ್ಯದಿಂದ ಸ್ವರ್ಗವನ್ನೂ ತ್ರಿಕಾಲಗಳನ್ನೂ ಮರೆಯುವ ಹವಣಿಕೆಯಲ್ಲಿರುವರು. ಅಲ್ಲಿ ಅವರು ಸಕಲ ರಾಗರಸ ಅಲಾಪರು. ಒಟ್ಟು ಅವರು ಪೂರ್ಣದಲ್ಲಿಯೆ ಬಂದು ಅಪೂರ್ಣಪಾತ್ರರು.

—ಏನು ನೋಡುತ್ತಿರುವೆ ಪುಣ್ಯಾತ್ಮ? ಎಂದು ಇನಿವೆಣ್ಣು, ಚೆಲೆವೆಣ್ಣು ಹಾಹಾ ಇನಿ ಜೇನಿನ ಮೆಲ್ಲುಲಿಯ ಸೊಲ್ಲಿನಿಂದ ಕೇಳಿದಳು.

—ಭೂಲೋಕವನ್ನು ನೋಡುತ್ತಿರುವೆ. ಎಂದು ರಾಯರು ತಿಲೋತ್ತಮೆಯ ಹೆಗಲ ಮೇಲೆ ಕೈಹಾಕಿ ಹೇಳಿದರು.

—ಭೂಲೋಕದ ವಾಸನೆಯು ಮತ್ತೇಕೆ ಮಹಾತ್ಮಾ? ರಂಭೆಯು ಜೇಂಗೊಡವನ್ನು ಸುರಿದಂತೆ ಪ್ರಶ್ನಿಸಿದಳು.

—ಓ! ಅಲ್ಲಿ ನೋಡು ಒಬ್ಬ ವಿಧವೆ! ತಿಲೋತ್ತಮೆಯು ಬೆರಳು ಮಾಡಿ ತೋರಿಸಿದಳು.

—ಅಹುದು; ಬಾಲವಿಧವೆ! ರಂಭೆಯ ತೊಡೆಯ ಮೇಲೆ, ಕೈಯೂರಿ ಕಣ್ಣರಳಿಸಿ ನೋಡಿದರು.

—ಅವಳಾರು? ದಿವ್ಯಾತ್ಮ?

—ಪರೀಕ್ಷಿಸುವೆ. ಮೇನಕೆಯ ಕೈಯೊಳಗಿನ ವನಮಾಲೆಯನ್ನು ಕೊರಳಿಗೆ ತಗುಲಿಸಿಕೊಂಡು ರಾಯರು ಮುಂದೆ ಮುಂದೆ ಸರಿಯಹತ್ತಿದರು.

—ಇನ್ನಷ್ಟು ಮುಂದೆ ಸರಿಯದಿರು ತೃಪ್ತಾತ್ಮಾ! ಊರ್ವಶಿಯು ಎಚ್ಚರಿಸಿದಳು.

ರಾಯರು ಸ್ವರ್ಗದ ಜೆಳಕಿಂಡಿಗೆ ಬಂದು ನಿಂತರು. ಭೂಲೋಕದ ಜಂಜಡವೆಲ್ಲವು ಸ್ಪಷ್ಟವಾಗಿ ಕಾಣುತ್ತಿತು.

ಅವಳು ವಿಧವೆ. ಭಾಗ್ಯಹೀನ ವಿಧವೆ. ನಿಸರ್ಗದತ್ತ ಅಲಂಕಾರಗಳನ್ನು ಗಂಡನ ಹಿಂದೆ ಹರಿವೊಗೆದಿರುವಳು. ಕುಂಕುಮಾಲಂಕೃತ ಹಣೆಗೆ ಇಂದು ಕಾಡಿಗೆಯ ಗೆರೆ. ಕೇಶಭಾರದಿಂದ ಮಿರುಗಿಡುವ ತಲೆಯು ಸನ್ಯಾಸಾಶ್ರಮಿಯಂತಾಗಿದೆ. ದಗ್ಧ ವಿಕಂಕಣ ಹಸ್ತ. ಸುವರ್ಣಮಂಡಿತ ಕಂಠದಲ್ಲಿ ತರುಣ ತುಳಸಿಯ ತೊಂಡು ಮಾಲೆ. ಪ್ರಾಪಂಚಿಕ ಸೌಖ್ಯ-ಶಿಥಿಲ ಶೃಂಗಾರಪೂರ್ಣ ಜಿಹ್ವೆಯ ಮೇಲೆ ಹರಿನಾಮೋಚ್ಚಾರಣೆ. ಶರೀರದ ಬಾಹ್ಯ ರಂಪ್ರತೆಗೆ ಶ್ವೇತಾಂಬರದ ಆವರಣ. ಒಂದು ಹೊತ್ತು ಒಂದು ಊಟ. ವೈಧವ್ಯದ ಕಠೋರ ಶಾಸನವನ್ನು ಕ್ರಮಾಗತವಾಗಿ ನಡೆಸುವದೇ ಪತಿನಿಷ್ಠೆಯ ಧ್ಯೇಯ ದ್ಯೋತಕ. ರೂಢಿಯ ಹೆಸರಿನಲ್ಲಿ ಧರ್ಮವನ್ನು ನಡೆಸುತ್ತಿರುವಳು.

ಭಾಗ್ಯಹೀನ ಬಾಲವಿಧವೆಯು ಧರ್ಮದ ಅವತಾರವೆಂದು ಜನರು ಕೊಂಡಾಡಿದರು. ಧರ್ಮವು ಆಚಾರ, ವಿಚಾರ, ಕ್ರಿಯಾ, ಕರ್ಮದಿಂದ ಆವಳನ್ನು ಆವರಿಸಿ ಬಿಗಿದುದೇ ಹೀಗೆ ಕರೆಯಲು ಕಾರಣವಾಯಿತೆನ್ನಬೇಕು. ಜನರ ಮಾತೂ ಸುಳ್ಳಿರಲಿಲ್ಲ.

ರಾಯರ ಸ್ವರ್ಗಸಿಂಹಾಸನವು ಇನ್ನಷ್ಟು ಭದ್ರವಾಯಿತು. ಮೇನಕೆಯು ಹೆಗಲಮೇಲಿಟ್ಟ ಕೈಯಿಂದ ದೀರ್ಘಾಯುಷ್ಯಭವ! ಎಂದು ಆಶೀರ್ವದಿಸಿದರು. ಹಾ ಹಾ ಸುಧೆಯ ಪಾತ್ರೆಯನ್ನು ತುಂಬಿ ಬಾಯಿಗೆ ಹಿಡಿದಳು.

ಸನಾತನ ಧರ್ಮವು ವತ್ಸಲೆಯನ್ನು ವಿಧವೆಯ ರೂಪದಲ್ಲಿ ಎರಕ ಹೊಯ್ದು ನಿಲ್ಲಿಸಿತು. ಆದರೆ ನಿಸರ್ಗದತ್ತ ನಿಯಮವು ಅವಳ ತಾರುಣ್ಯವನ್ನು ಹಾಳುಮಾಡಲಿಲ್ಲ. ಅವಳ ಸುಕುಮಾರ ದೇಹವನ್ನು ವೃದ್ಧಾವಸ್ಥೆಗೆ ಇನ್ನೂ ತಿರುಗಿಸಲಿಲ್ಲ. ಸ್ತ್ರೀಜನ್ಯ ಕೋಮಲತೆಯನ್ನು ದಿವಾಳಿಗೆ ನಿಲ್ಲಿಸಲಿಲ್ಲ. ಆದರೆ ಕಠೋರ ನಿಷ್ಠೆಯಿಂದ ಅವು ಇನ್ನೂ ಕಾಂತಿಗೊಂಡವು. ತೆರೆಯ ಮರೆಯಲ್ಲಿಯ ಅವಳ ಸೌಂದರ್ಯವು ಕುಡಿಗಟ್ಟಿ ಹೆಡೆ ಎತ್ತುತ್ತಿದ್ದಿತು. ದಾಂಪತ್ಯ ಜೀವನದ ರಮ್ಯ ದೃಷ್ಟಾಂತಗಳು ಕಣ್ಣಿಗೆ ಕಂಡ ಸಮಯಕ್ಕೊಮ್ಮೆ ದೈಹಿಕ ತೃಷೆಯು ಮೂರು ಹೆಡೆಯ ಹಾವಿನಂತೆ ತಲೆ ಎತ್ತಿ ಭೂತ್ಕರಿಸುವದು. ಅದನ್ನು ತುಳಿದು ನಿಲ್ಲಬೇಕೆಂದು ಬಗೆದ ಎಣಿಕೆ ಒರೆಗುಣಿಕೆಗಳು. ಭಾವನೆಯ ಗೆರೆಯನ್ನು ದಾಟಿ, ಸಂಸ್ಕಾರದ ಸೀಮೆಯನ್ನು ದಾಟಿ ಕೊನೆಗೆ ಕೈಮೀರಿ ಒಲವಿನ ಕುದುರೆಯನ್ನೇರಿ ಮೈಹಸಿವು ಓಡು ವರಿಯುವದು. ತನ್ನ ಅತೃಪ್ತತೆಗೆ ತೃಪ್ತ ಮಾರ್ಗವನ್ನು ಹುಡುಕಿ ನೀರು ಕುಡಿಯ ಬಯಸುವದು ಅನೇಕ ಸಲ ಮಾರ್ಗ ತೀರ ಸರಳವೆನಿಸುವದೊ ?

ಹೀಗೆ ಸ್ವರ್ಗದ ಫಲವಾದ ಧರ್ಮವೂ, ಭೂಲೋಕದ ಆದರ್ಶವಾದ ನಿಸರ್ಗವೂ ತಮ್ಮ ಮಹತಿಯ ನಿರ್ಣಯಕ್ಕೆ ಭಾಗ್ಯಹೀನ ವತ್ಸಲೆಯನ್ನು ಕಾರಣವಾಗಿ ಸ್ವೀಕರಿಸಿದವು. ಈ ಸನಾತನ ಶಕ್ತಿಗಳ ತುಮುಲ ಯುದ್ಧದಲ್ಲಿ ವತ್ಸಲೆಯು ಹಣ್ಣು ಹಣ್ಣಾದಳು. ಬಾಯಿಬಿಟ್ಟಳು. ಬಸವಳಿದು ಬೆಂಡಾದಳು. ಕಣ್ಣು ಕಾಣದಾದಳು. ಊಟ, ಉಡಿಗೆ, ನಿದ್ದೆ ನೀರಡಿಕೆ, ನನ್ನದು, ತನ್ನದು ಎಂಬ ತಾರತಮ್ಯವನ್ನರಿಯದ ಮುಗ್ಧ ಮುದ್ದೆಯಾದಳು. ಸಾರಹೀನ ಜೀವನವು ಅಸಹ್ಯವೆನಿಸಿತು. ಸಹ್ಯಕ್ಕೆ ಉಡೆಯಿದೆ ಎಂದು ಒಂದು ದಿನ ಅಂತರಾತ್ಮ ನುಡಿದಂತಾಯಿತು. ಈ ಹಾಳು ಪುರಾತನ ಸೃಷ್ಟಿ ಅಂದೇ ತಾರುಣ್ಯಭರಿತವಾಯಿತು. ವಸಂತನು ಆಗಲೆ ಆಗಮಿಸಿ ತನ್ನ ಧ್ವಜಪತಾಕೆಯನ್ನು ಸೃಷ್ಟಿಯ ತುಂಬ ಹರಡಿದ್ದನು.

ವತ್ಸಲೆಯು ಪುನರ್ವಿವಾಹವಾಗುವಳೆಂದು ವದಂತಿಯಾಯಿತು.

ರಾಯರ ಸ್ವರ್ಗಸಿಂಹಾಸನವು ನಡುಗಹತ್ತಿತು. ವದಂತಿಯು ಕೆಲದಿನಗಳಲ್ಲಿಯೇ ನಿರ್ಧಾರವಾಯಿತು.

ರಾಯರಿಗೆ ಸ್ವರ್ಗದಿಂದ ಅಪ್ಪಣೆಯಾಯಿತು. ವತ್ಸಲೆಯ ಮದುವೆಯಾಯಿತು.

ರಾಯರು ಆಕಾಶದಿಂದ ಕಳಚಿ ನೆಲದ ಮೇಲೆ ಬಿದ್ದು ಸಸ್ಯಾದಿಗಳಲ್ಲಿ ಸಮರಸರಾಗಿ ಬದುಕಿದರು.

ವತ್ಸಲೆಯು ತನ್ನ ಗಂಡನನ್ನು ಹಿಂಬಾಲಿಸಿದಳು. ರಾಯರಿಗೆ ಮಾನವ ಜನ್ಮವನ್ನು ತಾಳಲು ದೇವರಿಂದ ಆದೇಶದಾಯಿತು.

ವತ್ಸಲೆಯು ತನ್ನ ಆರು ತಿಂಗಳ ಮುದ್ದು ಮುದ್ದಾದ ಮಗುವನ್ನು ಎದೆಗೆ ಒತ್ತಿಕೊಂಡು —ಲುಚ್ಚಾ, ಇಂಥ ಗುರಿಯಿಲ್ಲದ ನಗುವಿನ ಅರ್ಥವೇನು? ಎಂದು ಮುದ್ದುಕೊಡುತ್ತ ಹಲವಾರು ಸಾರೆ ಕೇಳಿದಳು.

—ಸ್ವರ್ಗದಿಂದ ಭೂಮಿಗೆ ಬಂದಿರುವೆ. ನರಕಕ್ಕೆ ಹೋಗಿಲ್ಲ. ಇದು ನಿನ್ನ ಪುಣ್ಯವೇ ಸರಿ! ಎಂದು ಆ ರಾಯ—ಗುವರನು ನಗೆಯ ಮೋಡಿಯಲ್ಲಿ ಹೇಳಿದರೆ ವತ್ಸಲೆಗೆ ಹೇಗೆ ತಿಳಿಯಬೇಕು ?

ಅಥವಾ,

ವತ್ಸಲೆಗೆ ಈ ಉತ್ತರದ ಅವಶ್ಯಕತೆಯೂ ಇಲ್ಲ.

ದೇಶಾಂತರಗಳಿಂದ

ಚರ್ಚಿಲ್ಲರ ಘೂತ್ಕಾರ

ಕಾಮನವೆಲ್ತ್ ಮುಖ್ಯಮಂತ್ರಿ ಸಮ್ಮೇಲನವನ್ನು ಬ್ರಿ. ಸರಕಾರ ಕರೆದುದು ಚರ್ಚಿಲ್ಲರಿಗೆ ಸರಿಬೀಳದೆ ಅವರು ಸರಕಾರವನ್ನು ಯಥೇಚ್ಛ ನಿಂದಿಸಿ ಮಾತನಾಡಿದರು. ಸಮ್ಮೇಲನದಲ್ಲಿ "ಬ್ರಿಟಿಶ್ ಕಾಮನವೆಲ್ತ್ ಅಫ್ ನೇಶನ್ಸ್" ಎಂಬಲ್ಲಿ 'ಬ್ರಿಟಿಶ್' ಎಂಬ ಶಬ್ದವನ್ನೂ ಇಂಡಿಯಾದ ಜೊತೆಗಿನ 'ಡೊಮಿನಿಯನ್' ಶಬ್ದವನ್ನೂ ಕಿತ್ತು ಹಾಕಿದ್ದು ಅವರ ಹೊಟ್ಟೆಗೆ ವಿಷವೆರೆದ ಹಾಗಾಯಿತು. ಹೀಗೆ ಮಾಡಲು ಭಾರತ ಮತ್ತು ಐರ್ಲೆಂಡುಗಳ ಒಲವನ್ನು ಪಡೆಯುವುದೇ ಉದ್ದೇಶವಾಗಿತ್ತು. ಇಲ್ಲಿ ಕಾಮನವೆಲ್ತಿನಲ್ಲಿ ಭಾರತ ಉಳಿವ ಬಿಡುವ ಪ್ರಶ್ನೆಗಿಂತ ಭಾರತ ಮತ್ತು ಅದರಂತೆಯೇ ಐರ್ಲೆಂಡಿನ ಸದಾಶಯವನ್ನು ಉಳಿಸಿಕೊಳ್ಳುವುದೇ ಮುಖ್ಯ ಎಂಬುದು ಚರ್ಚಿಲ್ಲರಿಗೆ ತಿಳಿಯದಾಯಿತು. ಈ ಸದಾಶಯ ಸದ್ಭಾವನೆಗಳಿದ್ದರೆ ಒಮ್ಮೆ ಅವು ಕಾಮನ್‌ವೆಲ್ತಿನಲ್ಲಿ ಉಳಿದರೂ ಉಳಿದಾವೆಂಬುದು ಬ್ರಿ. ಸರಕಾರದ ಆಶೆ.

ಬ್ರಿಟಿಶ್ ಸರಕಾರದೊಡನೆ ಯಾವುದಾದರೊಂದು ವಿಧದ ಸಂಬಂಧವನ್ನು ಭಾರತ ಇಟ್ಟುಕೊಂಡಲ್ಲದೆ ಅದರ ರಕ್ಷಣೆಯ ಹೊಣೆಯಲ್ಲಿ ಭಾಗವಹಿಸುವುದು ತಪ್ಪೆಂದೂ ಹಾಗೆ ವಹಿಸುವ ಸಮಯವೆಂದರೆ ಸಂ. ರಾ. ಸಂಘಕ್ಕೆ ಮಾಡುವ ಕರ್ತವ್ಯದ ರೂಪದಲ್ಲಿ ಮಾತ್ರ ಎಂದೂ ಚರ್ಚಿಲ್ಲರ ವಾದ. ಭಾರತಕ್ಕೆ ಬ್ರಿಟನ್ನಿನ ರಕ್ಷಣೆ ಅವಶ್ಯವೆಂಬ ಚರ್ಚಿಲ್ಲರ ಹೆಮ್ಮೆಯ ಮಾತಿಗೆ ಬುಡ ತಲೆಯಿಲ್ಲ. ಮೊನ್ನಿನ ಮಹಾ ಯುದ್ಧದಲ್ಲಿ ಬ್ರಹ್ಮದೇಶ ಮತ್ತು ಮಲಯಗಳನ್ನು ಚಕ್ರವರ್ತಿಗಳ ದಲಗಳು ಎಷ್ಟರ ಮಟ್ಟಿಗೆ ಕಾದವೆಂಬದನ್ನು ಹೊಸದಾಗಿ ಹೇಳಬೇಕಾಗಿಲ್ಲ; ಪರಸ್ಪರ ಹಿತ ದೃಷ್ಟಿಯಿಂದ ಭಾರತ ಬ್ರಿಟನ್ನುಗಳಲ್ಲಿ ಸೌಹಾರ್ದ ಸಂಬಂಧಗಳೇರ್ಪಡಬಹುದಲ್ಲದೆ ಬ್ರಿಟನ್ನಿಗೆ ಏನೂ ಅವಶ್ಯಕವಿಲ್ಲದೆ ಕೇವಲ ಭಾರತಕ್ಕೆ ಅಗತ್ಯವೆನಿಸುವ ಬ್ರಿಟನ್ನಿನ ಸಹಾಯಕ್ಕಾಗಿ ಭಾರತ ಬ್ರಿ. ಕಾಮನ್‌ವೆಲ್ತಿನಲ್ಲಿ ಉಳಿಯಬೇಕೆಂಬ ಚರ್ಚಿಲೀಗೀತವು ಅರ್ಥಹೀನವೇ ಸರಿ. ಚರ್ಚಿಲ್ಲರ ಚೀತ್ಕಾರ ಘೂತ್ಕಾರಗಳೇನು ಭಾರತಕ್ಕೆ ಹೊಸವಲ್ಲ. ಅವುಗಳಿಂದಾಗುವ ಪರಿಣಾಮವೂ ಅಷ್ಟರಲ್ಲೇ ಇದೆ.

ಕಾಮನ್‌ವೆಲ್ತಿನಲ್ಲಿ ಭಾರತ ಉಳಿಯುವಂತೆ ಮಾಡಲು ನಾನಾ ಯೋಜನೆಗಳು ಮುಂದೆ ಬಂದಿವೆ. ಅವುಗಳಲ್ಲಿ ಪಂ. ನೆಹ್ರುಗಳ ಯೋಜನೆ ಬಹು ಮುಖ್ಯವಾದುದೆಂದು ಲಂಡನ್ ಪತ್ರಿಕೆಗಳು ಹೇಳುತ್ತಿವೆ. ಅವರ ಪ್ರಕಾರ ಭಾರತೀಯರಿಗೆ ದ್ವಿವಿಧವಾದ ನಾಗರಿಕತ್ವ ಲಭಿಸುವುದು. ಅವರು ಭಾರತದ ಪ್ರಜೆಗಳೆನಿಸಿಯೂ ಕಾಮನ್‌ವೆಲ್ತಿನ ಪ್ರಜೆಗಳೆನಿಸಬಲ್ಲರಂತೆ!

ಉತ್ತರ ಅಟ್ಲಾಂಟಿಕ್ ಸಂರಕ್ಷಣೆ

ಅಮೇರಿಕದ ಸಂಯುಕ್ತ ಸಂಸ್ಥಾನ, ಕೆನಡ ಮತ್ತು ಪಶ್ಚಿಮ ಯುರೋಪಿನ ಐದು ರಾಷ್ಟ್ರಗಳು ಸಭೆ ಸೇರಿ ಉತ್ತರ ಅಟ್ಲಾಂಟಿಕ್ ಸಂರಕ್ಷಣೆಯ ಒಪ್ಪಂದವನ್ನು ಮಾಡಿಕೊಳ್ಳಲು ಚರ್ಚೆ ನಡೆಸಬೇಕೆಂದಿರುವುದಾಗಿ ಸುದ್ದಿ. ಬ್ರಿಟನ್, ಫ್ರಾನ್ಸ್, ಬೆಲ್ಜಿಯಂ, ನೆದರ್‌ಲೆಂಡ್ಸ್ ಮತ್ತು ಲಕ್ಸೆಂಬರ್ಗಿನ ವಿದೇಶ ಮಂತ್ರಿಗಳು ಪ್ಯಾರಿಸ್ಸಿನಲ್ಲಿ ಸಭೆ ಸೇರಿ ಮೇಲಿನ ನಿರ್ಣಯಕ್ಕೆ ಬಂದರೆಂದು ತಿಳಿಯುತ್ತದೆ. ಅಮೇರಿಕದ ಅಧ್ಯಕ್ಷ ಚುನಾವಣೆಯ ನಂತರ ಸಪ್ತರಾಷ್ಟ್ರ ಸಮ್ಮೇಳನ ನಡೆಸಬಹುದೆಂದು ಯೋಚಿಸಲಾಗಿದೆ. ಹೀಗೆ ನಿರ್ಣಯಿಸಲು ಸಂ ರಾ ಸಂಘದ ಶಾಸನ ಪಟ ಮತ್ತು ಬ್ರುಸ್ಸೆಲ್ಸಿನಲ್ಲಿ ೭ ತಿಂಗಳ ಹಿಂದೆ ಮಾಡಿಕೊಂಡ ಪಶ್ಚಿಮ ಒಕ್ಕೂಟದ ಒಪ್ಪಂದ ಇವನ್ನು ಆಧರಿಸಲಾಗಿದೆಯೆಂದು ಐದು ನಾಡುಗಳ ವಿದೇಶಮಂತ್ರಿಗಳು ಹೇಳಿದರು. ಬ್ರಿಟನ್ ಫ್ರಾನ್ಸಗಳ ಐದೈದು ಪ್ರತಿನಿಧಿಗಳೂ ಬೆಲ್ಜಿಯಂ ಮತ್ತು ನೆದರ್‌ಲೆಂಡುಗಳ ಮೂರು ಮೂರು ಪ್ರತಿನಿಧಿಗಳೂ ಲಕ್ಸೆಂಬರ್ಗಿನ ಒಬ್ಬ ಪ್ರತಿನಿಧಿಯೂ ಇರುವರು. ಇದು ಫ್ರಾನ್ಸ ಮತ್ತು ಬೆಲ್ಜಿಯಂಗಳ ಐರೋಪ್ಯ ಸಮ್ಮೇಳನ ಕರೆವ ಸಲಹೆಯನ್ನು ಪರಿಶೀಲಿಸಲಿರುವುದು.

ಮಾಹೆಯ ಗಲಭೆ

ಮಾಹೆಯಲ್ಲಿ ಇತ್ತೀಚೆಗೆ ನಡೆದ ಗಲಭೆಗಳನ್ನು ಹಿಂದೀ ಸರಕಾರ ಲಕ್ಷವಿಟ್ಟು ನೋಡುತ್ತಿದೆ ಎಂದು ವಿದೇಶ ಶಾಖೆ ಸಾರಿದೆ. ಈ ಗಲಭೆಯಲ್ಲಿ ಹಿಂದುಸ್ತಾನದಿಂದ ಸಾವಿರಾರು ಜನರು ಸೇರಿದ್ದರೆಂಬುದು ಸುಳ್ಳು. ಹಿಂದೀ ಸರಕಾರ ಮಾಹೆಯ ಆಡಳಿತ ವಹಿಸಿಕೊಳ್ಳಬೇಕೆಂಬ ಬೇಡಿಕೆಗೆ ಅರ್ಥವಿಲ್ಲ. ಏಕೆಂದರೆ ಅಲ್ಲಿ ಜನಮತ ಗಣನೆಯಿಂದಲೇ ಅದನ್ನು ನಿರ್ಣಯಿಸಬೇಕೆಂದು ಸರಕಾರ ಆಗಲೇ ಫ್ರೆಂಚರೊಡನೆ ಒಪ್ಪಂದ ಮಾಡಿಕೊಂಡಿದೆ. ಅದಕ್ಕೆ ಮೊದಲು ಫ್ರೆಂಚ ಸರಕಾರದೊಡನೆ ಅದರ ಬಗ್ಗೆ ಮಾತುಕತೆ ನಡೆಸುವುದಿದೆ ಎಂದೂ ಆ ಸಾರಿಕೆಯಲ್ಲಿದೆ.

ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಫ್ರೆಂಚ ಸರಕಾರವು ಹಡಗಿನ ಮೂಲಕ ಮಾಹೆಗೆ ಚಿಕ್ಕ ಸೈನ್ಯವೊಂದನ್ನು ಕಳಿಸಿದೆ ಎಂದು ಸುದ್ದಿ. ೨ ರೈಫಲ್ಲಿನ ೩೦ ಸಿಪಾಯಿಗಳು ಮಾಹೆಯನ್ನು ಮುಟ್ಟಿದರೆಂದೂ ತಿಳಿಯುತ್ತದೆ. ಮಾಹೆಯಲ್ಲಿ ಇತ್ತೀಚೆಗೆ ನಿರ್ಮಿತವಾದ ರಾಷ್ಟ್ರೀಯ ರಕ್ಷಣಾ ಸಮಿತಿಯ ಅಧ್ಯಕ್ಷರಾದ ಶ್ರೀ ಐ. ಕೆ. ಕುಮಾರನ್ನರು ಈ ವಿಷಯವನ್ನು ಹಿಂದೀ ಸರಕಾರಕ್ಕೆ ತಿಳಿಸಿರುವರು.

ತಾವು ಗಳಿಸಿದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕೆಂದು ಅವರು 'ಜನರಿಗೆ ಬೇಡಿಕೊಂಡಿದ್ದಾರೆ; ಸತ್ಯಾಗ್ರಹ ಹೂಡಿ ಫ್ರೆಂಚ್ ಸೈನ್ಯ ಒಳಬರದಂತೆ ನೋಡಿಕೊಳ್ಳಬೇಕೆಂದು ಅವರು ವಿನಂತಿ ಮಾಡಿಕೊಂಡಿದ್ದಾರೆ.

ಚಿಯಾಂಗರ ಪರಾಜಯ

ಚೀನೀ ಕಮ್ಯುನಿಸ್ಟರು ಮುಕ್ಡನ್ ನಗರವನ್ನು ವಶಪಡಿಸಿಕೊಂಡು ಮಂಚೂರಿಯದ ಆಡಳಿತವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಲು ಯಶಸ್ವಿಯಾಗಿ ಯತ್ನ ನಡೆಸುತ್ತಿದ್ದು, ಚಿಯಾಂಗರ ಸೋಲು ನಿಶ್ಚಿತವಾದಂತಾಯಿತೆಂದು ಹೇಳಲಾಗಿದೆ. ಇದರಿಂದ ಚಿಯಾಂಗರ ಸರಕಾರವೇ ಅದೃಢವಾಗಿದೆಯೆಂದೂ ಈ ಮೂಲಕ ಅವರು ದೇಶತ್ಯಾಗವನ್ನು ಮಾಡಬೇಕಾಗಿ ಬಂದರೂ ಬರಬಹುದೆಂದೂ ತಿಳಿಯುತ್ತದೆ.

ಅಮೇರಿಕದಲ್ಲೀಗ ಚಿಯಾಂಗರ ಸೋಲು ಬಹಳ ಕಳವಳವನ್ನುಂಟುಮಾಡಿದೆ. ಚೀನಕ್ಕೆ ಮತ್ತಷ್ಟು ಸಹಾಯವನ್ನು ಜನಧನ ಶಸ್ತ್ರಾಸ್ತ್ರಗಳ ರೂಪದಿಂದ ಕಳಿಸಲೂಬಹುದು. ಆದರೂ ಅಂತ್ಯದ ಪರಿಣಾಮ ಹೇಗಾಗುವುದೋ ತಿಳಿಯದು. ಆದರೆ ಅದು ಇನ್ನು ಬಹಳ ದೂರ ಉಳಿಯದೆಂಬುದು ಖಂಡಿತ.

ಟ್ರೂಮನ್ನರ ವಿಜಯ

ಹ್ಯಾರಿ ಟ್ರೂಮನ್ನರು ಪುನಃ ಅಮೇರಿಕದ ಅಧ್ಯಕ್ಷರಾಗಿ ಆರಿಸಿ ಬಂದರು. ಡ್ಯೂಯಿಗೆ ಸೋಲಾಯಿತು. ಟ್ರೂಮನ್ನರ ಡೆಮೊಕ್ರಾಟಿಕ್ ಪಕ್ಷದ ಈ ವಿಜಯ ಕೆಲವೊಮ್ಮೆ ಅಸಂಭಾವ್ಯವೆನಿಸಿದ್ದುದರಿಂದ ಈಗ ಎಲ್ಲರಿಗೂ ಆಶ್ಚರ್ಯ ಉಂಟಾಗುವಂತಾಗಿದೆ.

ಟ್ರೂಮನ್ನರ ಪಕ್ಷಕ್ಕೆ ೫೪, ಡ್ಯೂಯಿಯವರಿಗೆ ೪೬. ಶಾಸನ ಸಭೆಗಳ ಚುನಾವಣೆಯ ಪರಿಣಾಮವಿನ್ನೂ ಹೊರಬಿದ್ದಿಲ್ಲ. ಆದರೆ ಇಲ್ಲಿಯ ವರೆಗೆ ಬಂದ ವರದಿಯಂತೆ ಸೆನೆಟ್ಟಿನಲ್ಲಿ ಡೆಮೊಕ್ರ್ಯಾಟರಿಗೆ ೫೪ ಮತ್ತು ರಿಪಬ್ಲಿಕನ್ನರಿಗೆ ೪೨ ಸ್ಥಳಗಳು ದೊರೆತಿವೆ. ಬಹುಮತಕ್ಕೆ ೪೯ ಸ್ಥಳಗಳಾದರೆ ಸಾಕು. ಪ್ರತಿನಿಧಿ ಸಭೆಯಲ್ಲಿ ಡೆಮೊಕ್ರ್ಯಾಟರಿಗೆ ೨೬೩ ಸ್ಥಳಗಳೂ ರಿಪಬ್ಲಿಕನ್ನರಿಗೆ ೧೭೦ ಸ್ಥಳಗಳೂ ಸಿಕ್ಕಿವೆ. ೨೧೮ ಸ್ಥಳ ಸಿಕ್ಕರೆ ಬಹುಮತವೆಂದಾಗುವುದು.

ಇಷ್ಟರೊಳಗೆ ತಿಳಿದ ಪ್ರಕಾರ (ಚುನಾವಣೆಯ ಅಪೂರ್ಣಾವಸ್ಥೆಯಲ್ಲಿ) ಟ್ರೂಮನ್ನರಿಗೆ ೨೮ ಸಂಸ್ಥಾನಗಳಲ್ಲಿಯ ೩೦೪ ಮತದಾರರ ಗುಂಪುಗಳಲ್ಲಿ ಬೆಂಬಲ ಸಿಕ್ಕಿದೆ. ಡ್ಯೂಯಿಯವರಿಗೆ ೧೬ ಸಂಸ್ಥಾನಗಳಲ್ಲಿಯ ೧೮೯ ಮತದಾರರ ಗುಂಪುಗಳ ಬೆಂಬಲವಿತ್ತು. ಅಧ್ಯಕ್ಷ ಪದಕ್ಕೆ ೨೬೬ ಮತದಾರರ ಗುಂಪುಗಳ ಬೆಂಬಲ ಸಿಗಬೇಕಾಗಿದೆ.

ಡ್ಯೂಯಿ ಅಧ್ಯಕ್ಷ ಚುನಾವಣೆಗೆ ನಿಂತು ಸೋಲುವುದು ಇದು ಎರಡನೆಯ ಸಲ. ಕಳೆದ ಚುನಾವಣೆಯಲ್ಲಿ ರೂಜವೆಲ್ಟರ ವಿರುದ್ಧ ನಿಂತು ಅವರು ಸೋತಿದ್ದರು.


ಕಮ್ಯುನಿಸ್ಟರಲ್ಲದವರ ನಿರ್ಯಾತನ

ಜರ್ಮನಿಯ ಸೋವಿಯಟ್ ವಲಯದಲ್ಲಿ ಪೋಲೀಸುದಲದ ಪುನರ್ವ್ಯವಸ್ಥೆಯಾಗುತ್ತಿದೆ. ಅಂತರಿಕ ಆಡಳಿತೆಯ ಅಧ್ಯಕ್ಷ ಡಾ. ಕುರ್ಟ್ ಫಿಶರರು ಆಗಲೇ ಪ್ರಾರಂಭಿಸಿದ ಕಮ್ಯುನಿಸ್ಟೇತರರ ಉಚ್ಚಾಟನೆ ಈಗ ಸಂಪೂರ್ಣವಾಗಿದೆಯೆಂದು ತಿಳಿದುಬರುತ್ತದೆ. ಕಮ್ಯುನಿಸ್ಟರಲ್ಲಿ ಕೂಡ ಅರ್ಥಶ್ರದ್ಧೆಯ ಪೋಲೀಸರನ್ನು ಗಾಳಿಸಿ ಗಾಳಿಗೆ ತೂರಲಾಯಿತಂತೆ!

ಇವರ ಮೇಲೆ ವಲಯದ ಪೋಲೀಸುದಲದ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ. ಅದಕ್ಕೆ "ಜನತಾ ಪೋಲೀಸುದಲ" ಎಂದು ಕರೆಯಲಾಗಿದೆ. ಅದರಲ್ಲಿ ಇತ್ತೀಚೆಗೆ ರಶಿಯದಿಂದ ಬಂದ ಜರ್ಮನ್ ಯುದ್ಧ ಕೈದಿಗಳನ್ನೇ ಹೆಚ್ಚು ಹೆಚ್ಚಾಗಿ ಸೇರಿಸಿಕೊಳ್ಳಲಾಗಿದೆ. ಇವರಿಗೆ ರಶಿಯದಲ್ಲಿ ಕಮ್ಯುನಿಸ್ಟ್ ತತ್ವಗಳನ್ನು ಬೋಧಿಸಲಾಗಿದೆ. ಹಿಂದಿನ ಸ್ಟಾಲಿನ್‌ಗ್ರಾಡ್ ಯುದ್ಧ ಸಮಯದಲ್ಲಿ ಸಿಕ್ಕಿದ್ದ ಜರ್ಮನ್ ಅಧಿಕಾರಿಗಳಿಗೆ ಶಿಕ್ಷಣ ಕೊಡಿಸಿ ಕರೆಸಿ ಈ ದಲದಲ್ಲಿ ನಿಯಮಿಸಿಕೊಳ್ಳಲಾಗಿದೆ. ಸೋವಿಯಟ್ ಸೈನ್ಯವನ್ನು ಜರ್ಮನಿಯಿಂದ ಹಿಂತೆಗೆದುಕೊಂಡಾಗ ಅಲ್ಲಿ ಸರಿಯಾದ ಆಡಳಿತೆಯು ಬಿಗಿ ಉಳಿಯಬೇಕೆಂದು ಈ ರೀತಿ ಶಿಸ್ತಿನ ಸುಸಂಘಟಿತ ಸಶಸ್ತ್ರ ಬಲವನ್ನು ರಚಿಸಲಾಗಿದೆಯೆಂದು ತಿಳಿಯುತ್ತದೆ.

ಹಕ್ಕುಗಳಿಗೆ ಸೊನ್ನೆ!

ದಕ್ಷಿಣ ಆಫ್ರಿಕ ಸರಕಾರದ ೩೦ ವರ್ಷಗಳ ಆಡಳಿತೆಯಲ್ಲಿ ಇಂದಿನ ವರೆಗೂ ಅಲ್ಲಿಯ ಮೂಲನಿವಾಸಿಗಳಿಗೆ ಅಲ್ಲಿಯ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯವೂ ಸಿಕ್ಕಿಲ್ಲ ಭೂಮಿಯ ಮೇಲೆ ಒಡೆತನವೂ ಇಲ್ಲ. ವಿಶ್ವಸ್ತ ಮಂಡಲದ ಆಳಿಕೆಯ ಕಾಲದಲ್ಲಿ ಬಿಳಿಯ ವಲಸೆಗಾರರಿಗೆ ಸಾವಿರಾರು ಚದುರ ಮೈಲಿನ ಜಾಗವನ್ನು ವಸತಿಸಿಸಲು ಕೊಡುವ ಪದ್ಧತಿ ಜಾರಿಗೆ ಬಂದಿತು, ಅದನ್ನೇ ಈಗಲೂ ಮುಂದುವರಿಸಲಾಗುತ್ತಿದೆ. ೧೫ ಸಾವಿರ ಇರುವ ಹೆರೇರೋ ಗುಂಪಿನ ಮೂಲ ನಿವಾಸಿಗಳಿಗೆ ಅಲ್ಲಿ ಸ್ಥಳವಿಲ್ಲವಂತೆ ಅವರ ಮುಖಂಡನಾದ ಫ್ರೆಡರಿಕ್ ದುಹಾ



" ಹಿಮಾಲಯ " ವೆಂಬ ೧೬೮೦ ಪಯಣಿಗರನ್ನು ಹೊತ್ತು ಮುಂಬಯಿ-ಅಸ್ಟ್ರೇಲಿಯಾಗಳ ನಡುವೆ ತಿರುಗುವ ಜಗತ್ತಿನಲ್ಲೇ ಅತಿದೊಡ್ಡ ಹಡಗು.

ವಿಚಿತ್ರ ಚಿತ್ರ

ನಾರಿಯಲ್ಲ, ಹೆಮ್ಮಾರಿ!

ಇರ್ಮಾ ಬೊಲ್‌ಗ್ರೇನ್ ಎಂಬ ಜರ್ಮನ್ ಹೆಂಗಸು ಜರ್ಮನಿಯಲ್ಲಿ ಇದ್ದಳಂತೆ. ಅವಳು ಕ್ರೌರ್ಯಕ್ಕೆ ಬಹಳ ಹೆಸರಾದವಳು. ಚಿಕ್ಕ ಮಕ್ಕಳು ವೇದನೆಯಿಂದ ಚೀತ್ಕರಿಸುವುದನ್ನು ಕೇಳಿ ಆನಂದಿಸಲೆಂದು ಅವಳು ಒಕ್ಕ ಒಕ್ಕ ಮಕ್ಕಳನ್ನು ಹಿಡಿದು ಅವುಗಳ ಕೈಬೆರಳನ್ನು ಚೂರಿಯಿಂದ ಕೊಯ್ಯುತ್ತಿದ್ದಳು. ಒಮ್ಮೆ ಮನೆಗೆ ಬೆಂಕಿ ಹಚ್ಚಿ ಒಬ್ಬ ಮುದುಕಿಯನ್ನು ಕಂಡ ಕಣ್ಣೆ ದೂಡಿ ಕೊಂದು ಸಂತೋಷಪಟ್ಟಳಂತೆ!

ಅವಳು ಅಗಾಧ ಶ್ರೀಮಂತೆಯಾದರೂ ಅವಳಿಗೆ ಒಂದು ಬರೆಹ ಬರುತ್ತಿದ್ದಿಲ್ಲ. ತನ್ನ ಅತಿ ದೊಡ್ಡದಾದ ಚಿನ್ನದ ಪೆಟ್ಟಿಗೆ ಉಂಗುರ ಒತ್ತಿ ಅವಳು ಕೊಲೆ ಮಾಡಿಸಲು ಕೊಡುತ್ತಿದ್ದ ಪತ್ರಕ್ಕೆ ಸಹಿ ಮಾಡುತ್ತಿದ್ದಳು. ಒಮ್ಮೆ ಅವಳು ಅದನ್ನು ಕಳೆದುಕೊಂಡದ್ದರಿಂದ ಬಹಳ ಜನ ಅವಳ ಈ ಪ್ರತೀಕಾರ ಕ್ಲೇಶದಿಂದ ಬದುಕಿಕೊಂಡರು. ಅದು ಕಡೆಗೆ ಅವಳ ಕೋಟೆಯ ಸುತ್ತಿನ ಅಂಗಳದಲ್ಲಿ ಕೆಲಸ ಮಾಡುತ್ತಿದ್ದವನಿಗೆ ಸಿಕ್ಕಿತೆಂದೂ ಮತ್ತೆ ಅದು ಅವಳಿಗೆ ತಿರುಗಿ ತಲುಪಲಿಲ್ಲವೆಂದೂ ತಿಳಿಯುತ್ತದೆ. ನಾಜಿಗಳು ಕ್ರೂರರೆಂಬ ಸ್ತ್ರೀವಾದಿಗಳಿಗೆ ಉಳಿಯು ಪ್ರತಿರೋಧಕ ಮೂರ್ತಿಯಾಗಿ ಸ್ತ್ರೀಯೊಬ್ಬಳಾಗಿ ಎದುರು ನಿಂತಿದ್ದಾಳೆ!

ವಿಲಕ್ಷಣ ಗಂಡುಡಿಗೆ!

೧೯೦೦ ವರ್ಷಗಳ ಹಿಂದೆ ಡೆನ್ಮಾರ್ಕಿನಲ್ಲಿ ಗಂಡಸರು ಬಟ್ಟೆಯುಟ್ಟುಕೊಳ್ಳುವ ಬಗೆಗೆ ಈಗ ನಿದರ್ಶನ ದೊರೆತಿದೆ. ಡೇನಿಶ್ ಪೀಟು ಬಾಗಿನಲ್ಲಿ ಒಬ್ಬ ನಿರಾಭರಣ ಸುಂದರನ ಹೆಣದ ಜೊತೆಗೆ ಎರಡು ಮುದ್ದೆ ಮಾಡಿದ ಬಟ್ಟೆಯು ಸಿಕ್ಕಿತ್ತು. ಒಂದು ವಿಧದ ಪ್ರಾವಕದಲ್ಲಿ ಕೆಡದಂತೆ ರಕ್ಷಿಸಿರುವುದನ್ನು ಪರೀಕ್ಷಿಸಲಾಯಿತ್ತು. ಆ ಬಟ್ಟೆಯ ಮುದ್ದೆಗಳೆರಡೂ ಎರಡು ಕೋಟುಗಳಾಗಿದ್ದವು. ಅವುಗಳಲ್ಲಿ ಒಂದನ್ನು ಕುರಿಯ ಚರ್ಮದಿಂದಲೂ ಇನ್ನೊಂದನ್ನು ಸಣ್ಣ ಕೂದಲಿನ ಒಂದು ಬಗೆಯ ಪ್ರಾಣಿಯ ೨೨ ಚರ್ಮಗಳಿಂದಲೂ ರಚಿಸಲಾಗಿತ್ತು. ಹೊಲಿಗೆ ಬಹಳ ನಾಜೂಕಿನದಿತ್ತು. ಇದರಿಂದ ಪ್ರಾಚೀನ ಕಾಲದ ಡಚ್ ಗಂಡಸರು ಬರೀ ಎರಡು ಕೋಟುಗಳನ್ನಲ್ಲದೆ ಪಾಯಿಜಾಮುಗಳನ್ನಾಗಲಿ ಇನ್ನಾವ ವಸ್ತ್ರಗಳನ್ನಾಗಲಿ ಧರಿಸುತ್ತಿರಲಿಲ್ಲ ಎಂದು ತಿಳಿಯುತ್ತದೆ. ಆ ಎರಡರಲ್ಲಿ ಒಳ ಅಂಗಿ ಹೆಚ್ಚು ನಾಜೂಕಿನದಾದ ೨೨ ಚರ್ಮಗಳದ್ದು; ಹೊರ ಅಂಗಿ ಅದೇ ಅಳತೆಯದಾದರೂ ಹೊರಗೆ ಎಳೆದು ತೆಗೆವ ನಮೂನೆಯದು!

ವಿಚಿತ್ರ ಪತ್ತೆ!

ಎಸ್. ಅಲೆಕ್ಸಾಂಡರ್ ಕೊಹೆನ್ನನು ಒಬ್ಬ ದೊಡ್ಡ ಪತ್ತೆದಾರಿ. ಅವನ ಮುಖ್ಯ ಕೆಲಸವೆಂದರೆ, ಅಪ್ರಾಮಾಣಿಕರಾದ ಗಂಡ ಹೆಂಡಿರನ್ನು ಪತ್ತೆ ಹಚ್ಚುವದು. ಅವನು ೧೦ ಸಾವಿರ ಹೆಂಗಸರನ್ನೂ ಕೆಲವು ಗಂಡಸರನ್ನೂ ಪರಸ್ಪರ ಅಪ್ರಾಮಾಣಿಕತೆಗಾಗಿ ಹಿಡಿದಿದ್ದಾನೆ.

ಅವನ ಅನುಭವದ ಪ್ರಕಾರ ಮನೆ ಬಿಟ್ಟು ಹೋದ ಗಂಡಸರಲ್ಲಿ ಅನೇಕರು ಬೇರೆ ಉದ್ಯೋಗ ಹಿಡಿದು ಸಭ್ಯರಾಗಿ ಬಾಳುತ್ತಿದ್ದುದು ಕಂಡಿತು; ಹಾಗಲ್ಲದೆ ಮನೆಬಿಟ್ಟು ಹೋದ ಹೆಂಗಸರಲ್ಲಿ ಬಹುಸಂಖ್ಯರು ಗಂಡನ್ನಷ್ಟೇ ಅಲ್ಲ, ತಂತಮ್ಮ ಪ್ರಿಯತಮರನ್ನೂ ವಂಚಿಸುತ್ತಾರಂತೆ. ಅಂಥವರು ಬಹುಪಕ್ಷ ಸೋಮಾರಿಗಳೂ, ಗಣಮಂತೆಯರೂ, ಮುಖ್ಯ ವಯಸ್ಸಿನಿಂದ ಇಳಿವಯಸ್ಸಿಗೆ ಇಳಿಯುತ್ತಿದ್ದರೂ ತಾವು ಚಿಪ್ಪ ಹೆಯರೆಂದು ಭ್ರಮಿಸುವವರೂ ಆಗಿದ್ದಾರೆಂದು ಕೊಹೆನ್ನನಿಗೆ ಸಾಕ್ಷಾತ್ಕಾರವಾಯಿತಂತೆ!

ರೇರು ಜರ್ಮನರ ಕುಲನಾಶಕ ಸಂಗ್ರಾಮದಲ್ಲಿ ಬ್ರಿಟಿಶ್ ಬೆಚುವಾನಾಲೆಂಡಿಗೆ ಓಡಿ ಹೋಗಿದ್ದು ಪುನಃ ನೈಋತ್ಯ ಆಫ್ರಿಕಕ್ಕೆ ಬರಲು ಮಲನ್ ಸರಕಾರವನ್ನು ಕೇಳಿಕೊಂಡರೆ ಸಫಲವಾಗಲಿಲ್ಲ [illegible] ಈ ವಿಷಯದಲ್ಲಿ ಸಂ. ರಾ. ಸಂಘದ ಬ್ರಿಟಿಶ್ [illegible] ನಲ್ಲಿ [illegible] ದ. ಆ. ಸರಕಾರವನ್ನು ಕೇಳಿಕೊಂಡಿದ್ದಾರೆ. ಅದರ ಫಲಿತಾಂಶವೇನಾಗುವದೋ ಕಾದು ನೋಡಬೇಕಾಗಿದೆ. ಬಿಳಿಯರ ಆಳಿಕೆ ಅಲ್ಲಿ ನಾಗರಿಕ ಜೀವಕ್ಕೆ ಹೇಗೆ ಕಳಂಕಪ್ರಾಯವಾಗಿದೆ ಎಂಬುದಕ್ಕೆ ಈ ನಿದರ್ಶನ ಸಾಕಷ್ಟೆ.

ಕರ್ನಾಟಕ

ಧಾರವಾಡ

ಹುಬ್ಬಳ್ಳಿಯಲ್ಲಿ ೪ ನೇ ತಾರೀಕು ಸಾಯಂಕಾಲ ಪೋಲೀಸ ಶಾಖೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಪೋಲೀಸ ಸುಪರಿಂಟೆಂಡೆಂಟ ಶ್ರೀ ಪಿ. ಬಿ. ಶಾನಭಾಗರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಪೋಲೀಸ ಅಧಿಕಾರಿಗಳಲ್ಲದೆ ಎಂ. ಎಲ್. ಎ. ಗಳೂ ನಾಗರಿಕರೂ ಬಂದಿದ್ದರು. ಜಿಲ್ಲೆಯಲ್ಲಿ ಸಂಭವಿಸುತ್ತಿರುವ ಕೊಲೆ, ದರೋಡೆ, ಕಳ್ಳತನ ಮೊದಲಾದವುಗಳನ್ನು ಹೋಗಲಾಡಿಸುವ ಉಪಾಯಗಳ ಬಗ್ಗೆ ಚರ್ಚೆಯಾಯಿತು. ಜಿಲ್ಲೆಯಲ್ಲೆಲ್ಲ ಗ್ರಾಮ ರಕ್ಷಕ ದಳಗಳನ್ನು ಹೆಚ್ಚಿಸಬೇಕೆಂದು ಗೊತ್ತಾಯಿತು.

ಧಾರವಾಡದಲ್ಲಿ ಮಾಳಮಡ್ಡಿಯಲ್ಲಿ ಬಳ್ಳಾರಿಯವರ ಕಂಪೌಂಡಿನಲ್ಲಿ ಒಂದು ಮತ್ತು ಕಡಪಾ ಪ್ಲೈಲಿನಲ್ಲಿ ಒಂದು ಹೀಗೆ ಎರಡು ನೀರಾಕೇಂದ್ರಗಳನ್ನು ತೆರೆದಿರುವರು. ಬೆಳಿಗ್ಗೆ ೭ ರಿಂದ ೯ ರ ವರೆಗೆ ನೀರಾ ಸಿಕ್ಕುವದು.

ಹುಬ್ಬಳ್ಳಿಯ ಚುರುಮುರಿ ಹಾಗು ಅವಲಕ್ಕಿ ಸಂಘದ ವಾರ್ಷಿಕ ಸಭೆ ಶ್ರೀ ವಿಠ್ಠಲರಾವ ಪೇರವಾಡೆ ಅವರ ಹಿರಿತನದಲ್ಲಿ ತಾ. ೩೧ ಕ್ಕೆ ಸೇರಿ ಮುಂದಿನ ವರ್ಷಕ್ಕೆ ಅಧಿಕಾರಿಗಳನ್ನು ಆರಿಸಲಾಯಿತು. ಶ್ರೀ ಬಸಪ್ಪ ಬ್ಯಾಳಿಯವರು ಅಧ್ಯಕ್ಷರು ಶ್ರೀ ಆರ್. ಎ. ಕೊಪ್ಪಳರು ಉಪಾಧ್ಯಕ್ಷರು ಮತ್ತು ರಾಮಜಿ ಗಾಯಕವಾಡರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಗದಗು ಎಸ್. ಸಿ. ಮಿಲ್ಲಿನ ಕಾಮಗಾರರಿಗೆ ಮೂಲ ಪಗಾರವು ೧೦೦ ಕ್ಕೆ ೧೦೦ ರಷ್ಟು ಹೆಚ್ಚಾಗಬೇಕು ಮತ್ತು ೪೦ ರೂಪಾಯಿಗಳಿಗಿಂತ ಕಡಮೆ ಸಂಬಳ ಯಾವ ಕಾಮಗಾರರಿಗೂ ಇರಕೂಡದು ಎಂದು ಕೇಳಿಕೊಳ್ಳಲಾಗಿತ್ತಷ್ಟೆ. ಇದರ ವಿಚಾರಣೆ ಔದ್ಯೋಗಿಕ ನ್ಯಾಯಾಲಯದಲ್ಲಿ ನಡೆದು ಕೆಳಗಿನಂತೆ ನಿರ್ಣಯಿಸಲಾಯಿತು. ೧೦೦ ಕ್ಕೆ ೭೫ ರಂತೆ ಮೂಲ ಸಂಬಳ ಹೆಚ್ಚು, ೩೧ ರೂ ಗಿಂತ ಕಡಮೆ ಯಾರಿಗೂ ಸಂಬಳ ವಿರಕೂಡದು ಮತ್ತು ಕಳೆದ ಜಾನೇವಾರಿ ೧ ನೇ ತಾರೀಕಿನಿಂದ ಈ ಸಂಬಳ ಜಾರಿಯಲ್ಲಿ ತರಬೇಕು.

ಹುಬ್ಬಳ್ಳಿಯ ಜಗದ್ಗುರು ಗಂಗಾಧರ ವಾಣಿಜ್ಯ ಕಾಲೇಜಿಗೆ ಶ್ರೀ ಶಹಾ ದೇವಜಿ ಕೇಶವಜಿ ಇವರು ೩೦೦೦ ರೂ. ಮತ್ತು ಡಾ. ತೆಗ್ಗಿನಮನೆಯವರು ೧೦೦೦ ರೂಪಾಯಿ ಮತ್ತು ಶ್ರೀ ಕಲ್ಲಪ್ಪಾ ಸಿದ್ದಪ್ಪಾ ಕೋಟಿಯವರು ೩೦೦೧ ರೂಪಾಯಿ ಕೊಡುವ ವಾಗ್ದಾನ ಮಾಡಿದರು.

ದೀಪಾವಳಿ ದಿವಸ ಸಂಜೆ ಕಬುಲಾಯತಕಟ್ಟಿ ಲಮಾಣಿ ತಾಂಡೆಯಲ್ಲಿ ಎಷ್ಟೋ ಗುಡಿಸಲುಗಳು ಬೆಂಕಿಯ ಬಾಯಿಗೆ ತುತ್ತಾಗಿ ಬಹಳೇ ಅನಾಹುತವಾಗಿರುತ್ತದೆ. ಅನೇಕರಿಗೆ ಇರಲಿಕ್ಕೆ ಸ್ಥಳವಿಲ್ಲದೆ ಗಿಡದ ಬುಡದಲ್ಲಿ ವಸತಿಮಾಡುತ್ತಲಿದ್ದಾರೆ. ಸದ್ಯಕ್ಕೆ ಧರಿಸಿಕೊಳ್ಳಲು ಅರಿವೆ ಅಂಚಡಿಗಳಿಲ್ಲದೆ ದುಃಖದ ಅತಿರೇಕದಿಂದ ತೊಳಲಿ ಬಳಲಿ ಅಹಾರ ನಿದ್ರೆಯಿಲ್ಲದೆ ಕೊರಗುತ್ತಲಿದ್ದಾರೆ. ಇವರಿಗೆ ಸಹಾಯಸಲ್ಲಿಸುವದು ಅತ್ಯವಶ್ಯವಾಗಿದೆಂದು ಓರ್ವರು ತಿಳಿಸುತ್ತಾರೆ.

ವಿಜಾಪುರ

ಬಾಗಲಕೋಟೆಯಲ್ಲಿ ಕಲಾದಗಿ ರಸ್ತೆಯ ಮೇಲಿರುವ ಕೋಣೆಗಳಲ್ಲಿ ವಾಸಿಸುತ್ತಿರುವ ಭಾಟಿಯಾ ಧೊಂಡಸಿ ಧರ್ಮಸಿ ಇವರಲ್ಲಿ ಅಮಾವಾಸ್ಯೆಯ ರಾತ್ರಿ ದರೋಡೆ ಆಗಿ ೪೦ ಸಾವಿರ ರೂಪಾಯಿ ಆಭರಣಗಳು ಅಪಹರಿಸಲ್ಪಟ್ಟವೆಂದು ತಿಳಿಯುತ್ತದೆ. ಲಕ್ಷ್ಮಿ ಪೂಜೆಯ ನಿಮಿತ್ತ ಗಂಡಸರೆಲ್ಲ ಅಂಗಡಿಗಳಿಗೆ ಹೋಗಿದ್ದರು ಹೆಣ್ಣು ಮಕ್ಕಳು ತಮ್ಮ ಧರ್ಮ ಪದ್ಧತಿ ಪ್ರಕಾರ ಭಜನೆ ಮಾಡುತ್ತ ಕುಳಿತಾಗ ದರೋಡೆಗಾರರು ಒಳ ನುಗ್ಗಿ ದೀಪ ಆರಿಸಿ ಮೈಮೇಲಿನ ಆಭರಣಗಳನ್ನೆಲ್ಲ ದೋಚಿಕೊಂಡು ಹೋದರಂತೆ ಅಲ್ಲಿದ್ದ ಒಬ್ಬ ಭಾಟಿಯಾ ಗಂಡಸಿಗೆ ಮೂರ್ಛೆ ಬರುವಂತೆ ಥಳಿಸಿದ್ದಲ್ಲದೆ ಹೆಣ್ಣು ಮಕ್ಕಳ ಕೈಗೆ ಗಾಯ ಮಾಡಿದ್ದಾರೆ.

ಶ್ರೀಮಂತ ಸೋಮಶೇಖರರಾವ ಸಂಗರಾವ ಸರನಾಡಗೌಡರು ಕರಡಿ ಇವರು ತಮ್ಮ ಜಮೀನಗಳಲ್ಲಿ ಸರ್ವೋತ್ಕೃಷ್ಟವಾದ ೧೭ ಎಕರೆ ೨೫ ಗುಂಠೆ ಭೂಮಿಯನ್ನು ಹುನಗುಂದದಲ್ಲಿಯ ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘಕ್ಕೆ ದಾನ ಮಾಡಿರುವರು.

ಬೆಳಗಾಂವಿ

ಹೆಚ್ಚು ಅಹಾರ ಧಾನ್ಯ ಬೆಳೆವವರಿಗೆ ಪ್ರೋತ್ಸಾಹನೆ ಕೊಡಬೇಕೆಂದು ಸರಕಾರದವರು ಕೆಲ ಪಾರಿತೋಷಕಗಳನ್ನು ಇಟ್ಟಿದ್ದಾರೆ. ಪ್ರತಿಯೊಂದು ತಾಲೂಕಿಗೆ ೭೫, ೫೦. ಹಾಗು ೨೫ ಹೀಗೆ ಮೂರು ಇನಾಮುಗಳು ಇರುವವು. ಚಿಕ್ಕೋಡಿ, ಹುಕ್ಕೇರಿ, ಬೈಲಹೊಂಗಲ ತಾಲೂಕುಗಳಲ್ಲಿ ಮುಂಗಾರಿ ಜೋಳ, ಅಥಣಿ, ಗೋಕಾಕ ತಾಲೂಕಳಲ್ಲಿ ಗು ಹಿಂಗಾರಿಜೋಳ ಮತ್ತು ಸವದತ್ತಿ ತಾಲೂಕಿನಲ್ಲಿ ಗೋದಿಗೆ ಪಾರಿತೋಷಕ ಕೊಡಲಾಗುವದು. ಮುಂಗಾರಿ ಜೋಳದ ಕ್ಷೇತ್ರ ೬ ಎಕರೆ ಇದ್ದು ಪ್ರತಿ ಎಕರೆಗೆ ೧೦೦೦ ಪೌಂಡು, ಹಿಂಗಾರಿ ಕ್ಷೇತ್ರ ೮ ಎಕರೆ ಇದ್ದು ಪ್ರತಿ ಎಕರೆಯ ಹುಟ್ಟುವಳಿ ೭೦೦ ಪೌಂಡು, ಗೋದಿ ೮ ಎಕರೆ ಇದ್ದು ಪ್ರತಿ ಎಕರೆಗೆ ೫೦೦ ಪೌಂಡು ಬೆಳೆ ಬೆಳೆಯತಕ್ಕದ್ದು. ನೀರಾವರಿ ಭೂಮಿಗಳಿಗೆ ಇದು ಸಂಬಂಧಿಸುವದಿಲ್ಲ. ಇನಾಮುಗಳನ್ನು ಒಕ್ಕಲತನ ಉಪಕರಣಗಳ ರೂಪದಲ್ಲಿ ಕೊಡಲಾಗುವದು.

ಕೆಲವು ತಿಂಗಳ ಹಿಂದೆ . ನಾಗನೂರಿನ ಪ್ರಸಿದ್ಧ ಪಾಟೀಲ ಶ್ರೀ ಸಿದ್ಧನಾಯಕರ ಕೊಲೆಯಾಗಿತ್ತಷ್ಟೆ. ಈ ಬಗ್ಗೆ ಜಿಲ್ಲಾ ಸೆಶನ್ಸ ಜಜ್ಜರಲ್ಲಿ ಖಟ್ಲೆ ನಡೆದು ೨೬ ಕ್ಕೆ ತೀರ್ಪು ಹೇಳಲ್ಪಟ್ಟಿತು. ಫಕೀರಪ್ಪಾ ಮುದಲಭಾವಿ, ಸಿದ್ದರಾಮಪ್ಪ ಮಠದ ಇವರಿಬ್ಬರಿಗೆ ಮರಣದಂಡನೆ ವಿಧಿಸಲಾಯಿತು.

ಗೋಕಾಕ ಸಕ್ಕರೆ ಪ್ರಕರಣದಲ್ಲಿ ಕೊನೆಯ ನಿರ್ಣಯವೀಗ ಹೊರಬಿದ್ದದ್ದು ಶ್ರೀ ಕೌಶಿಕ ಮಾಮಲೇದಾರ ಕೆ. ಯು. ಜಕಾತಿ, ಜಮ್ಮನಾಳ, ಎಸ್. ಬಿ. ಪಾಟೀಲ ಸಿ. ಎಸ್. ಪಾಟೀಲ ಇವರನ್ನು ಕೆಲಸದಿಂದ ಕಡಿಮೆ ಮಾಡಬೇಕೆಂದೂ ಡಿ. ಕೆ. ಪಾಟೀಲ, ಕಾಜಗಾರ ಇವರಿಗೆ ಎರಡು ಬಡತಿ ನಿಲ್ಲಿಸಲ್ಪಡಬೇಕೆಂದೂ ನಿರ್ಣಯಿಸಲಾಗಿದೆಂದು ತಿಳಿಯುತ್ತದೆ. ಶ್ರೀ ಆರ್. ಆರ್ ಪಾಟೀಲರಿಗೆ ಪ್ರಾಂತ ಆಫೀಸರ ಸ್ಥಳ ದೊರೆತಿದೆ. ಶ್ರೀ ಜಕಾತಿಯವರ ಮೇಲೆ ಫೌಜದಾರಿ ಖಟ್ಲೆ ಹಾಕಬೇಕೆಂದೂ ನಿರ್ಣಯಿಸಲಾಗಿದೆಯಂತೆ.

ಬೆಳಗಾವಿ ಜಿಲ್ಲಾ ಪೋಲೀಸ ಸುಪರಿಂಟೆಂಡೆಂಟ ಕಚೇರಿಯ ಕಾರಕೂನ ಉಬಬುಲೆಯವರಿಗೆ ಲಂಚದ ಪ್ರಕರಣದಲ್ಲಿ ಒಂದು ವರುಷ ಕಠಿಣ ಶಿಕ್ಷೆ ವಿಧಿಸಲಾಯಿತು. ೩೫೦ ರೂಪಾಯಿ ದಂಡವೂ ವಿಧಿಸಲಾಯಿತು.

ಬಳ್ಳಾರಿ

ಡಿಸೆಂಬರ ೫ ನೇ ತಾರೀಖು ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಕಲಾಪರಿಷತ್ತು ಜೋಳದರಾಶಿಯಲ್ಲಿ ನೆರವೇರಿಸುವದನ್ನು ಗೊತ್ತುಮಾಡಿದೆ. ಶ್ರೀ ಗುಬ್ಬಿ ವೀರಣ್ಣನವರು ಇದರ ಪ್ರಾರಂಭೋತ್ಸವ ಜರುಗಿಸುವರು. ನಾಟಕಲಂಕಾರ ಶ್ರೀ ಗರುಡ ಸದಾಶಿವರಾವ ಗದಗ ಇವರು ಈ ಪರಿಷತ್ತಿನ ಅಧ್ಯಕ್ಷತೆ ವಹಿಸುವರು. ಇದರ ಅಂಗವಾಗಿ ಕಲಾಪ್ರದರ್ಶನವನ್ನು ಏರ್ಪಡಿಸಲಾಗಿದೆ. ಶ್ರೀ ವಟ್ಟಂ ಶಾಮರಾಯರು ಇದರ. ಅಧ್ಯಕ್ಷತೆವಹಿಸುವರು ಕಾರ್ಯಕ್ರಮದಲ್ಲಿ ಭಾಗವಹಿಸುವವರು ನವಂಬರ ೫ ರೊಳಗಾಗಿ ಸ್ವಾಗತಸಮಿತಿಯವರಿಗೆ ತಿಳಿಸಬೇಕೆಂದು ಮುಂತಾಗಿ ಸ್ವಾಗತಸಮಿತಿಯವರು ಪ್ರಸಿದ್ಧಿಸುತ್ತಾರೆ.

ಶಿವಮೊಗ್ಗಿ ಜೇಲಿನಿಂದ ಪಾರಾಗಿ ಹೋದ ಬಗ್ಗೆ ಕಮ್ಯುನಿಷ್ಟ ಕಾರ್ಯಕರ್ತರಾದ ಶ್ರೀ ಬೆಟ್ಟ ದೇವರಾಜ ಅರಸ ಇವರಿಗೆ ೨ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಯಿತು.

ಮುಂಬಯಿ ಹಾಯಕೋರ್ಟಿನ ನ್ಯಾಯಾಧೀಶರಾಗಿರುವ ನ್ಯಾ. ಜಾಗಿರದಾರ ರಂಗಾಚಾರ್ಯರಿಗೆ ಬಾಗಲಕೋಟೆ ವಕೀಲ ಸಂಘದವರು ಮಾನಪತ್ರವನ್ನು ಕೊಟ್ಟರು. ಅವರು ೨೭ ಕ್ಕೆ ಬಾಗಲಕೋಟೆಗೆ ದಯಮಾಡಿಸಿ ಮುಂಜಾನೆ ಡಾಕ್ಟರರ ಸಂಘಕ್ಕೆ ಭೆಟ್ಟಿ ಕೊಟ್ಟು ಮಧ್ಯಾನ್ಹ ರಿಮಾಂಡ ಹೋಮುವನ್ನು ಸಂದರ್ಶಿಸಿದರು. ವಕೀಲ ಸಂಘದವರಿಂದ ಮಾನಪತ್ರ ಸ್ವೀಕರಿಸಿ ಅದಕ್ಕೆ ಕನ್ನಡದಲ್ಲಿ ಉತ್ತರ ಕೊಡುತ್ತ ಇನ್ನು ಮುಂದೆ ಕನ್ನಡವನ್ನು ಇಂಥ ಸಮಾರಂಭಗಳಲ್ಲಿ ಉಪಯೋಗಿಸಬೇಕೆಂದೂ ಇಂಗ್ಲಿಷನ್ನು ತೆಗೆದುಹಾಕಬೇಕೆಂದೂ ಅಭಿಪ್ರಾಯಪಟ್ಟರು.

ಮಂಗಳೂರಿನ ಬೆಜೆಂಟ ಬಾಲಿಕಾ ಪಾಠಶಾಲೆಯ ಹಳೆವಿದ್ಯಾರ್ಥಿಗಳಾದ ವಸಂತ ಪ್ರೇಮಿ ಮಂಡಳಿಯ ವಾರ್ಷಿಕ ಮಹಾಸಭೆಯು ಶ್ರೀಮತಿ ರಾಧಾಶೆಟ್ಟಿಯವರ ಅಧ್ಯಕ್ಷತೆಯಲ್ಲಿ ದಿನಾಂಕ ೩೧ ರಂದು ಸಂಜೆ ಜರುಗಿತು. ಭಾರತದ ಉಪ ಮುಖ್ಯ ಮಂತ್ರಿ ಪಟೇಲರನ್ನು ಅಭಿನಂದಿಸುವ ಠರಾವು ಮಂಜೂರಾಯಿತು.

ಪಣಂಬೂರಲ್ಲಿ ಗ್ರಾಮಸ್ಥರ ಸಭೆಯೊಂದು ಕಳೆದವಾರ ಶ್ರೀ ಬಿ. ಕೆ. ವೆಂಕಪ್ಪನವರ ಅಧ್ಯಕ್ಷತೆಯಲ್ಲಿ ಜರಗಿದಾಗ ಜನತಾ ಸೇವಾಸಂಘದವರು ಸಮಾಜದಲ್ಲಿರುವ ಅಂಧವಿಶ್ವಾಸ, ದುಂದುಗಾರಿಕೆ, ಮದ್ಯಪಾನ, ಕೋಳಿ ಜೂಜು, ಇತ್ಯಾದಿಗಳಿಂದಾಗುವ ಹಾನಿಯನ್ನು ವಿನೋದಗಳ ಮೂಲಕ ಅಭಿತೋರಿಸಿದರು. ಆ ಕುರಿತು ಶ್ರೀಯುತರು ಪಿ. ಬಾಪರ ಸಾಹೇಬ; ಎ. ಪಿ ಸುವರ್ಣ; ಪಿ. ಹರಿಯಪ್ಪ ಪೇನಾಡಿಗ ಮೊದಲಾದವರ ಭಾಷಣಗಳಾದವು.

ಉಡುಪಿ ಕಾಂಗ್ರೆಸ ಕಮಿಟಿಯ ಸಭೆಯು ಶ್ರೀ ಬಿ. ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ದಿನಾಂಕ ೨೭ ರಂದು ಜರಗಿದಾಗ ಸದ್ಯದ ಪರಿಸ್ಥಿತಿಯಲ್ಲಿ ಸೀದಾ ಪದ್ಧತಿಯ ಪುನರಾವೃತ್ತಿಯು ಸರಿಯಲ್ಲವೆಂದು ಅಭಿಪ್ರಾಯಪೀಯಲಾಯಿತು. ಅಲ್ಲದೆ ಅಕ್ಕಿ ಒಪ್ಪಿಸುವ ಅವಧಿಯನ್ನು ಫೆಬ್ರವರಿತನಕ ಮುಂದುವರಿಸಬೇಕೆಂದೂ, ಗೇಣಿ ಅಕ್ಕಿಯನ್ನು ಉಳಿತಾಯವೆಂದು ಪರಿಗಣಿಸಬಾರದೆಂದೂ ನಿರ್ಣಯಗಳಾದವು.

“ಶ್ರೀ ಧರ್ಮಸ್ಥಳ ದೀಪೋತ್ಸವವು ಎಂದಿನಂತೆ ಇದೇ ನವಂಬರ ತಾ. ೨೬ ರಿಂದ ೩೦ ರ ವರೆಗೆ ಜರಗುವುದು. ತಾ. ೨೯–೩೦ ರಲ್ಲಿ ಜರಗುವ ಸಾಹಿತ್ಯ ಮತ್ತು ಧರ್ಮಸಮ್ಮೇಲನಗಳಲ್ಲಿ ಊರು ಪರಊರುಗಳ ಘನವಿದ್ವಾಂಸರ ಸರಸಭಾಷಣಗಳು ವಗೈರೆ ಇರುವದರಿಂದಲೂ ರಸಿಕರೂ ಭಕ್ತಾದಿಗಳೂ ಸಹಭಾಗಿಗಳಾಗಬೇಕಾಗಿ ವಿನಂತಿ”

ಕಾರ್ಕಳ ತಾಲೂಕಿನ ವರಂಗ ಗ್ರಾಮದಲ್ಲಿಯ ಜೈನ ಮಠದ ಮ್ಯಾನೇಜರ ಶ್ರೀ ನಾಗರಾಜ ಅತಿಕಾರಿ, ಸದಾಶಿವ ಹೆಗಡೆ ಕುನಿಯಪ್ಪ ಸೀತಾರಾಮ ಶೆಟ್ಟಿ, ಡ್ಯಾನಿಯಲ್ ಮೊದಲಾದ ೧೪ ಜನರ ಮೇಲೆ ಜೂಜಾಟದ ಬಗ್ಗೆ ಖಟ್ಲೆ ನಡೆದಿತ್ತಷ್ಟೆ. ಅವರೆಲ್ಲರ ವಿಚಾರಣೆ ನಡೆದು ಕುಂದಾಪುರ ಸಬ್ ಡಿವ್ಹಿಜನಲ್ ಮ್ಯಾಜಿಸ್ಟ್ರೇಟರು ೧೧ ಜನರಿಗೆ ತಲಾ ೫೦೦ ರೂಪಾಯಿ ದಂಡವಿಧಿಸಿ ಉಳಿದ ಮೂವರು ಅಂದರೆ ನಾಗರಾಜ ಅತಿಕಾರಿ ಸೂರಪ್ಪ ಪೂಜಾರಿ ಮತ್ತು ಅಲ್ಬರ್ಟ ಡಿಸೋಜಾ ಇವರು ನಿರ್ದೋಷಿಗಳೆಂದು ಸಾರಿದರು.

ಉತ್ತರ ಕನ್ನಡ

ಅರೀಗದ್ದೆಯಲ್ಲಿ ೨೪ ನೇ ತಾರೀಖು ಹರಿಕಾಂತ ಸಮಾಜ ಸುಧಾರಣಾ ಸಂಘದ ವಿಶೇಷ ಸಾಧಾರಣ ಸಭೆ ಸೇರಿ ಸಾರ್ವಜನಿಕ ಮತ್ತು ಶಾಲಾ ವಾಚನಾಲಯವನ್ನು ಸ್ಥಾಪಿಸಲಾಯಿತು. ಬಿ ಕೆ. ಚಂಡೇಕರ ಇವರು ಅಧ್ಯಕ್ಷರು ಮತ್ತು ರಾಮಲಿಂಗಪ್ಪ ನಾಯಕ ಶಾಲಾ ಮಾಸ್ತರ ಇವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಕನ್ನಡ ಸಂಸ್ಥಾನ

ಶಿವಮೊಗ್ಗಿ ಜಿಲ್ಲಾ ಬೋರ್ಡಿನವರು ಕಳೆದವಾರ ಸಂತೆಬೆನ್ನೂರಲ್ಲಿ ಸಭೆ ಸೇರಿ ಮಹಾತ್ಮಾ ಗಾಂಧಿ ಸ್ಮಾರಕ ನಿಧಿಗೆ ೫೦೦೦ ರೂಪಾಯಿಗಳನ್ನು ಕೊಡುವದನ್ನು ನಿರ್ಣಯಿಸಲಾಯಿತು.

ಜೀವನ ಕೈಯಲಿ
ಉಸಿರಿನ ಸೂತ್ರ
ನಮ್ಮಧಿಕಾರವು
ಕರ್ಮದಿ ಮಾತ್ರ
ಫಲಗಳಲಿಲ್ಲ
ಎನ್ನುವರೆಲ್ಲಾ
ಭಗವಂತನ ಆ ಬಾನಕ್ಕೆ
ಏರಿರಿ ಹಾರಿರಿ
ನಿಮಗಿಲ್ಲವು ಇಲ್ಲಿಯ ಪಕ್ಕೀ.
ಭೂಮಿಯ ಬಾಳಿಗೆ
ಧೂಳಿಯ ಜೀತ
ಈ ಹೋರಿಯ ಫಲ
ನಮಗಿಂದೀ ನೆಲ–
ದಲಿ ಬೇಕೆನ್ನುವುದೀ ಗೀತ.
ನಮ್ಮೀ ಬಾಳಿನ
ಕೂಲೀ ಕುಂಬಳ
ಸಂಜೆ ಸಂಜೆಗೂ
ಹೋರಿಯ ಸಂಬಳ ಬೇಡುವದು
ಕೊಡದಿರೆ ಸಂಪನು ಹೂಡುವದು
ಕೊನೆ ತಾಸಿಗೆ ಕರೆ ನೀಡುವದು
ಅಂದು
ಬಾಳಿನ ಬೀಳನು,
ಸೋಲನು ಕಂಡು
ದೇವಗೆ ಮರೆ ಹೋದನು ವ್ಯಕ್ತಿ
ದೇವನ ಗರಜನು ಕಳೆಯುವದಿಂದು
ಜನ ಜನ ನೈಗೂಡಿದ ಶಕ್ತಿ
ಕಣಗಳ ಒಳಗಣ ಗುಟ್ಟುಗಳರಿದು
ಕೈ ಮುಗಿಸುವ ಕರ್ಮ ಮಂಜನು ಹರಿದು
ನಿಲುಕೇ ನಿಲುಕುವುದಾ ಮುಕ್ತಿ.
ನಮ್ಮೀ ಬಾಳಿನ
ಕೂಲೀ ಕುಂಬಳ
ಸಂಜೆ ಸಂಜೆಗೂ
ಹೋರಿಯ ಸಂಬಳ ಬೇಡುವದು
ಕೊಡದಿರೆ ಸಂಪನು ಹೂಡುವದು
ಪ್ರಳಯಕೆ ಕರೆಯನು ನೀಡುವದು
ಫಲದಾಸೆಯ ಬಿಡೆ
ನಮ್ಮೀ ದಿನ ನಡೆಯುವದೆಂತು ?
ಇಲ್ಲದ ದಯೆ, ಕರುಣೆಗೆ ಬಾಯನು ಬಿಡೆ
ಮಾನವಕುಲವಲ್ಲವು ಜಂತು
ಗುಹ್ಯಾತ್ ಗುಹ್ಯವ ಭೇದಿಸಿ ನೋಡಲು
ಇದೊ ಜನತೆಯು ಬಂತು.

ವಿ. ಜಿ. ಬಿ.

ಇನ್ನು ಹಲವು ಸಂಸ್ಥೆಗಳಿಗೂ ಧನ ಸಹಾಯ ಮಾಡುವ ನಿರ್ಣಯ ಸ್ವೀಕೃತವಾಯಿತು.

ರಾಯಚೂರ ಜಿಲ್ಲೆಯ ಚಿಕ್ಕಜಂತಗಲ್ಲಿನಿಂದ ಓಡಿ ಬಂದು ಮಾನವಿಯಲ್ಲಿ ಒಬ್ಬ ಹಿಂದುವಿನ ಮನೆಯಲ್ಲಿ ಅಡಗಿಕೊಂಡಿದ್ದ ಮೂವರು ರಜಾಕಾರರನ್ನು ಬಂಧಿಸಿದ್ದು ೩೪ ಸಾವಿರ ರೂಪಾಯಿ ಮತ್ತು ಹಿಂದುಗಳ ಬಹು ಬೆಲೆಯುಳ್ಳ ವಸ್ತ್ರಗಳು ಅವರಲ್ಲಿ ದೊರೆತಿವೆ. ಇಡೀ ಜಿಲ್ಲೆಯಲ್ಲಿ ಈವರೆಗೆ ಒಟ್ಟು ೮೦ ರಜಾಕಾರರನ್ನು ಬಂಧಿಸಿದ್ದು ಪಠಾಣ ಮತ್ತು ಅರಬರನ್ನು ಗಡೀಪಾರು ಮಾಡಲಾಗಿದೆ.

ಹರಿಪೂರ (ಸಾಂಗಲಿ) ಕೊಳ್ಳೆ ಖಟ್ಲೆಯಲ್ಲಿದ್ದ ೨೩ ಆರೋಪಿಗಳಲ್ಲಿ ೧೩ ಆರೋಪಿಗಳಿಗೆ ತಲಾ ೧೮ ತಿಂಗಳ ಕಠಿನ ಶಿಕ್ಷೆ ವಿಧಿಸಲಾಯಿತು. ಮಹಾತ್ಮರ ಮರಣಾನಂತರ ಫೆಬ್ರುವರಿ ೨ ಕ್ಕೆ ಮಿರಜಿ ಸಂಸ್ಥಾನದ ಹರಿಪುರದಲ್ಲಿ ಈ ದುರ್ಘಟನೆ ನಡೆದಿತ್ತು.

ಸುಂದರ ದೇಶ - ಸ್ವಿಟ್ಜರ್ಲಂಡ್

ಲೇಖಕರು : ಶ್ರೀ ನಾಡಿಗ ಕೃಷ್ಣಮೂರ್ತಿ



ಏಂಜೆಲ್‌ಬರ್ಗ (ಸ್ವಿಟ್ಜರ್ಲಂಡ್) ಪರ್ವತಶ್ರೇಣಿ

ಬೆಲ್ಜಿಯಂ ದೇಶದ ರಾಜಧಾನಿಯಾದ ಬ್ರುಸ್ಸೆಲ್ಸ್‌ನಿಂದ ಸ್ವಿಟ್ಜರ್ಲೆಂಡಿನ ಗಡಿಗೆ ಬರಲು ೧೨ ಘಂಟೆಗಳು ರೈಲು ಪ್ರಯಾಣ ಮಾಡಬೇಕು. ಬಾಲ್ ಅಥವಾ ಬಾಸಿಲ್ ಎಂಬಲ್ಲಿ ಸ್ವಿಸ್ ರೈಲಿಗೆ ಬದಲಾಯಿಸಬೇಕಾಗುತ್ತದೆ. ಇಲ್ಲಿಂದ ಜರ್ಮನಿಗೆ ಕೇವಲ ಸ್ವಲ್ಪ ದೂರ. ಬಾಲ್‌ನಲ್ಲಿ ಸ್ವಿಸ್ ಸರ್ಕಾರದಿಂದ ಪಾಸ್‌ಪೋರ್ಟು ಸುಂಕದಕಟ್ಟೆಪರೀಕ್ಷೆಯಾಗುತ್ತದೆ. ಇದು ಬರೀ "ನಾಮಕೇವಾಸ್ತೆ". ಬಾಲ್‌ಗೆ ಬಂದಕೂಡಲೇ ರೇಲ್ವೆ ಫಲಾಹಾರ ಮಂದಿರಗಳು, ಪುಸ್ತಕ ಅಂಗಡಿಗಳು, ವೃತ್ತಪತ್ರಿಕೆಗಳು ಮುಂತಾದುವನ್ನು ನೋಡಿ ಅಮೇರಿಕದ ನೆನಪಾಗುತ್ತದೆ.

ಎರಡೂ ಯುದ್ಧಗಳ ಸೆಳವಿಗೆ ಸಿಕ್ಕದ ಸ್ವಿಟ್ಜರ್ಲೆಂಡ್ ಯಾವ ರೀತಿಯಲ್ಲಿಯೂ ನಷ್ಟಕ್ಕೀಡಾಗಿಲ್ಲ. ಎಲ್ಲಿ ನೋಡಿದರೂ ಸಮೃದ್ಧಿ ಎದ್ದು ಕಾಣುತ್ತದೆ. ಆಹಾರ ಸಾಮುಗ್ರಿಗಳು, ವೈಜ್ಞಾನಿಕ ಬೆಳವಣಿಗೆ, ರಾಜಕೀಯ ಬೆಳವಣಿಗೆ ಮುಂತಾದ ವಿಷಯಗಳಲ್ಲಿ ಯಾವ ಧಕ್ಕೆಯೂ ತಗಲದೆ ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಬೀರಿ ಬೆಳಗುತ್ತಿದೆ. ಎಲ್ಲಕ್ಕೂ ಹೆಚ್ಚಾಗಿ ಸ್ವಿಟ್ಜರ್ಲೆಂಡಿಗೆ ನಿಸರ್ಗದತ್ತವಾಗಿರುವ ಪ್ರಕೃತಿಸೌಂದರ್ಯ, ನಾಡಿನ ಅಂದವನ್ನೂ ಕೀರ್ತಿಯನ್ನೂ ಹೆಚ್ಚಿಸಿದೆ. ನಾನು ಈ ವರೆಗೆ ನೋಡಿದ ದೇಶಗಳಲ್ಲೆಲ್ಲಾ ಸ್ವಿಟ್ಜರ್ಲೆಂಡ್ ಅತ್ಯಂತ ಸುಂದರವಾದ ದೇಶವೆಂದು ಭಾವನೆ ಬಂದಿದೆ. ಆ ಭಾವನೆಯನ್ನು ಕಾಶ್ಮೀರವನ್ನು ನೋಡಿದ ನಂತರ ಸ್ಥಿರಪಡಿಸುತ್ತೇನೆ.

ಮೈಸೂರಿಗಿಂತ ಸಣ್ಣದೇಶ ಸ್ವಿಟ್ಜರ್ಲೆಂಡ್. ಜನಸಂಖ್ಯೆ ಸುಮಾರು ೫೦ ಲಕ್ಷ. ಇಲ್ಲಿಯ ಜನ ಮೂರು ಭಾಷೆಗಳನ್ನಾಡುತ್ತಾರೆ. ಫ್ರೆಂಚ ಜರ್ಮನ್ ಮತ್ತು ಇಟಾಲಿಯನ್ ಮುಖ್ಯವಾದುವು. ಇಂಗ್ಲೀಷು ನಾಲ್ವರಲ್ಲಿಒಬ್ಬರಿಗೆ ತಿಳಿಯುತ್ತದೆ. ಸ್ವಿಸ್ ರಾಜ್ಯಘಟನೆ ಸಂಯುಕ್ತ ಘಟನೆಯಾದರೂ ಒಂದೊಂದು ಭಾಗಕ್ಕೂ ತನ್ನದೇ ಆದ ಸರ್ಕಾರವಿದೆ. ಆದರೆ ಅದು ಸಂಯುಕ್ತ ರಾಜ್ಯಾಂಗಕ್ಕೆ ಒಳಪಟ್ಟಿದೆ.

ಯುರೋಪಿನ ರಾಷ್ಟ್ರಗಳಲ್ಲೆಲ್ಲಾ ಅತ್ಯಂತ ಬೆಲೆಯುಳ್ಳ ನಾಣ್ಯ ಸ್ವಿಟ್ಜರ್ಲೆಂಡಿನದು. ಒಂದು ಇಂಗ್ಲಿಷ್ ಪೌಂಡಿಗೆ ೧೭ ಸ್ವಿಸ್ ಫ್ರಾಂಕುಗಳು ಸಿಕ್ಕುತ್ತವೆ. ಅವೇ ಫ್ರಾಂಕುಗಳನ್ನು ಸ್ವಿಟ್ಜರೆಂಡಿನಲ್ಲಿ ಇಂಗ್ಲೀಷ್ ಪೌಂಡಿಗೆ ಬದಲಾಯಿಸಿದರೆ ೧೦॥ ಫ್ರಾಂಕುಗಳಿಗೆ ಒಂದು ಪೌಂಡು ಸಿಕ್ಕುತ್ತದೆ. ಇಟಾಲಿಯನ್, ಫ್ರೆಂಚ ಮತ್ತು ಇತರ ದೇಶಗಳ ನಾಣ್ಯಗಳನ್ನು ಸ್ವಿಸ್ ಫ್ರಾಂಕುಗಳಿಂದ ಬದಲಾಯಿಸಿದರೆ ಒಂದಕ್ಕೆರಡರಷ್ಟು ಸಿಕ್ಕುತ್ತದೆ. ಸ್ವಿಸ್ ದೇಶದ ನಾಣ್ಯವನ್ನೂ "ಫ್ರಾಂಕ್" ಎನ್ನುತ್ತಾರೆ. ಘಟ್ಟಿ ನಾಣ್ಯವೆಂದು ಹೆಸರುಗೊಂಡ ಅಮೇರಿಕದ ಡಾಲರುಗಳು ಕೂಡ ಇಲ್ಲಿ ಕಡಿಮೆಗೆ ಮಾರಾಟವಾಗುತ್ತವೆ. "ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು" ಎನ್ನುವಂತೆ ಪುಟ್ಟ ರಾಷ್ಟ್ರವಾದರೂ ಘಟ್ಟಿ ರಾಷ್ಟ್ರ.

ರಾಜಧಾನಿ ಬರ್ನ್

ಬಾಲ್ ನಗರದಿಂದ ಕೇವಲ ಎರಡು ಘಂಟೆಗಳ ಕಾಲ ಪ್ರಯಾಣ. ರಾಜಧಾನಿ ಬರ್ನ್. ಸ್ವಿಟ್ಜರ್ಲೆಂಡಿನಲ್ಲಿ ಎಲ್ಲಿ ಪ್ರಯಾಣ ಮಾಡಿದರೂ ಎರಡುಮೂರು ತಾಸುಗಳಲ್ಲಿ ಒಂದೊಂದು ಮುಖ್ಯ ನಗರವನ್ನು ಮುಟ್ಟಬಹುದು. ಬೆಳಿಗ್ಗೆ ಒಂದೂರಿನಿಂದ ಹೊರಟರೆ ಸಾಯಂಕಾಲದ ವೇಳೆಯಲ್ಲಿ ಸ್ವಿಟ್ಜರ್ಲೆಂಡನ್ನೆಲ್ಲಾ ಸುತ್ತಿ ಪುನಃ ಅದೇ ಊರಿಗೆ ಬಂದು ತಂಗಿ, "ಭೂಮಿ ಗುಂಡಾಗಿದೆ" ಎಂಬುದನ್ನು ಸ್ವತಃ ಅರಿತುಕೊಳ್ಳಬಹುದು. ರೇಲ್ವೆಪ್ರಯಾಣ ಅತ್ಯಂತ ಸುಖಕರ. ವಿದ್ಯುಚ್ಛಕ್ತಿಯಿಂದ ರೈಲುಗಳು ನಡೆಯುತ್ತವೆ. ರೈಲುಗಳ ವೇಗವೂ ಹೆಚ್ಚು. ಕಾಲಕ್ಕೆ ಸರಿಯಾಗಿ ನಡೆದುಕೊಳ್ಳುತ್ತವೆ. ಇಲ್ಲಿ ರೈಲಿನಲ್ಲಿ ಪ್ರಯಾಣ ಮಾಡಲು ಆನಂದವಾಗುತ್ತದೆ.

ಸ್ವಿಟ್ಜರ್ಲೆಂಡಿನಲ್ಲಿ ಬೇಕಾದ ಆಹಾರಸಾಮುಗ್ರಿ ಸಿಕ್ಕುವುದು. ಹಾಲು, ಹಣ್ಣು, ರೊಟ್ಟಿ, ಮಾಂಸ, ಬೇಕಾದಷ್ಟು. ಇಲ್ಲಿ ಅಕ್ಕಿಯೂ ಯಥೇಷ್ಟವಾಗಿ ಸಿಕ್ಕುವುದು. ಬರ್ನ್ ನಗರದಲ್ಲಿ ಶಾಕಾಹಾರಿಯಾದ ಒಂದು ಫಲಾಹಾರ ಮಂದಿರವಿದೆ. ಇಲ್ಲಿ ಅನ್ನ, ಟೋಮಾಟೋ ಸಾರು, ಮೊಸರು ಸಿಕ್ಕುತ್ತವೆ. ಒಂದೂಟಕ್ಕೆ ನಮ್ಮಲ್ಲಿಯ ೫ ರೂ. ಗಳು ಬೇಕಾಗುತ್ತವೆ. (ನಾಣ್ಯದ ವಿಚಾರ ಬರೆಯುತ್ತ ನಮ್ಮ ರೂಪಾಯಿಯ ಬೆಲೆಯನ್ನೇ ಮರೆತೆ. ಒಂದು ರೂಪಾಯಿಗೆ ೧। ಫ್ರ್ಯಾಂಕುಗಳು ಸಿಕ್ಕುತ್ತವೆ). ಇಲ್ಲಿ ಒಳ್ಳೆಯ ಕಾಫಿ ಸಿಕ್ಕುತ್ತದೆ. ಕಾಫಿಗೆ ಹಾಲು ಬೇರೆ ಕೊಡುವಾಗ ಕಾಫಿ ಕಷಾಯಕ್ಕಿಂತ ಅದನ್ನೇ ಹೆಚ್ಚು ಕೊಡುತ್ತಾರೆ. ಇಲ್ಲಿ ದ್ರಾಕ್ಷೆ ಬಹಳ ಬೆಳೆಯುತ್ತಾರೆ. ಅಗ್ಗವಾಗಿಯೂ ಸಿಕ್ಕುತ್ತದೆ.

ಬರ್ನದಲ್ಲಿ ಭಾರತದ ರಾಯಭಾರಿಯ ಕಚೇರಿಯಿದೆ. ಮುಂಬಯಿಯ ಸುಪ್ರಸಿದ್ಧ ವಕೀಲರೂ ಕಾಂಗ್ರೆಸ ನಾಯಕರೂ ಆಗಿದ್ದ ಶ್ರೀ ಭೂಲಾಭಾಯಿ ದೇಸಾಯಿಯವರ ಮಕ್ಕಳಾದ ಶ್ರೀ ಧೀರೂಭಾಯಿ ದೇಸಾಯರು ಸ್ವಿಟ್ಜರ್ಲೆಂಡಿಗೆ ಭಾರತದ ರಾಯಭಾರಿಗಳು. ತುಂಬಿದ ಕೊಡ ಮಹಾರಾಯರು. ಬರ್ನಗೆ ಬಂದ ಭಾರತೀಯರ ಬಗ್ಗೆ ವಿಶೇಷ ಆಸಕ್ತಿ ವಹಿಸಿ ತಮ್ಮ ಕೈಲಾದ ಸಹಾಯ ಮಾಡುತ್ತಾರೆ. ಸಾಮಾನ್ಯ ಜನರೊಡನೆ ಬೆರೆತು ಅವರಲ್ಲಿ ಒಬ್ಬರಾಗುತ್ತಾರೆ ಇಲ್ಲಿಯ ಕಚೇರಿಯಲ್ಲಿ ೧೨ ಭಾರತೀಯರಿದ್ದಾರೆ. ಹಿಂದೆ ಕಮ್ಯೂನಿಸ್ಟರಾಗಿದ್ದು ಪುನಃ ಕಾಂಗ್ರೆಸ್ಸಿಗೆ ಸೇರಿದ ಸೋಲಿ ಬಾಟ್ಲಿವಾಲಾ ಇಲ್ಲಿಯ ರಾಯಭಾರಿಗೆ ಪತ್ರಿಕಾಕಾರ್ಯದರ್ಶಿ.

ನಾ ಬರ್ನ ನಗರಕ್ಕೆ ಹೋದಾಗ್ಗೆ ಭಾರತೀಯ ಕಲಾಪ್ರದರ್ಶನವೊಂದು ನಡೆಯಿತು. ಭಾರತದ ಸುಪ್ರಸಿದ್ಧ ನೃತ್ಯಕಾರ ಶ್ರೀರಾಮಗೋಪಾಲರವರು ತಮ್ಮ ಬಳಗವೊಂದನ್ನು ಯುರೋಪಿಗೆ ತಂದಿದ್ದಾರೆ. ಈ ನೃತ್ಯದ ಬಳಗದಲ್ಲಿ ಮೈಸೂರಿನ ಸಂಗೀತರತ್ನ ಶ್ರೀ ನಾಗರಾಜರಾಯರು, ಕೊಳಲು ವಿದ್ವಾನ್ ಶ್ರೀ ವೇಣು ಗೋಪಾಲರವರು ಇದ್ದಾರೆ. ಶ್ರೀ ನಾಗರಾಜರಾಯರು ವೀಣೆಯನ್ನು ಬಾರಿಸಿ ಸ್ವಿಟ್ಜರ್ಲೆಂಡಿನ ಜನಗಳ ಹೃದಯದ ತಂತಿಯನ್ನು ಮಿಡಿದುಬಿಟ್ಟರು. ಮರುದಿನ ಕಾಂಗ್ರೆಸ್ ಹಾಲ್‌ನಲ್ಲಿ ಬಹಿರಂಗ ನೃತ್ಯಪ್ರದರ್ಶನವಾಯಿತು. ಸುಮಾರು ಎರಡು ಸಾವಿರ ಜನ ದುಡ್ಡು ಕೊಟ್ಟು ಭಾರತೀಯ ಕಲೆಯನ್ನು ನೋಡಲು ಬಂದಿದ್ದರು. ಸ್ವಿಟ್ಜರ್ಲೆಂಡಿನ ಸಂಯುಕ್ತ ಸಭೆಯ ಅಧ್ಯಕ್ಷರೂ ಮಂತ್ರಿಗಳೂ ಬಂದಿದ್ದರು. ಅಂದಿನ ನೃತ್ಯ, ಸಂಗೀತ ನೋಡಿ ಕೇಳಿದ ಸ್ವಿಸ್ ಜನ ಮುಗ್ಧರಾದ ದೃಶ್ಯ ನನ್ನ ಕಣ್ಣಿಗೆ ಇನ್ನೂ ಕಟ್ಟಿದಂತಿದೆ.

ಬರ್ನ ನಗರವಲ್ಲೊಂದು ಗಡಿಯಾರವನ್ನು ಕೊಂಡೆ. ಬಹಳ ದಿನಗಳಿಂದ ನಮ್ಮ ಭಾವಂದಿರು ತಮಗೊಂದು ಗಡಿಯಾರ ಬೇಕೆಂದು ಹೇಳುತ್ತಿದ್ದರು. ಅವರ ಬಯಕೆಯನ್ನು ತೀರಿಸಿದೆ. ಫ್ರಾನ್ಸಿನಲ್ಲಿ ಮೂರುಮಾರಿಗೊಂದು ಹೆಂಡದಂಗಡಿಯಾದರೆ ಸ್ವಿಟ್ಜರ್ಲೆಂಡಿನಲ್ಲಿ ಮೂರು ಮಾರಿಗೊಂದು ಗಡಿಯಾರದ ಅಂಗಡಿಯನ್ನು ನೋಡಬಹುದು. ಅತಿ ಸೂಕ್ಷ್ಮವಾದ ಸಾಮಾನುಗಳನ್ನು ತಯಾರಿಸುವದರಲ್ಲಿ ಹೆಸರುವಾಸಿ ಈ ಜನ. ಅಂತೆಯೇ ಸ್ವಿಟ್ಜರ್ಲೆಂಡಿನ ಹಳ್ಳಿಗಳಲ್ಲಿ ಗಡಿಯಾರ ತಯಾರಿಸುವ ಕೈಗಾರಿಕೆ ಬಹುವಿಧವಾಗಿ ನಾನಾರೂಪಗಳಲ್ಲಿ ಬೆಳೆದಿದೆ. ಈ ಕುಶಲ ವಿದ್ಯೆಯನ್ನು ಕಲಿತು ಭಾರತೀಯ ಹಳ್ಳಿಗಳಲ್ಲಿಯೂ ಗಡಿಯಾರದ ಕೈಗಾರಿಕೆಯನ್ನು ಪ್ರಾರಂಭ ಮಾಡಬಹುದು.

ಜೂರಿಕ್

ಮರುದಿನ ಬೆಳಿಗ್ಗೆ ಸ್ವಿಟ್ಜರ್ಲೆಂಡಿನ ಔದ್ಯೋಗಿಕ ನಗರವಾದ ಜೂರಿಕ್ ನಗರಕ್ಕೆ ಪ್ರಯಾಣ ಬೆಳೆಸಿದೆ. ಜೂರಿಕ್ ನಗರವು ರಾಷ್ಟ್ರದ ದೊಡ್ಡದಾದ ಮುಖ್ಯನಗರ. ಸುಮಾರು ೩ ಲಕ್ಷ ಜನ ಇಲ್ಲಿ ವಾಸ ಮಾಡುತ್ತಾರೆ. ಜೂರಿಕ್ ನಗರ, ಜೂರಿಕ್ ಸರೋವರದ ಅಂಚಿನಲ್ಲಿದೆ. ಮೇಲು ಭಾಗದಲ್ಲಿ ಒಂದು ಸಣ್ಣ ಪರ್ವತ. ಪರ್ವತದ ಮೇಲೆಲ್ಲಾ ಮನೆಗಳನ್ನು ಕಟ್ಟಿದ್ದಾರೆ. ಜೂರಿಕ್ ಸರೋವರ ೪೦—೫೦ ಮೈಲು ಉದ್ದವಿದ್ದು ಅನೇಕ ಊರುಗಳಿಗೆ ಸಣ್ಣ ದೋಣಿಗಳ ಮುಖಾಂತರವಾಗಿ ಸರೋವರದಲ್ಲಿ ಪ್ರಯಾಣ ಮಾಡಬಹುದು.

ಜೂರಿಕ್‌ನಲ್ಲಿ ಸುಪ್ರಸಿದ್ಧವಾದ ವಿದ್ಯಾ ಸಂಸ್ಥೆಗಳಿವೆ ಅದರಲ್ಲಿ ಜೂರಿಕ್ ವಿಶ್ವವಿದ್ಯಾನಿಲಯ ಬಹುಮುಖ್ಯವಾಗಿದೆ. ಈಗ ೧೨ ಜನ ಭಾರತೀಯ ವಿದ್ಯಾರ್ಥಿಗಳು ಇಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಕನ್ನಡ ನಾಡಿನ ಸಾಹಿತಿ ಶ್ರೀ ಶಿವರಾಮ ಕಾರಂತರ ತಮ್ಮಂದಿರಾದ ಶ್ರೀ ಕೆ. ಬಿ. ಕಾರಂತರು ಇಲ್ಲಿಯೇ ವಿದ್ಯಾರ್ಜನೆ ಮಾಡುತ್ತಿದ್ದಾರೆ. ಅವರ ಸೌಜನ್ಯದ ಫಲವಾಗಿ ಜೂರಿಕ್ ನಗರವನ್ನು ನೋಡಿ ಅಲ್ಲಿಯ ಪ್ರಕೃತಿ ಸೌಂದರ್ಯದ ಸವಿಯನ್ನು ಸವಿದೆ.

ಜಿನೀವಾ

ಅಂತರ ರಾಷ್ಟ್ರೀಯ ಪ್ರಖ್ಯಾತಿಯನ್ನು ಪಡೆದ ಜಿನೀವಾನಗರ ನನ್ನ ಮುಂದಿನ ಪಟ್ಟಣವಾಗಿತ್ತು. ಜೂರಿಕ್‌ದಿಂದ ಬರ್ನ ಮಾರ್ಗವಾಗಿ ಮೂರು ಘಂಟೆಗಳ ಕಾಲದ ಪ್ರಯಾಣ ಜಿನೀವಾ. ಮೊದಲನೆಯ ಮಹಾಯುದ್ಧಾನಂತರ ಪ್ರಪಂಚದ ಶಾಂತಿಯನ್ನು ಕಾಪಾಡಲು, ಅಮೇರಿಕದ ಅಧ್ಯಕ್ಷ ವಿಲ್‌ಸನ್‌ರ ಪ್ರಯತ್ನದ ಫಲವಾಗಿ ಜನಿಸಿದ ಕೂಟ—ರಾಷ್ಟ್ರಸಂಘ ಸ್ಥಾಪಿತವಾಗಿದ್ದುದು ಇಲ್ಲಿಯೇ.

ಜಿನೀವಾ ನಗರದ ರಮ್ಯತೆಯನ್ನು ಹೆಚ್ಚಿಸಿರುವುದು ಜಿನೀವಾದಲ್ಲಿರುವ ಸರೋವರ ಸ್ವಿಟ್ಜರ್ಲೆಂಡಿನ ನಗರಗಳಲ್ಲೆಲ್ಲಾ ಜಿನೀವಾ ಬಹು ಅಂದವಾದ ನಗರವೆಂದು ನನ್ನ ಭಾವನೆ. ಜಿನೀವಾದ ಅಂತರ ರಾಷ್ಟ್ರೀಯ ಪ್ರಾಮುಖ್ಯತೆ ನಾನಾ ದೇಶದ ಪ್ರವಾಸಿಕರನ್ನು ಬರಮಾಡಿಕೊಳ್ಳುತ್ತದೆ. ಎರಡನೆಯ ಮಹಾಯುದ್ಧಾನಂತರ ಪ್ರಪಂಚದ ಶಾಂತಿಯನ್ನು ಮತ್ತೊಮ್ಮೆ ಸ್ಥಾಪಿಸಲು ಸ್ಥಾಪಿತವಾದ ಯುನೈಟೆಡ್ ರಾಷ್ಟ್ರ ಸಂಘ ಜಿನೀವಾದಲ್ಲಿರದೆ ನ್ಯೂಯಾರ್ಕಿಗೆ ಹೋದರೂ ಅಂತರರಾಷ್ಟ್ರೀಯ ಕೂಲಿಕಾರ ಸಂಘವು ಜಿನೀವಾದಲ್ಲಿದೆಯಾದ ಕಾರಣ ಆಗಾಗ್ಗೆ ಅಂತರರಾಷ್ಟ್ರೀಯ ಸಮ್ಮೇಳನಗಳು ಇಲ್ಲಿ ನಡೆಯುತ್ತವೆ. ಹಳೆಯ ರಾಷ್ಟ್ರಸಂಘದ ಕಟ್ಟಡದಲ್ಲಿಯೇ ಇತರ ಅಂತರರಾಷ್ಟ್ರೀಯ ಸಮ್ಮೇಳನಗಳು ನಡೆಯುತ್ತವೆ. ನಾ ಹೋದಾಗ್ಗೆ ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನವೂ ಅಂತರರಾಷ್ಟ್ರೀಯ ಮಹಾಜನ ಸಮ್ಮೇಳನವೂ ನಡೆಯುತ್ತಿದ್ದವು. ನಮ್ಮ ಪ್ರತಿನಿಧಿಗಳಾಗಿ ಶ್ರೀ ರಾಘವನ್ ಪಿಳ್ಳೆ, ಶ್ರೀ ಬಿ. ಪಿ. ಅಡಾರ್‌ಕರ್, ಶ್ರೀ ಬಿ. ಶಿವರಾಯರು ಭಾಗವಹಿಸಿದ್ದರು.

ಲಾಸೆನ್

ಜಿನೀವಾದಿಂದ ಲಾಸೆನ್ ಕೇವಲ ೩೦ ಮೈಲುಗಳ [illegible] ಸರೋವರದ [illegible] ಮುಖಾಂತರವಾಗಿ ಸಣ್ಣ ದೋಣಿಗಳಲ್ಲಿ [illegible] ಹೋಗಬಹುದು. [illegible]


ಲಾಸೆನ್, ಆರೋಗ್ಯದ ಸ್ಥಳ. ಆರೋಗ್ಯವನ್ನು ಪಡೆಯಲು ನಾನಾ ದೇಶಗಳಿಂದ ಇಲ್ಲಿಗೆ ಜನರು ಬರುತ್ತಾರೆ. ನಮ್ಮ ಮುಖ್ಯಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರೂರವರ ಪತ್ನಿ ಶ್ರೀಮತಿ ಕಮಲಾ ನೆಹರೂರವರು ತೀರಿಕೊಂಡದ್ದು ಇಲ್ಲಿಯ ಆರೋಗ್ಯಧಾಮವೊಂದರಲ್ಲಿ. [illegible] ಲಾಸೆನ್ ಊರು ಗುಡ್ಡದ ಮೇಲೆ ಇದೆ. [illegible] ಸುಂದರವಾದ ದ್ರಾಕ್ಷೆ ಮತ್ತು [illegible] ಬೆಳೆಯುವ ಪ್ರದೇಶಗಳಲ್ಲಿ ಸುತ್ತಾಡಿದೆವು. [illegible]ಗಿಯೂ ಪ್ರಾಕೃತಿಕ ಸೌಂದರ್ಯದ ಉತ್ಕಟ ಭಾವನೆಯನ್ನು ಅದು ಬೆಳೆಸಿತು. ಅದು ಶಾಂತತೆಯ ಪ್ರಭಾವ ಬೀರಿದಷ್ಟು ಇನ್ನಾವ ಸ್ಥಳಗಳೂ ಬೀರಿದಂತೆ ತೋರಲಿಲ್ಲ. ಪ್ರಕೃತಿ ದೇವಿಯ ನೆಲೆವೀಡಾದ ಆ ಸ್ಥಳಗಳು ಎಂದೂ ಇಲ್ಲದ ಶಾಂತಿಯನ್ನು ಮನಸ್ಸಿಗೆ ತಂದುವು. ಲಾಸೆನ ಸ್ವಿಟ್ಜರ್ಲೆಂಡಿನ ಆರೋಗ್ಯ ಕೇಂದ್ರ ವೊಂದೇ ಅಲ್ಲ. ಶಾಂತತೆಯ ನೆಲೆವೀಡೂ ಆಹುದು.

ಬ್ರಿಗ್

ಬ್ರಿಗ್ ಎಂಬುದೊಂದು ಸ್ವಿಸ್ ದೇಶದ ಸಣ್ಣ ಹಳ್ಳಿ, ಸ್ವಿಸ್ ಇಟಾಲಿಯನ್ ಗಡಿಯಲ್ಲಿದೆ. ಯುರೋಪಿನ ರೈಲುಗಳು ಸಂಧಿಸುವ ರೇಲ್ವೆ ಜಂಕ್ಸನ್. ಬ್ರಿಗ್ ಹಳ್ಳಿಯ ನಾಲ್ಕು ಕಡೆಯೂ ಪರ್ವತಗಳಿವೆ. ಲಾಸೆನೆಯಿಂದ ಬ್ರಿಗ್‌ಗೆ ಎರಡು ಗಂಟೆಗಳ ಪ್ರಯಾಣ. ದಾರಿ ಉದ್ದಕ್ಕೂ ಸರೋವರದ ದಡದಲ್ಲೇ ರೈಲು ಹೋಗುತ್ತದೆ. ಪ್ರಯಾಣ ಮಾಡುವಾಗ್ಗೆ ಬಹು ಆನಂದವಾಗುತ್ತದೆ.

ನಾನು ಬ್ರಿಗ್‌ನಿಂದ ಇಟಲಿ ದೇಶಕ್ಕೆ ಹೋಗಬೇಕಾದ್ದರಿಂದ ಬ್ರಿಗ್‌ನಲ್ಲಿರೈಲುಬದಲಾಯಿಸಬೇಕಿತ್ತು. ನಾಲ್ಕು ತಾಸು ವಿರಾಮವೂ ಇತ್ತು. ಆ ವೇಳೆಯಲ್ಲಿ ಹಳ್ಳಿಯನ್ನು ಸುತ್ತಿದೆ. ಹಳ್ಳಿಯ ತುದಿಯಲ್ಲಿಒಂದು ಬೆಟ್ಟ. ಅಲ್ಲೊಬ್ಬ ಸ್ವಿಸ್ ರೈತ ಮನೆಯೊಂದನ್ನು ಕಟ್ಟುತ್ತಿದ್ದ. ಆ ಮನೆಯನ್ನು ಬರೀ ಕೇಗದ ಮರದಹಲಿಗೆಗಳಿಂದ ಜೋಡಿಸುತ್ತಿದ್ದ; ಮಣ್ಣಾಗಲಿ ಇಟ್ಟಂಗಿಯಾಗಲೀ ಗಾರೆಯಾಗಲೀ ಇರಲಿಲ್ಲ. ಕಿಟಕಿಗಳನ್ನು ಕೂಡಮರದಿಂದಲೇ ತಯಾರಿಸಿದ್ದರು. ಇಂತಹ ಮನೆಗಳು ನೋಡುವದಕ್ಕೂ ಅಂದವಾಗಿ ಕಾಣುತ್ತವೆ. ಆ ರೈತ ನನ್ನನ್ನು ನೋಡಿ ಕೈಮಾಡಿದ. ಆತನಿಗೆಕೊಂಚ ಹರಕು ಮುರುಕು ಇಂಗ್ಲೀಷ ಬರುತ್ತಿತ್ತು. ನಾನು ಭಾರತೀಯನೆಂದ ಕೂಡಲೇ ಆತನಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ತಮ್ಮ ಮನೆಗೆ ಕರೆದೊಯ್ದು ನನಗೆ ಹಾಲು ಕೊಟ್ಟು, ಅನಂತರ ತನ್ನ ಹೊಲವನ್ನೆಲ್ಲ ತೋರಿಸಿದ. ಪುನಃ ಮನೆಗೆಬಂದಾಗ ತನ್ನಕೋಣೆಗೆ ಕರೆದೊಯ್ದ. ಗೋಡೆಯ ಮೇಲೆ ಪ್ರಪಂಚದ ಅನೇಕ ಮಹನೀಯರ ಭಾವಚಿತ್ರಗಳನ್ನು ತೂಗಹಾಕಿದ್ದ.

(೬ ನೇ ಪುಟಕ್ಕೆ)



ಜಿನೀವಾದಲ್ಲಿರುವ [illegible] ಭವನದ ದೃಶ್ಯ

ವಿವಿಧ ಪ್ರಪಂಚ

ಧೀರೆ

ಸ್ಕಾಟ್ಲೆಂಡಿನಲ್ಲಿ ಒಬ್ಬಳು ಕ್ರಿಸ್ತಿನ ಅಂಗಡಿ ಇಟ್ಟಿದ್ದಳು. ಅವಳು ತನ್ನ ಬೇಕಾದವರಿಗಾಗಿ ಮುಟ್ಟಾಗಿ ಹೋಗುವವಳಂತೆ. ಅವಳ ಹಾಗೆ ಮಾಡಿದರೆ ತನ್ನ ಕುಟುಂಬದ ಜೀವನ ಭಾರ ತಪ್ಪುವುದೆಂದು ಬಹಳ ಚಿಂತಿಸಿಕೊಂಡಳು. ಅಷ್ಟರಲ್ಲಿ ಅವಳ ಜೊತೆ ಮುಂದೆ ಬಂದು ಸಾವಿರ ಕ್ರಿಸ್ತಿಯನ್ನು ಮಾಡುವ ಅವನನ್ನು ಅವಳಿಂದಲೇ ಕಲಿತು ಅಂಗಡಿಯನ್ನು ಮುಚ್ಚದೆ ವ್ಯಾಪಾರವನ್ನು ಸಾಗಿಸಿಕೊಂಡು ಹೋಗುತ್ತಿದ್ದಾಳೆಂದು ತಿಳಿಯುತ್ತದೆ. ಇಂಥ ಧೀರ ಸ್ತ್ರೀಯರು ಮಾತ್ರ ಗಂಡಸರಿಗೂ ಬೇಕಾದಷ್ಟು ಹೆಸರಾಗಿ ತಮ್ಮ ಬಾಳನ್ನು ಸಾರ್ಥಕಗೊಳಿಸಿಕೊಳ್ಳಬಲ್ಲರಲ್ಲದೆ ಬೇರೆ ಯಾರೂ ಅಲ್ಲ. ಹಾಂಥಿಕ ಮಾತನಾಡುವ ಗಳಿಗೆ ಅಂಟಿಕೊಂಡಿರುವವರು ಕೂಗಿಗೆ ಬೇರೆ ಭೂಮಿಗೆ ಭಾರ ಎನ್ನಿಸುವರೆಂಬುದನ್ನು ಬಿಟ್ಟು ಬೇರೆ ವಿಶೇಷತೆ ಗಮನಿಸಬೇಕು.

ಗಂಡಸರ ಅಲಂಕಾರ

ಅಲಂಕರಣ ಸ್ತ್ರೀಯರಿಗೆ ಇಲ್ಲಿಯ ವರೆಗೆ ಮೀಸಲಾಗಿತ್ತು. ಆದರಿಂದು ಕೆನಡದ ಮಾಂಟ್ರಿಯಲ್ ನಗರದಲ್ಲಿ ನಡೆದ ಕೂದಲು ಗಾರರ (Hair dressers) ಸಮ್ಮೇಳನದಲ್ಲಿ ಮೊದಲು ಕೇವಲ ಹೆಂಗಸರು ತಮ್ಮಲ್ಲಿಗೆ ಬರುತ್ತಿದ್ದರೆಂದೂ ಈಗೀಗ ಗಂಡಸರೂ ಹೆಚ್ಚು ಜಾಗ್ರತೆಯಾಗಿ ಮುಖಾಲಂಕಾರ ಮಾಡಿಸಿಕೊಳ್ಳುವುದರ ಜೊತೆಗೆ ಕೇಶ ಸಂಸ್ಕಾರ, ಚರ್ಮ ಸಂಸ್ಕಾರ ಮಾಡಿಸಿಕೊಳ್ಳಲು ಬರುತ್ತಿರುವ ರೆಂದೂ ವರದಿ ಮಾಡಲಾಯಿತು.

ಮನಃಶಾಸ್ತ್ರಜ್ಞರು ಇದು ಉತ್ತಮವೆನ್ನದಿರಲಾರರು. ಸ್ತ್ರೀಯರ ವಾಕ್ಯ ಮತ್ತು ಸಾಂಘಿಕತೆಗೆ ಕಾರಣವಾದ ಅವರ ಶಿಂಗಾರವನ್ನು ಗಂಡಸರು ಮೀರಿಸಹತ್ತಿದುದು ಅವರ ಆ ಗುಣಗಳ ನಿವಾರಣೆಗೆ ಸಹಕಾರಿಯಾಗದಿರದು. ಆದರಿಗೆ ಅದರಿಂದುಂಟಾಗಿದ್ದ ಸ್ವಾರ್ಥ ಮತ್ತು ಸೌಂದರ್ಯಾವಲೋಕನ ಪ್ರವೃತ್ತಿಯು ಲೋಪ ಇವುಗಳ ಧಾರಿಸಿ ಗಂಡಸರನ್ನು ಮಾರುವ ದುರ್ಬುದ್ಧಿ ಪಶ್ಚಾತ್ಯ ಅಮೇರಿಕದ ಚಂಚಲೆಯರು ಸುಖ ಶಾಂತಿಗಳನ್ನು ಪಡೆವಂತಾಗದಿರದು.

ಬಾಯಿ-ಚಿತ್ರಗಾರ

ಬಲಗಡೆಗೆ ಪಾರ್ಶ್ವವಾಯು ಹಿಡಿದು ಬಲಗೈ ಅತ್ಯುಪಯೋಗವಿಲ್ಲದಾಗ ಹಾಕಿನ್ಸ ಎಂಬ ಆಸ್ಟ್ರೇಲಿಯನ್ನನು ಮೊದಲ ಮಹಾಯುದ್ಧದಲ್ಲಿ ಭಾಗವಹಿಸಿದ. ಅಗ ಮತ್ತೊಂದು ಕೈಯೂ ದುರ್ಬಲವಾಯಿತು. ೨೮ ಸಲ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೂ ಪ್ರಯೋಜನವಾಗಲಿಲ್ಲ. ಆದರೆ ಅವನು ಅಷ್ಟರಲ್ಲಿ ತಾನು ಕೈಗಳಿಂದ ಬಿಡಿಸುತ್ತಿದ್ದ ಬಣ್ಣದ ಚಿತ್ರಗಳನ್ನು ಬಾಯಲ್ಲಿ ಕುಂಚ ಹಿಡಿದು ಬಿಡಿಸಲು ಕಲಿತುಬಿಟ್ಟಿದ್ದ! ಅವನೀಗ ಪ್ರಸಿದ್ಧ ಚಿತ್ರಗಾರನೆನಿಸಿದ್ದಾನೆ. ಅವನಿಗೆ ಹೆಂಡತಿ ಮಗಳು ಮತ್ತು ಇಬ್ಬರು ಗಂಡುಮಕ್ಕಳು ಇದ್ದಾರೆ.

ಚುಂಬನಮಾಪಕ

ಚುಂಬನದ ಆಳವನ್ನು ಅಳೆಯುವ ಒಂದು ಯಂತ್ರವನ್ನು ಕಾಂಟೇರಿಯೋದ ವೈದ್ಯ ಶಾಸ್ತ್ರಜ್ಞರುಗಳು ನಿರ್ಮಿಸಿದ್ದಾರೆ. ಅದರಲ್ಲಿ ಒಂದು ಮೀಟರಿದೆ, ಅದಕ್ಕೊಂದು ತಂತಿ ಅಂಟಿಸಿದೆ. ಆ ತಂತಿಯ ಒಂದು ತುದಿಯನ್ನು ದಂಪತಿಗಳ ತುಟಿಗಳ ನಡುವೆ ಇಟ್ಟಾಗ "ಅಲ್ಫಾ" ತರಂಗಗಳ ಮೂಲಕ ಚುಂಬನದ ಒತ್ತಡದ ಡಿಗ್ರಿಯನ್ನು ಅದು ತೋರಿಸುತ್ತದೆ. ಮೀಟರಿನ ಮುಳ್ಳು ಒಂದು ನಿರ್ದಿಷ್ಟ ಸ್ಥಾನಕ್ಕೆ ಬಂದಾಗ ಒಂದು ಕೆಂಪು ದೀಪವಿಯನ್ನು ಅದು ಎಬ್ಬಿಸಿ ಬಿಡುತ್ತದಂತೆ!

ಅತಿ ದೊಡ್ಡ ಮರಕತ

ಮರಕತ ಅಥವಾ ನೀಲಮಣಿ ಪಚ್ಚೆರತ್ನಗಳ ಪೈಕಿ ಒಂದು ಹಾಳ್ಯವರು ಕೇಳುತ್ತಾರೆ. ಇಂಥ ಒಂದು ರತ್ನ ಸೈಲ್ಯಾಂಡಿನಲ್ಲಿ ಒಂದು ನಿಜಾಮರಿಯಾತ್ರಿಗೆ ದೊರೆತ ಒಬ್ಬಾತನಿಗೆ ಸಿಕ್ಕಿತಂತೆ. ಅದರ ಬೆಲೆ ೧ ಲಕ್ಷ ಪೌಂಡು. ಅದು ಇಡಿ ಜಗತ್ತಿನಲ್ಲಿ ಅತ್ಯಂತ ಹೆಚ್ಚು ಬೆಲೆಯುಳ್ಳ ಮರಕತವಂತೆ!

ಅಮೇರಿಕದ ಚಂಚಲೆಯರು!

ನ್ಯೂಯಾರ್ಕದಲ್ಲಿರುವ ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ನ್ಯೂರಾನ್ ರಿಲೇಶನ್ಸಿನ ನಿರ್ದೇಶಕರಾದ ಡಾ. ಜೇಮ್ಸ್ ಎಫ್. ಬೆಂಡರರು, ಅಮೇರಿಕದಲ್ಲಿ ಇನ್ನು ಮುಂದೆ ಸುಖಕರವಾದ ಮದುವೆ ನಡೆಯುವುದು ಅಸಾಧ್ಯ ಎನ್ನುತ್ತಾರೆ. ಕಾರಣವೇನೆಂದರೆ ಅಲ್ಲಿಯ ಹುಡುಗಿಯರು ಬುದ್ಧಿ ಬಂದಾಗಿನಿಂದ ಸುಮಾರು ೧೦ ವರ್ಷಗಳ ವರೆಗೆ ಅತ್ಯಂತ ಚಂಚಲರಾಗಿ, ಹುಡುಗು ಬುದ್ಧಿ, ಅವರೆ ಅದಕ್ಕಾಗಿ ಗಂಡಸನ್ನು ಮಾಡಿಕೊಳ್ಳ ಬೇಕೋ ಸ್ವತಂತ್ರ ಒಬ್ಬಂಟಿಗಳಾಗಿ ಇರಬೇಕೋ ಎಂಬುದನ್ನು ನಿರ್ಣಯಿಸಲಾರದೆ ಮತ್ತೆ ಮತ್ತೆ ಗಂಡಂದಿರನ್ನು ದೂರುವ ಮತ್ತು ವಿವಾಹವಿಚ್ಛೇದ ಮಾಡಿಕೊಳ್ಳುವ ಪ್ರವೃತ್ತಿಯುಂಟಾಗಿದೆ. ಅವರಿಗೆ ಹೀಗೆ ಚಾಂಚಲ್ಯವುಂಟಾಗಲು ಅವರ ಅಜ್ಞಾನವೇ ಕಾರಣವೆಂದು ಡಾಕ್ಟರರು ಅಭಿಪ್ರಾಯ ಪಟ್ಟಿದ್ದಾರೆ. ಭಾರತದಲ್ಲಿ ಗಂಡನ ಕ್ರೌರ್ಯದಿಂದ ಬಿಡಿಸಿಕೊಳ್ಳಬೇಕೆಂಬ ಸ್ತ್ರೀವಾದಿಗಳಿತ್ತ ಲಕ್ಷ್ಯ ಹಾಕಬೇಕು. ಕ್ರೌರ್ಯ ಕಾಠಿಣ್ಯಗಳಿಗೆ ತಮ್ಮ ಚಾಂಚಲ್ಯ ಅಜ್ಞಾನಗಳೇ ಪ್ರಚೋದಕಗಳೆಂಬುದನ್ನು ಮನಗಾಣದ ಸ್ತ್ರೀಯರು ಸ್ವತಃ ಜೀವನಕಂಟಕರಾಗುವರೆಂಬುದಕ್ಕೆ ಮೇಲಿನದಕ್ಕಿಂತ ಹೆಚ್ಚಿನ ಸಾಕ್ಷಿ ಬೇಕಿಲ್ಲ. ಗಂಡಸರೊಡನೆ ಸಮಾನತೆಯನ್ನು ಬೇಡುವ ಮೊದಲು ಅದಕ್ಕೆ ಅರ್ಹತೆಯೆನಿಸುವ ಸದಸದ್ವಿವೇಕವನ್ನು ಬೆಳೆಸಿಕೊಂಬ ವಿದ್ಯೆಯನ್ನು ಹಿಂದುಸ್ತಾನದ ತಾಯಂದಿರು ತಮ್ಮ ಹೆಣ್ಣುಮಕ್ಕಳಿಗೆ ಕೊಡಬೇಕು ಎಂಬುದು ಅನಿವಾರ್ಯವಲ್ಲವೆ?

ಪಾಶಾಣ ...

ಶಾಲದಲ್ಲಿ ಪಠಶಾಲಾ ದಾಸ್ಯಕ್ಕೆ ಬೋಧಕರು ಇದ್ದು ಬಾಲರ ಮನಶ್ಶಿಕ್ಷಣಕ್ಕೆ ಪ್ರತಿಕೂಲ ವನ್ನು ಕಾಣುತ್ತಿರುವುದು ಸೋಜಿಗವಾಗಿದೆ. ಅಧಿಕಾರ ರೋಗಕ್ಕೆ ಮದ್ದಿಲ್ಲವೆ? ರೋಗ ಬರದಂತೆ ಮಾಡುವಂತಿಲ್ಲ. ಅಂಥ ಮುಂದೆ ಬರದಿರಲು ಹಿಂದಿ ಸರಕಾರದ ಜಾತ ವಿರೋಧವೇ ಉತ್ತಮ ಔಷಧವಲ್ಲವೆ?

ಮಾನವಹೃದಯದ ಅಸಂಬಂಧ

ಸ್ವೀಡನ್ನಿನ ಒಬ್ಬ ಡಾಕ್ಟರ ಹೊಸದೊಂದು ಸಂಶೋಧನ ನಡಿಸಿದ್ದಾರೆ. ಶಸ್ತ್ರಚಿಕಿತ್ಸೆಯ ಕಾಲದಲ್ಲಿ ಕೃತಕ ಶ್ವಾಸಕೋಶ ಮತ್ತು ಕೃತಕ ಹೃದಯಗಳನ್ನು ಅವನು ಬಳಸಬಲ್ಲನು. ಹೀಗೆ ಮಾನವ ಹೃದಯವನ್ನು ಅವನು ಅರ್ಧ ಗಂಟೆಯ ವರೆಗೆ ದೇಹದಿಂದ "ಅಸಂಬದ್ಧ"ವಾಗಿ ಇಡಬಲ್ಲನು.

ಆ ಡಾಕ್ಟರ ನಿರ್ಮಿಸಿದ ಒಂದು ಯಂತ್ರವು ೪೩ ನಿಮಿಷಗಳ ವರೆಗೆ ಒಂದು ನಾಯಿಯ ಹೃದಯ ಮಾಡುವ ಕೆಲಸವನ್ನು ಮಾಡಿತು. ಆ ನಾಯಿಗೆ ಏನೂ ಆಗಲಿಲ್ಲ— ಅದೀಗ ೧೧ ಮರಿಗಳ ತಂದೆಯಾಗಿದೆ. ಪಿಪಾಯಿಗೆ ರಕ್ತ ಹೋಗುತ್ತಿರುವಂತೆ ನೋಡಿಕೊಳ್ಳುವುದೇ ಹೃದಯದ ಗುಟ್ಟು.



ಕೋಪನ್‌ಹೇಗನ್ನಿನಲ್ಲಿ ಇತ್ತೀಚೆಗೆ ನಡೆದ ಬ್ರಿಟಿಶ್ ವಸ್ತುಪ್ರದರ್ಶನದಲ್ಲಿ ವ್ಯಾಪಾರ ಸಮಿತಿಯ ಅಧ್ಯಕ್ಷ ದಫ್ತ ಅಧ್ಯಕ್ಷ ಅಟೋಕ್ರಾಟರನೊಡನೆ ಒಂದು ಟ್ರಾಲಿ ಬಸ್ಸನ್ನು ಪರಿಶೀಲಿಸುತ್ತಿರುವುದು.

ವೇದನಾಹಾರಿ

SKF 538-ಡಿ ಎಂಬ ಹೊಸದೊಂದು ವೇದನಾಹಾರಿ (Pain Killer) ಯನ್ನು ಪೆನ್ಸಿಲ್ವೇನಿಯದ ವಿಶ್ವವಿದ್ಯಾಲಯದ ವಿಜ್ಞಾನಿಗಳು ತಯಾರಿಸಿದ್ದಾರೆ. ಈಗಿರುವ ಇತರ ವೇದನಾಹಾರಕಗಳಿಗಿಂತ ಇದು ಎಷ್ಟೋಪಾಲು ಹೆಚ್ಚು ಗುಣಕಾರಿಯಿದೆ. ಇದನ್ನು ೪ ರಾಸಾಯನಿಕ ದ್ರವ್ಯಗಳಿಂದ ತಯಾರಿಸಲಾಗಿದೆ. ಕೊಕೇನ್, ಪ್ರೊಕೇನ್, ಡೈಬುಕೇನ್, ಮುಂತಾದ ನಿಃಸಂವೇದ ದ್ರವ್ಯಗಳಿಗಿಂತ ಇದು ಹೆಚ್ಚು ಕಾಲ ನಿಲ್ಲುವಂಥದು. ಆದರೆ ಇದರ ಪರಿಣಾಮದ ಪರೀಕ್ಷಣ ಇನ್ನೂ ಸಾಗಬೇಕಾಗಿರುವುದರಿಂದ ಈಗಲೇ ಇದನ್ನು ಎಲ್ಲೆಡೆಗೆ ಸಿಗುವಂತೆ ಮಾಡಿಲ್ಲ.

ಮದಮರ್ದನ

ಸ್ವೀಡನ್ನಿನ ವಿಜ್ಞಾನಿ ಸ್ಯಾಂಡರ್ಸ ಪಜೆಕೋಪಿಟ್ಸ್ ಎಂಬವನು ಕುಡಿದ ಅಮಲನ್ನು ಇಳಿಸುವ ಒಂದು ಇಂಜೆಕ್ಷನ್ನನ್ನು ತಯಾರಿಸಿದ್ದಾನೆ. ತಲೆತಿರುಗಿ ಬೀಳುವಷ್ಟು ಮದ್ಯವನ್ನು ಸೇವಿಸಿದ ಸ್ತ್ರೀಪುರುಷರನ್ನು ಈ ಇಂಜೆಕ್ಷನ್ನು ಕೊಡುವುದರಿಂದ ಸ್ವಸ್ಥತೆಗೆ ತರಬಹುದೆಂದು

ಸುಂದರ ದೇಶ-ಸ್ವಿಟ್ಝರ್ಲಂಡ

(೫ ನೆಯ ಪುಟದಿಂದ ಮುಂಬರಿದುದು)

ಆ ಭಾವಚಿತ್ರಗಳಲ್ಲಿ ಗಾಂಧೀಜಿಯ ಚಿತ್ರವೂ ಇತ್ತು. ಅವರ ಕಡೆ ಕೈತೋರಿಸುತ್ತಾ, 'Good man, killed' "ಸಜ್ಜನ" ಅವನನ್ನು ಕೊಂದರು ಎಂದು ಸಹಾನುಭೂತಿಯನ್ನು ವ್ಯಕ್ತಪಡಿಸಿದನು. ಸ್ವಿಟ್ಝರ್ಲಂಡಿನ ಹಳ್ಳಿಯೊಂದರಲ್ಲೂ ಗಾಂಧೀಜಿಯ ಪ್ರಭಾವ ಬೀರಿರುವವಲ್ಲಾ ಎಂದು ಹೆಮ್ಮೆಯೂ ಆಶ್ಚರ್ಯವೂ ಒಂದೇಕಾಲಕ್ಕೆ ಆಯಿತು.

ರೈಲು ಬರುವ ಹೊತ್ತಾದ್ದರಿಂದ, ಆ ರೈತನಿಗೆ ಸಲಾಮು ಹೊಡೆದು, ಸ್ಟೇಶನ್ನಿಗೆ ಬಂದೆ. ಬ್ರಿಗ್ ದಿಂದ ಇಟಲಿ ದೇಶಕ್ಕೆ ಬರುವಾಗ ೨೦ ಮೈಲಿ ಉದ್ದವಿರುವ ಸಿಂಪ್ಲಾನ್ ಸುರಂಗವನ್ನು ಹಾಯಬೇಕು. ಅದೇ ಕೊನೆಯ ಸ್ವಿಸ್ ನೆಲ. ಆಲ್ಪ್ಸ ಪರ್ವತವನ್ನು ಕೊರೆದು ಇಟಲಿ ದೇಶಕ್ಕೆ ಹಾದಿ ಮಾಡಿದ್ದಾರೆ. ಆ ಸುರಂಗದ ಕೊನೆಯಲ್ಲಿರುವದೇ ಇಟಲಿಯ ರೇಲ್ವೆ ಸ್ಟೇಶನ್ ಡೊಮೊಡೊಸ್ಸೊಲಾ. ಇಲ್ಲಿಗೆ ಬಂದಾಗ ಸಂಜೆ ಎಂಟು ಘಂಟೆಯಾಗಿತ್ತು. ಅಲ್ಲಿಗೆ ನನ್ನ ಐದು ದಿನಗಳ ಸುಂದರ ನಾಡಿನ ಪ್ರವಾಸವೂ ಮುಗಿದಿತ್ತು.

ಡಿಸೆಂಬರ ತಿಂಗಳೊಳಗೆ ಜಯಪುರದಲ್ಲಿ ಜರುಗಲಿರುವ ರಾಷ್ಟ್ರೀಯ ಸಭೆಯ ಅಧಿವೇಶನಕ್ಕಾಗಿ ಹಿಂದುಸ್ತಾನ ಸರಕಾರವ ಆಹಾರ ಶಾಖೆಯವರು ೬೦೦ ಟನ್ ಗೋದಿಯನ್ನು ಕೊಡಮಾಡಿದ್ದಾರೆಂದು ತಿಳಿಯುತ್ತದೆ.

ಜನಮತ

ಸ್ತ್ರೀ ಸ್ವಾತಂತ್ರ್ಯ

ಇತ್ತೀಚೆಗೆ ನಮ್ಮ ಭಗಿನಿ ಸುಭದ್ರಾದೇವಿಯವರು (ಕರ್ಮವೀರ ೧೧.೧೦.೪೮) ಸಮಾಜದಲ್ಲಿಯ ಕೆಲವು ಲೋಪ—ದೋಷಗಳ ಬಗ್ಗೆಯೂ ಹೆಣ್ಣುಮಕ್ಕಳ ಕರ್ತವ್ಯದ ಬಗ್ಗೆಯೂ 'ಕರ್ಮವೀರ'ದಲ್ಲಿ ಬಹು ಯುಕ್ತ ಮಾರ್ಮಿಕವೂ ಆದ ಸತ್ಯ ಸಂಗತಿಗಳನ್ನು ಬೈಲಿಗಿಟ್ಟಿದ್ದಾರೆ. ಅವರ ವಿಚಾರಕ್ಕೂ, ನನ್ನ ಸ್ವಂತ ವಿಚಾರಕ್ಕೂ ಹದಿನಾರಾಣೆ ಸರಿಹೋದುದಕ್ಕೆ ತುಂಬ ಸಂತಸವೆನಿಸಿದೆ.

ಅವರ ಮಾತಿನಂತೆ ಇಂದಿನ ಹೆಣ್ಣುಮಕ್ಕಳು ಸ್ವಾಚ್ಛಂದ್ಯವೇ ಸ್ವಾತಂತ್ರ್ಯ, ಸತಿ ಪರಾವಲಂಬಿತ್ವವೇ ದಾಸ್ಯವೆಂದು ತಿಳಿದು ಪಾಶ್ಚಾತ್ಯ ನಾಗರಿಕತೆಗೆ ಮೋಸಹೋಗಿ, ಆರ್ಯ ಸಂಸ್ಕೃತಿಯನ್ನು ಸಂಪೂರ್ಣ ಅಲ್ಲಗಳೆದಿದ್ದಾರೆ. ಇದರ ಮುಖ್ಯ ಕಾರಣ ಕನ್ನಡ ಮತ್ತು ಸಂಸ್ಕೃತಾಭ್ಯಾಸವನ್ನು ಬಿಟ್ಟುದೆ. ನಮ್ಮ ಹಿರಿಯರೂ ಕೂಡ ಏನು ಸಂಸ್ಕೃತ, ಅದೇನು ಕನ್ನಡ, ಇಂಗ್ಲಿಷ್ ಕಲಿಯಿರಿ, ಉರ್ದು ಓದಿರಿ, ಎಂದು ಹೇಳಿ ನಮ್ಮ ಮಿದುಳನ್ನೇ ಕೆಡಿಸಿಬಿಡುತ್ತಾರೆ. ಪರಭಾಷೆಗಾಗಿ ಹೊತ್ತ ಶ್ರಮ, ಕೆತ್ತವೇಳೆ, ಇತ್ತ ದುಡ್ಡು ಸಂಸ್ಕೃತ ಕನ್ನಡಗಳಿಗಾಗಿಯೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಆದರ್ಶ ಗ್ರಂಥಗಳ ಪರಿಶೀಲನೆಗಾಗಿಯೂ ವೆಚ್ಚಮಾಡಿದರೆ ನಾವು ಗಳಿಸಿದ ಈ ಸ್ವಾತಂತ್ರ್ಯ ಇಷ್ಟರಲ್ಲೇ ಅಜರಾಮರವಾಗುತ್ತಿದ್ದಿತು.

ವರದಕ್ಷಿಣೆ, ಕನ್ಯಾಶುಲ್ಕ ಇವು ಸಮಾಜದ ಸುಂಕುರೋಗಗಳು. ಕೆಲ ಕಾಲದಿಂದ ಈ ಸಾಂಕ್ರಾಮಿಕ ಜಾಡ್ಯ ಸಮಾಜವನ್ನು ಅಲುಗಿಸಿದೆ. ನಿರ್ವೀರ್ಯವನ್ನಾಗಿ ಮಾಡಿದೆ. ಸರಕಾರದವರು ತೀವ್ರ ಈ ಬಗ್ಗೆ ಕಾಯಿದೆ ಪಾಸು ಮಾಡಿ ವರದಕ್ಷಿಣೆ ಮತ್ತು ಕನ್ಯಾಶುಲ್ಕದ ಸಲುವಾಗಿಯೇ ಅವಿವಾಹಿತರಾಗಿ ಬಳಲುತ್ತಿರುವ ನಮ್ಮ ಬಂಧು—ಭಗಿನಿಯರ ಬಾಳು ಬೆಳಗುವಂತೆ ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ನಗರ ಕೃಷ್ಣ ಇನಾಮದಾರ

× × ×

ವರದಕ್ಷಿಣೆಯ ಪಿಡುಗು

ಮಾನ್ಯರೆ,

ತಂಗಿ 'ಸುಭದ್ರಾ' ಅವರು ಪ್ರಕಟಿಸಿದ ಪತ್ರ (:ಜನಮತ ೧೧/೧೦) ಮನನೀಯವಾಗಿದೆ. ತಂದೆಯು ಪಡುವ ಕಷ್ಟಗಳ ಕಲ್ಪನೆ ನಮ್ಮ ಹೆಣ್ಣುಮಕ್ಕಳಿಗಿರುವದು ಅಭಿನಂದನೀಯವೆ. ಸಹಾನುಭೂತಿ ನಾಲ್ಕೆಸೆಗಳಿಂದಲೂ ಅಯಾಚಿತವಾಗಿ ದೊರತೀತು. ಆದರೆ ಹೆಣ್ಣು ದುಡಿದು ಗಂಡನ ಗಳಿಕೆಯಲ್ಲಿ ನೆರವಾಗಲ್ಕೆ ಸಮರ್ಥಳೆಂಬ ಕಾರಣದ ಮೂಲಕ ವರದಕ್ಷಿಣೆ ತೊಲಗಬೇಕೆಂಬ ಅಭಿಪ್ರಾಯ ಅವರದಿದ್ದಲ್ಲಿ, ಕೇವಲ ಸುಶಿಕ್ಷಿತ(ಕಲಿತ)ತರುಣಿಯರ ಹಿತಚಿಂತನೆ ಮಾತ್ರ ಸಾಧಿಸಬಯಸಿದಂತಾಗುತ್ತದೆ. ಮಾನವಬುದ್ಧಿಯ ವಿಕಾಸಕ್ಕೆ ಪರಿಸ್ಥಿತಿಯ ಅನುಕೂಲವೂ ಒಂದು ಮಹತ್ವದ ತಳಹದಿ. ಹೀಗಿರಲು ಕೆಲವೊಂದು ಅನನುಕೂಲ ಸ್ಥಿತಿಗೆ ತಲೆವಾಗಿ ಕಲಿಯದೆ ಬೆಳೆದವರೂ ಇರಬಹುದು. ಅವರು ಆದರ್ಶ ಗೃಹಿಣಿಯಾಗರೆಂಬುದು ಏತರ ಮೇಲಿಂದ? ಹೆಂಗಸು ಸುವ್ಯವಸ್ಥೆಗೊಳಿಸದಿದ್ದಲ್ಲಿ ಗಂಡಸು ಗಳಿಸಿದ್ದೆಲ್ಲ ಗಾಳಿಯ ಪಾಲು. ಕಾರಣ—ಕಲಿಯದವರಂತೂ ಸರಿಯೆ—ಕಲಿತವರು ನೌಕರಿಯ ತಪ್ಪು ತಕ್ಕಡಿಯಲ್ಲಿ ತೂಗಿಕೊಳ್ಳುವದಕ್ಕಿಂತಲೂ ಮನೆಯ ನಿರ್ವಹಣೆಯ ಹೊಣೆಗೆ ಸಿದ್ಧರಾಗುವದು ಹಿತಕರ. ವರದಕ್ಷಿಣೆಯ ಪಿಡುಗು ತೊಲಗಬೇಕಾದರೆ ಸರಕಾರದ ನಿಯಮಕ್ಕಿಂತ ನೀತಿ—ನಿಯಮ ಪಾಲಿಸುವ ಹಂಬಲ ನಮ್ಮ ಜನತೆಯಲ್ಲಿ ಬೆಳೆದುಬರಲಿ. ಆಮೇಲೆ ಸಹಕಾರಕ್ಕೆ ಸರಕಾರವನು ಮಾತುಮಾತಿಗೂ ಆಹ್ವಾನಿಸುವ ಪ್ರಸಂಗ ಕಡಿಮೆಯಾದೀತು.

ಮುಂಬಯಿ. — ರಾಮಗೋಪಾಲ

ಹೈದರಾಬಾದದ ಸ್ಥಿತಿಯು ಸಾಕಷ್ಟು ಸ್ಥಿರತೆಕ್ಕೆ ಬಂದಿಲ್ಲವಾದ ಕಾರಣ ಇನ್ನೂ ಕೆಲಕಾಲ ಸೈನಿಕ ಆಡಳಿತ ಇರುವದೇ ಯೋಗ್ಯವೆಂದು ಸ್ವಾಮಿ ರಮಾನಂದತೀರ್ಥರು ಮುಂಬಯಿಯಲ್ಲಿ ಒಂದು ಸಂದರ್ಶನದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

ಘಟನಾ ಸಮಿತಿಯಿಂದ ಭಾಷಾನುಗುಣ ಪ್ರಾಂತೀಕರಣದ ಬಗ್ಗೆ ನಿಯುಕ್ತವಾದ ದರ್ ಸಮಿತಿಯು ಹುಬ್ಬಳ್ಳಿಗೆ ಅಕ್ಟೋಬರ ತಾ ೨೭ ರಂದು ಆಗಮಿಸಿತು. ಕರ್ನಾಟಕ ಏಕೀಕರಣದ ಬಗ್ಗೆ ಸಮಿತಿಯು ೩ ದಿನ ಅಖಂಡವಾಗಿ ಸಾಕ್ಷಿಗಳನ್ನು ಕೇಳಿಕೊಂಡಿತು. ಈ ಸಮಿತಿಯಲ್ಲಿ ಶ್ರೀ ಎಸ್. ಕೆ. ದರ್ (ಅಧ್ಯಕ್ಷ) ಶ್ರೀ ಬ್ಯಾನರ್ಜಿ (ಕಾರ್ಯದರ್ಶಿ) ಡಾ. ಪನ್ನಾಲಾಲ, ಶ್ರೀ ಜಗತ್ ನಾರಾಯಣಲಾಲ ಹೀಗೆ ನಾಲ್ವರು ಸದಸ್ಯರು ಹಾಗೂ ಮುಂಬಯಿ ಸರ್ಕಾರದಿಂದ ಶ್ರೀ ರಂಗರಾವ ದಿವಾಕರರು ಸಹಾಯಕ ಸದಸ್ಯರು ಇರುತ್ತಾರೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿ, ಕರ್ನಾಟಕ ಏಕೀಕರಣ ಮಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ ಇವೇ ಮೊದಲಾದ ಪ್ರಮುಖ ಸಂಸ್ಥೆಗಳ ಪ್ರತಿನಿಧಿಗಳು ಸಮಿತಿಯವರನ್ನು ಸಂಭ್ರಮದಿಂದ ಸ್ವಾಗತಿಸಿಕೊಂಡರು.

ವೈಯಕ್ತಿಕವಾಗಿ ಸಾಕ್ಷಿಗಳನ್ನು ನುಡಿವುದರಿಂದ ಉಂಟಾಗಬಹುದಿದ್ದ ಶಿಥಿಲತೆಯನ್ನೂ ಅಸಂಬದ್ಧತೆಯನ್ನೂ ಅವ್ಯವಸ್ಥೆಯನ್ನೂ ತೊಲಗಿಸಿ ಬೇರೆ ಬೇರೆ ಸಂಘ ಸಂಸ್ಥೆಗಳ ಶಿಷ್ಟ ಮಂಡಲಗಳನ್ನು ರಚಿಸಿ ಆಯಾ ಸಂಸ್ಥೆಯವರು ತಮ್ಮ ಧುರೀಣರ ಮುಖಾಂತರ ಸುಸಂಬದ್ಧವಾದ ಹೇಳಿಕೆ ಕೊಡುವಂತೆ ಕರ್ನಾಟಕ ಏಕೀಕರಣ ಮಹಾ ಸಮಿತಿಯವರು ಏರ್ಪಡಿಸಿದ್ದರು. ಇದರಿಂದ ಸಮಿತಿಯವರ ಮೇಲೆ ಒಳ್ಳೆ ಪರಿಣಾಮವಾಯಿತಲ್ಲದೆ ಎಲ್ಲರ ಹೇಳಿಕೆಯಲ್ಲಿಯೂ ಏಕಸೂತ್ರತೆಯೂ ಏಕಾಭಿಪ್ರಾಯವೂ ಕಂಡು ಬಂದಿತು. ಎಲ್ಲರೂ ತಮ್ಮ ಹೇಳಿಕೆಗಳನ್ನು ಸಾಧಾರವಾಗಿ ಮುಂಡಿಸಿದರು. ಕರ್ನಾಟಕ ಪ್ರಾಂತವು ಕೂಡಲೇ ರಚಿತವಾಗಬೇಕೆಂಬ ವಿಷಯವನ್ನು ಎಲ್ಲರೂ ಒತ್ತಿ ಹೇಳಿದರು. ವಿಷಯವನ್ನು ಸರಿಯಾಗಿ ಬಿಂಬಿಸಲು ಕ. ಏ. ಮಹಾ ಸಮಿತಿಯವರೂ ಕನ್ನಡ ಸಂಶೋಧನ ಸಂಸ್ಥೆಯವರೂ ಬಗೆಬಗೆಯ ನಕಾಶಗಳನ್ನು ಸಿದ್ಧಗೊಳಿಸಿದ್ದರು. ಹುಬ್ಬಳ್ಳಿಯಲ್ಲಿ ಸುಮಾರು ಒಂದು ನೂರು ಸಾಕ್ಷಿಗಳನ್ನು ಕೇಳಿಕೊಳ್ಳಲಾಯಿತು. ಸಾಕ್ಷಿ ನುಡಿದವರಲ್ಲಿ ಸ್ತ್ರೀಯರು, ವರ್ತಕರು, ಶಿಕ್ಷಕರು, ಶಿಕ್ಷಣ ತಜ್ಞರು, ನ್ಯಾಯಾಧೀಶರು, ಸಾಹಿತ್ಯಕರು, ರಾಜಕಾರಣಿಗಳು, ಅಧಿಕಾರಿಗಳು, ನಿವೃತ್ತ ಸರಕಾರಿ ನೌಕರರು, ಮಂತ್ರಿಗಳು, ಘಟನಾ ಸಮಿತಿಯ ಸದಸ್ಯರು, ಪತ್ರಿಕಾಕರ್ತರು, ಹರಿಜನರು, ಮರಾಟಿಗರು ಇನ್ನೂ ಹಲವಾರು ಪ್ರಾತಿನಿಧಿಕ ಸಂಸ್ಥೆಗಳ ಪ್ರತಿನಿಧಿಗಳು ಹೀಗೆ ಬಗೆಬಗೆಯ ರಂಗದಲ್ಲಿ ಕಾರ್ಯ ಮಾಡುವ ಭಿನ್ನಭಿನ್ನ ದೃಷ್ಟಿಕೋನದಿಂದ ಏಕೀಕರಣದ ಅಗತ್ಯತೆಯನ್ನು ಪ್ರತಿಪಾದಿಸುವ ಜನರಿದ್ದರು. ಕರ್ನಾಟಕದ ಏಕೀಕರಣದಿಂದ ಮತ್ತು ಪ್ರತ್ಯೇಕ ಪ್ರಾಂತೀಕರಣದಿಂದ ಕರ್ನಾಟಕದ್ದಷ್ಟೇ ಅಲ್ಲ ಪ್ರಜಾಸತ್ತಾತ್ಮಕ ಹಿಂದುಸ್ತಾನದ್ದೂ ಹಿತವಿದೆಯೆಂಬುದೇ ಎಲ್ಲರ ಹೇಳಿಕೆಯ ಪಲ್ಲವಿಯಾಗಿತ್ತು. ಕರ್ನಾಟಕದಲ್ಲಿದ್ದ ಎಲ್ಲ ಮಹಾರಾಷ್ಟ್ರ ಮಂಡಳಗಳ ಪ್ರತಿನಿಧಿಗಳು ಸಾಕ್ಷಿ ನುಡಿದು ಕರ್ನಾಟಕ ಏಕೀಕರಣ ಬೇಗ ಆಗಬೇಕೆಂದು ಹೇಳಿದ್ದು ಒಂದು ವಿಶೇಷ. ಇದರಂತೆ ಹಿಂದು ಮಧ್ಯಮ ವರ್ಗದ ಅಲ್ಪಸಂಖ್ಯಾಕ ಗುಂಪಿನವರು ಏಕೀಕೃತ ಕರ್ನಾಟಕದಲ್ಲಿ ತಮಗೆ ಕೆಲವೊಂದು ಹಕ್ಕು ಬಾಧ್ಯತೆ ಬೇಕೆಂದು ನಿರೂಪಿಸಿದ್ದರು. ಅದಕ್ಕೆ ಸಮಿತಿಯವರು ಇವು ಸಾಧಿಸದಿದ್ದರೆ ಏಕೀಕರಣ ಬೇಡವೆನ್ನುವಿರಾ. ಎಂದು ಮರುಸವಾಲು ಹಾಕಿದ್ದಕ್ಕೆ ಈ ಗುಂಪಿನವರು ನಮ್ಮ ಹಕ್ಕು ಬಾಧ್ಯತೆಗಳ ವಿಷಯವನ್ನು ನಾವು ಬೇಕಾದರೆ ಆಮೇಲೆ ಸರಿಪಡಿಸಿಕೊಳ್ಳುವೆವು, ಆದರೆ ಕರ್ನಾಟಕ ಏಕೀಕರಣವಾಗಿ ಪ್ರತ್ಯೇಕ ಪ್ರಾಂತವಾಗುವದು ಅತ್ಯವಶ್ಯ ಎಂದು ನಿರ್ಧಾರದ ನುಡಿಗಳನ್ನು ಹೇಳಿದ್ದು ಇನ್ನೊಂದು ವೈಶಿಷ್ಟ್ಯ.

ಗೋವಾದ ಪರವಾಗಿ ಸಾಕ್ಷಿ ನುಡಿಯುತ್ತ ಶ್ರೀ ರಿಬೆರೊ ಇವರು, ಗೋವಾ ಪ್ರಾಂತದಲ್ಲಿಯ ಜನರ ಒಲವು ಮಹಾರಾಷ್ಟ್ರಕ್ಕಿಂತ ಕರ್ನಾಟಕದ ಕಡೆಗೇ ಹೆಚ್ಚಾಗಿದ್ದು ಕರ್ನಾಟಕದಲ್ಲಿಯೇ ಸೇರಲು ಗೋವಾ ಜನರು ಆತುರರಿದ್ದಾರೆಂದು ಹೇಳಿದರು. ಕೊಂಕಣಿ ಪ್ರಾಂತ ರಚಿತವಾದರೆ ಒಂದು ವೇಳೆ ಗೋವೆಯ ಜನರು ಅದರಲ್ಲಿ ಸೇರಲು ಒಪ್ಪಬಹುದು. ಆದರೆ ಸ್ವತಂತ್ರ ಕೊಂಕಣಿ ಪ್ರಾಂತವಾಗುವದು ಶಕ್ಯವಿಲ್ಲವಾದ್ದರಿಂದ ಅವರು ಕರ್ನಾಟಕದಲ್ಲಿಯೇ ಸೇರಬಯಸುತ್ತಾರೆ ಎಂದು ಮೊದಲಾಗಿ ಪ್ರತಿಪಾದಿಸಿದರು

ಕಾರವಾರದ ಶಿಷ್ಟ ಮಂಡಲದ ಪರವಾಗಿ ಕೊಂಕಣಿಗರಾದ ಶ್ರೀ ಹೊನ್ನಾವರಕರ ಮೊದಲಾದವರು ಸಾಕ್ಷಿಗೊಡುತ್ತ, ಕಾರವಾರ, ಕುಮಟಾ, ಹಳಿಯಾಳ, ಹೊನ್ನಾವರದಲ್ಲಿ ಕೊಂಕಣಿ ನಡೆಯುತ್ತಿದ್ದರೂ ಅಲ್ಲಿನವರ ಸಂಬಂಧ ಮಹಾರಾಷ್ಟ್ರಕ್ಕಿಂತ ಕರ್ನಾಟಕದ ಕೂಡ ಹೆಚ್ಚಾಗಿದೆಯೆಂದೂ ಕೊಂಕಣ ಪ್ರಾಂತವಾದರೆ ಉತ್ತರ ಕನ್ನಡ ಜಿಲ್ಲೆಯ ಕೊಂಕಣ ಭಾಗವು ಅದರಲ್ಲಿ ಸೇರಬಹುದೆಂದೂ ಆದರೆ ಕೊಂಕಣ ಪ್ರಾಂತವಾಗುವದು ಶಕ್ಯವಿಲ್ಲದಕಾರಣ ಉತ್ತರ ಕನ್ನಡ ಜಿಲ್ಲೆಗಳ ಕೊಂಕಣಿಗರು ಕರ್ನಾಟಕದಲ್ಲಿಯೇ ಸೇರಬಯಸುವರೆಂದೂ ಮಹಾರಾಷ್ಟ್ರಕ್ಕೆ ಸೇರುವದು ಸಾಧ್ಯವಿಲ್ಲವೆಂದೂ ಸ್ಪಷ್ಟವಾಗಿ ಹೇಳಿದರು.

ಸಾಕ್ಷಿ ನುಡಿದವರಲ್ಲಿ ಕೆಲವು ಪ್ರಮುಖರ ಹೆಸರುಗಳು ಹೀಗಿವೆ.

ನ್ಯಾಯಮೂರ್ತಿ ನಾರಾಯಣರಾವ ಲೋಕೂರ, ಶ್ರೀ ದತ್ತಾತ್ರಯ ಬೆಳವಿ, ಶ್ರೀ ತಿ. ತಾತಾಚಾರ್ಯ ಶರ್ಮ, ಡಿ ದಾ. ಜೌಗುಲೆ, ಶ್ರೀ ದಾತಾರ ಬಳವಂತರಾಯರು, ಶ್ರೀ ದ. ರಾ. ಬೇಂದ್ರೆ, ಶ್ರೀ ಎಸ್ ನಿಜಲಿಂಗಪ್ಪ, ಶ್ರೀ ದತ್ತಾತ್ರೇಯ ಕರಮರಕರ, ಶ್ರೀ ಸಿದ್ದಪ್ಪ ಕಂಬಳಿ, ಶ್ರೀ ಮೊಹರೆ ಹಣಮಂತರಾಯರು ಶ್ರೀ ಎಸ್. ಆರ್. ಕಂಠಿ, ಶ್ರೀ ಸ. ಪ ಗಾಂವಕರ, ಶ್ರೀ ಆರ್. ಎಸ್. ಪಂಚಮುಖಿ. ಡಾ. ಆರ್ ನಾಗನಗೌಡಾ, ಶ್ರೀ ಉರವಕೊಂಡದ ಜಗದ್ಗುರುಗಳು, ಶ್ರೀ ಫಕೀರಪ್ಪ ಘೋಡಕೆ ಬ್ಯಾ. ಸರದಾರ, ಶ್ರೀಮತಿ ಪದ್ಮಾವತಿದೇವಿ ಅಂಗಡಿ, ಶ್ರೀಮತಿ ಜಯದೇವಿಬಾಯಿ ಲಿಗಾಡೆ, ಶ್ರೀಮತಿ ನಾಗಮ್ಮ ಪಾಟೀಲ, ಕುಮಾರಿ ವೈದೇಹಿ ಡಂಬಳ ಇವರೇ ಮೊದಲಾದವರಿದ್ದರು.

ಸಾಕ್ಷಿ ನುಡಿದ ಇನ್ನು ಕೆಲ ಪ್ರಾತಿನಿಧಿಕ ಸಂಸ್ಥೆ ಹಾಗೂ ಗುಂಪುಗಳ ಹೆಸರು ಹೀಗಿವೆ. ಕ. ಪ್ರಾ. ಕಾಂ. ಸಮಿತಿ, ಕ. ಏ. ಮಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿದ್ಯಾವರ್ಧಕ ಸಂಘ, ಕನ್ನಡ ಸಂಶೋಧನ ಸಂಸ್ಥೆ, ಪೂರ್ವ ಕರ್ನಾಟಕ ಸಂಘ, ಹಿಂದೂ ಮಧ್ಯಮ ವರ್ಗ ಅಲ್ಪ ಸಂಖ್ಯಾಕರ ಸಂಘ, ಮಹಾರಾಷ್ಟ್ರ ಮಂಡಳ, ವಿವಾದಾಸ್ಪದ ಪ್ರದೇಶಗಳ ಗುಂಪು, ಭಾಷಿಕ ಅಲ್ಪಸಂಖ್ಯಾಕರ ಗುಂಪು, ಮುಂಬಯಿ ಕರ್ನಾಟಕ ಶಾಸನ ಸಭಾಸದಸ್ಯರ ಗುಂಪು, ಸಾಮಾನ್ಯ ಹಿತ ಸಂಬಂಧಗಳ ಗುಂಪು, ಕರ್ನಾಟಕ ವಕೀಲ ಸಂಘ ಇವೇ ಮೊದಲಾದ ಸಂಘ ಸಂಸ್ಥೆಗಳು ಕರ್ನಾಟಕ ಏಕೀಕರಣಕ್ಕೆ ಅನುಕೂಲ ಸಾಕ್ಷಿ ನುಡಿದರು.

ಪುಣೆಯಲ್ಲಿ

ದರ್ ಸಮಿತಿಯವರು ಭಾಷಾನುಗುಣ ಪ್ರಾಂತೀಕರಣದ ಬಗ್ಗೆ ತಾ ೩೦ರಂದು ಪುಣೆಯಲ್ಲಿ, ಶಿಕ್ಷಣ ಶಾಖೆಯ ಡೈರೆಕ್ಟರರಾದ ಶ್ರೀ ಡಿ. ಸಿ. ಪಾವಟೆ, ಸರ್ ಆರ್. ಪಿ. ಪರಾಂಜಪೆ, ಮೊದಲಾದವರ ಸಾಕ್ಷಿ ತೆಗೆದುಕೊಂಡರು. ಸರ್ ಪರಾಂಜಪೆಯವರು, ಮುಂಬಯಿ ನಗರವನ್ನೊಳಗೊಂಡ ಸಂಯುಕ್ತ ಮಹಾರಾಷ್ಟ್ರ ನಿರ್ಮಾಣ ಮಾಡತಕ್ಕದ್ದೆಂದೂ ೫ ವರ್ಷಗಳಲ್ಲಿ ಭಾಷಾನುಗುಣ ಪ್ರಾಂತರಚನೆಯ ಆಶ್ವಾಸನ ಕೊಡತಕ್ಕದ್ದೆಂದೂ ಇದರಿಂದ ರಾಷ್ಟ್ರೀಯ ಭಾವನೆ ಉದ್ದೀಪಿತವಾಗುವದಲ್ಲದೆ ಕುಂದುವದಿಲ್ಲವೆಂದೂ ಹೇಳಿದರು. ಅಲ್ಲದೆ ಮೈಸೂರನ್ನೊಳಗೊಂಡ ಕರ್ನಾಟಕ ಪ್ರಾಂತವನ್ನೂ ಸೌರಾಷ್ಟ್ರವನ್ನೊಳಗೊಂಡ ಗುಜರಾತ ಪ್ರಾಂತವನ್ನೂ ರಚಿಸಲು ತಾವು ಅನುಕೂಲರೆಂದು ಸರ್ ಪರಾಂಜಪೆಯವರು ಅರುಹಿದರು.

ಮುಂಬಯಿಯಲ್ಲಿ

ಮುಂಬಯಿ ಕನ್ನಡಿಗರು ದರ್ ಸಮಿತಿಯ ಎದುರು ತಾ. ೩ಕ್ಕೆ ಸಾಕ್ಷಿ ನುಡಿದು ಯಾವ ದೃಷ್ಟಿಕೋನದಿಂದ ನೋಡಿದರೂ ಕರ್ನಾಟಕ ಏಕೀಕರಣವೂ ಸ್ವತಂತ್ರ ಪ್ರಾಂತೀಕರಣವೂ ಅಗತ್ಯವೇ ಆಗಿದೆ ಎಂದು ಹೇಳಿದರು. ತಮ್ಮ ಹೇಳಿಕೆಗೆ ಪುಷ್ಟಿಕೊಡಲು ಅಂಕಿ ಸಂಖ್ಯೆಗಳನ್ನೂ ಆಧಾರವಾಗಿ ಕೊಟ್ಟರು.

ಮುಂಬಯಿ ಸಂ. ಕಂ. ಸಂಘದ ಪರವಾಗಿಯೂ ಮುಂಬಯಿ ಕರ್ನಾಟಕ ಏಕೀಕರಣ ಸಂಘದ ಪರವಾಗಿಯೂ ಸಾಕ್ಷಿ ಹೇಳಲಾಯಿತು. ಮುಂಬಯಿ ನ್ಯಾಶನಲ್ ಸ್ಟ್ಯಾಂಡರ್ಡ ದಿನಪತ್ರಿಕೆಯ ಸಂಪಾದಕರಾದ ಶ್ರೀ. ವಿ. ಬಿ. ಕುಲಕರ್ಣಿ, ರಾ. ಬ. ಛಪ್ರಾಪೂರ, ಶ್ರೀ ದಿನಕರ ದೇಸಾಯಿ, ಶ್ರೀ ಎಚ್. ಎಸ್ ಪಾಟೀಲ, ಶ್ರೀ ಆರ್. ವಿ. ಮೂರ್ತಿ ಶ್ರೀ ಕೃಷ್ಣಕುಮಾರ ಇವರೇ ಮೊದಲಾದವರು ಸಾಕ್ಷಿ ನುಡಿದರು.

[illegible] ಮುಖ್ಯಸ್ಥ [illegible] ದರ್ ಸಮಿತಿಯೆದುರು ಸಾಕ್ಷಿ ಹೇಳುತ್ತ, ಸಂಯುಕ್ತ ಮಹಾರಾಷ್ಟ್ರದಲ್ಲಿ ಮುಂಬಯಿಯನ್ನು ಸೇರಿಸುವ ಬಗ್ಗೆ ವಿರೋಧ ವ್ಯಕ್ತಪಡಿಸಿದರು ಹಾಗೂ ಮುಂಬಯಿಯನ್ನು ಒಂದು ಸ್ವತಂತ್ರ ಆಡಳಿತ ಘಟಕವನ್ನಾಗಿ ಮಾಡಬೇಕೆಂದು ಸೂಚಿಸಿದರು.

ಇದಿನವೇ ಮುಂಬಯಿ ಕಾರ್ಪೊರೇಶನ್ ಮತ್ತು ಮುಂಬಯಿ ಪ್ರಾಂತೀಯ ಕಾಂಗ್ರೆಸ ಸಮಿತಿಯ ಸಾಕ್ಷಿಗಳೂ ನಡೆದವು. ಕಾರ್ಪೊರೇಶನ್ನದ ಪರವಾಗಿ ಡಾ. ಮುಕ್ತರಾಜ ಮತ್ತು ಮುಂಬಯಿ ಪ್ರಾಂತೀಯ ಕಾಂಗ್ರೆಸ ಪಕ್ಷದ ಧುರೀಣ ಶ್ರೀ ಎಸ್. ಕೆ. ಪಾಟೀಲರು ದೊಡ್ಡ ನಾಡಿ ಭಾಷಾವಾರ ಪ್ರಾಂತ ರಚನೆಯನ್ನು ೧೦ ವರ್ಷ ಮುಂದೂಡಬೇಕೆಂದೂ ಜಾತೀಯವಾದಕ್ಕಿಂತ ಇದೆ ಅಪಾಯಕರವಿದೆಯೆಂದೂ ಹೇಳಿದರು.

ಮುಂಬಯಿ ಮುಖ್ಯಮಂತ್ರಿ ಶ್ರೀ ಬಾಳಾಸಾಹೇಬ ಖೇರರು ದರ್ ಸಮಿತಿಗೆ ಒಂದು ಪತ್ರಬರೆದು ಭಾಷಾನುಗುಣ ಪ್ರಾಂತೀಕರಣದ ಪ್ರಶ್ನೆಯು ಒಪ್ಪಂದದ ಮೂಲಕವಾಗಲೀ ಘಟನಾ ಸಮಿತಿಯ ಅಥವಾ ಕೇಂದ್ರ ಸರಕಾರದ ನಿರ್ಣಯದಿಂದಾಗಲೀ ಬೇಗ ಬಗೆಹರಿಯಬೇಕೆಂದೂ ಇದರಿಂದಲೇ ದೇಶದಲ್ಲಿ ಶಾಂತಿ ಸಮೃದ್ಧಿ ನೆಲೆಗೊಳ್ಳುವದೆಂದೂ ತಿಳಿಸಿದ್ದಾರೆ. ಶ್ರೀ ಖೇರರು ಈ ಪತ್ರದ ಜೊತೆಗೆ, ಸಂಯುಕ್ತ ಮಹಾರಾಷ್ಟ್ರ ರಚನೆ ಬೇಗ ಆಗದೇಕೆಂಬ ಗೊತ್ತುವಳಿಗೆ ತಮ್ಮ ಬೆಂಬಲವಿರುವದೆಂದು ತಿಳಿಸಿದ ೫೯ ಮಹಾರಾಷ್ಟ್ರ ಶಾಸನ ಸಭಾಸದಸ್ಯರ ಅಂಕಿತಗಳನ್ನು ಕಳಿಸಿದ್ದಾರೆ.

ಘಟನಾ ಸಮಿತಿಯ ಅಧಿವೇಶನ

ಘಟನಾ ಸಮಿತಿಯ ಅಧಿವೇಶನ ದಿಲ್ಲಿಯಲ್ಲಿ ಇದೇ ೪ ನೇ ತಾರೀಕಿನಂದು ಡಾ. ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿದೆ. ಬಹುತರ ಎಲ್ಲ ಸದಸ್ಯರು ಸಭೆಗೆ ಬಂದಿದ್ದಾರೆ. ೫ ಜನ ಹೊಸ ಸದಸ್ಯರು ಪ್ರತಿಜ್ಞೆ ತೆಗೆದುಕೊಂಡರು. ಶಕ್ಕರ ಬಾಪ್ಪಾ ಇವರು ಅವರಲ್ಲಿ ಒಬ್ಬರು. ಇಂದಿನ ಸಭೆಯಲ್ಲಿ ಡಾ. ರಾಜೇಂದ್ರ ಪ್ರಸಾದರು ರಾಷ್ಟ್ರಪಿತ ಮತ್ತು ಸ್ವಾತಂತ್ರ್ಯ ಪ್ರದಾತ ಮಹಾತ್ಮರ ನಿಧನದ ಬಗ್ಗೆ ದುಃಖ ಪ್ರದರ್ಶನಾರ್ಥವಾಗಿ ಮತ್ತು ಗೌರವವನ್ನು ತೋರಿಸಲು ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಬೇಕೆಂದು ಹೇಳಿದರು. ಅದಾದ ನಂತರ ಪಾಕಿಸ್ತಾನದ ಸಂಸ್ಥಾಪಕರಾದ ಬ್ಯಾ. ಜಿನ್ನಾ ಇವರ ನಿಧನದ ಬಗ್ಗೆಯೂ ದುಃಖಪ್ರದರ್ಶನಾರ್ಥ ಎಲ್ಲರೂ ಎದ್ದು ನಿಂತರು.

ಹಿಂದುಸ್ತಾನದ ಘಟನೆಯು ಸಂಯುಕ್ತ ರಾಜ್ಯಸ್ವರೂಪದ್ದಿದ್ದು ಪರಿಸ್ಥಿತಿಗೆ ತಕ್ಕಂತೆ ಮಾರ್ಪಾಟುಮಾಡಿ ಕೊಳ್ಳಲು ಅವಕಾಶವಿದೆ ಎಂದು ಘಟನಾಕರಡು ಸಮಿತಿಯ ಅಧ್ಯಕ್ಷರಾದ ಡಾ. ಬಿ. ಆರ್. ಅಂಬೇಡಕರರು ಘಟನೆಯನ್ನು ಸಾದರಪಡಿಸುತ್ತ ಮಾಡಿದ ಭಾಷಣದಲ್ಲಿ ಹೇಳಿದರು. ರಾಷ್ಟ್ರವನ್ನು ಶಾಂತಿ ಹಾಗು ಸಮರ ಕಾಲದಲ್ಲಿ ರಕ್ಷಿಸುವಷ್ಟು ಶಕ್ತಿ ಈ ಘಟನೆಯಲ್ಲಿ ಇದೆ ರಾಷ್ಟ್ರದಲ್ಲಿ ಯಾವದೇ ಅನಾಹುತ ಸಂಭವಿಸಿದರೆ ಅದು ಘಟನೆಯ ವಿಷಯವಾಗಿರದೆ ಮನುಷ್ಯನೇ ಕೀಳ್ಪಟ್ಟಕ್ಕಿಳಿದುದರ ಪರಿಣಾಮವೆಂದು ಹೇಳಬಹುದು ಎಂದು ಅವರು ನುಡಿದರು. ಅವರ ಭಾಷಣದ ಮುಖ್ಯಾಂಶ. ಕೇಂದ್ರ ಸರ್ಕಾರ ಬಲಿಷ್ಠ ಮತ್ತು ಪಾರ್ಲಮೆಂಟರಿ ಪದ್ಧತಿಯ ಪ್ರಜಾಪ್ರಭುತ್ವದಂತೆ ಇರುವದು, ಗ್ರಾಮಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ತಳಹದಿಯನ್ನು ಬಿಟ್ಟಿದ್ದು ಸಂತೋಷದ ಸಂಗತಿ. ಹಿಂದುಸ್ತಾನದ ಅಧಃಪತನಕ್ಕೆ ಈ ಗ್ರಾಮ ಪಂಚಾಯತಿ ಪದ್ಧತಿಯೆ ಕಾರಣವೆಂದು ನನ್ನ ಅಭಿಪ್ರಾಯ. ಅಂತೆಯೆ ನಾವು ಗ್ರಾಮವನ್ನು ರಾಜ್ಯಘಟನೆಯ ತಳಹದಿಯನ್ನಾಗಿ ಸ್ವೀಕರಿಸದೆ ವ್ಯಕ್ತಿಯನ್ನೆ ಸ್ವೀಕರಿಸಲಾಗಿದೆ ಎಂದು ಅಂಬೇಡಕರರು ಹೇಳಿದರು. ಅಲ್ಪಸಂಖ್ಯಾಕರಿಗೆ ಕೆಲ ರಕ್ಷಣೆ ಕೊಡಬೇಕೆಂದು ಸೂಚಿಸಿದ್ದು ಉಚಿತವಾಗಿದೆ ಕಾಲಾಂತರದಲ್ಲಿ ಅಲ್ಪಸಂಖ್ಯಾಕರನ್ನು ವಿಂಗಡಿಸಿ ನೋಡುವ ವೃತ್ತಿ ಹೋಗಿ ಈ ಸಂರಕ್ಷಣೆ ಅನವಶ್ಯವಾಗುವದೆಂದು ಕಾಲಾವಧಿ ಹಾಕಲಾಗಿದೆ. ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಆದೇಶಪತ್ರದ ಯೋಜನೆ ಮಾಡಲಾಗಿದೆ, ಮೂಲಭೂತ ಹಕ್ಕುಗಳ ಮೇಲೆ ಗದೆಬಂದಾಗ ಈ ಆದೇಶ ಪತ್ರದ ಮಹತ್ವವು ಗೊತ್ತಾಗುವದೆಂದೂ ಅವರು ಹೇಳಿದರು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೪

[illegible]

[illegible]

[illegible]

ಚಿನ್ನ—ಬೆಳ್ಳಿ

ತಯಾರಿ ಚಿನ್ನ	೧೧೪—೯—೦
ವಾಯದಾ ,,	೧೧೩—೧೪—೦
ಸಾವರಿನ	೭೬—೮—೦
ತಯಾರಿ ಬೆಳ್ಳಿ	೧೭೩—೧೬—೦
ವಾಯದಾ ,,	೧೭೬—೦—೦
ಬೇಂಬರ	೧೭೬—೦—೦

ಎಣ್ಣೆ ಕಾಳು

	ತಾ. ೪
ಶೇಂಗಾ	೧೭೪-೧೩-೦
ಅಗಸಿ	೨೬—೭-೦
,, ಹೊಸ ಬೆಳೆ	—
ಅಗಸಿ ಎಣ್ಣೆ	೧೬—೬—೦

ಸಾಂಗಲಿ

	ತಾ. ೩
ಅರಸಿಣ ಹೊಸ (ಹೇರು)	೧೪೦-೪
ಶೇಂಗಾ ಖಂಡಿ	೧೨೬-೨೫
ಮೆಣಸಿನಕಾಯಿ ಹೊಸ ಹೇರು	೧೬೦-೨೦೧
ಬೆಲ್ಲ ,,	೫೦- ೮೨-೪

ಶಿವಮೊಗ್ಗ ಅಡಿಕೆ

	ತಾ. ೩
ದೇಶಾವರ ನಂ. ೧ ಖಂಡ ೧ ಕ್ಕೆ	೪೦-೪೨
,, ,, ೨	೨೬-೪೦
,, ,, ೩	೨೯—೨೬
ತೊರಸಾಲು	೨೨—೨೬
ರಾಜಾಆಲವು	೨೬—೨೮
ಬೆಟ್ಟವಂತಿ	೧೯-೨೦
ಬೆಟ್ಟ	೧೬-೧೭

ಬೇಡಿಕೆ ಸಾಧಾರವಿದೆ. ಅಡಿಕೆ ಬೆಳೆಗಾರರಿಗೆ ಕಬ್ಬಾದಿಗೆ ಅನುಕೂಲವಾಗಲು ೧೫೦೦ ದಪ್ಪ ಚಿಮಣಿ ಎಣ್ಣೆಯನ್ನು ಹಂಚಲು ಕೊಡಲಾಗಿದೆ.

ಚಂದಾದಾರರಲ್ಲಿ ವಿನಂತಿ

—೦—

ದಯವಿಟ್ಟು ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷ್ಯಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡವಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ಹಿಂದಿರುಗಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆವೆಚ್ಚ ಸಹಿತ (ಮುಂಗಡವಾಗಿ)

೧ ವರ್ಷ	೬—೪—೦
೬ ತಿಂಗಳಿಗೆ	೩—೪—೦
೩ ,,	೧—೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ವ್ಹಿ. ಪಿ. ಖರ್ಚು ಹೆಚ್ಚಿಗೆ ಬೀಳುವದು.

ಕರ್ಮವೀರ

ಶ್ರೀಮದುಕ್ತಾಂತರ್ಗತ ವಿಶ್ವಮತ ... ಕಾರ್ತಿಕ ಶು ೭ ಸೋಮವಾರ

ಜಾಗತಿಕ ಶಾಂತಿಗೆ ಮದ್ದಾವುದು?

ಜಗತ್ತಿನಲ್ಲೆಲ್ಲ ಶಾಂತಿಯನ್ನು ಪ್ರಸ್ಥಾಪಿಸಬೇಕೆಂದು ಯುಕ್ತರಾಷ್ಟ್ರ ಸಂಘವು ಪ್ರಯತ್ನಿಸುತ್ತಿದೆ. ಮೊದಲನೆಯ ಮಹಾಯುದ್ಧಾನಂತರ ಸ್ಥಾಪಿತವಾಗಿದ್ದ ರಾಷ್ಟ್ರ ಸಂಘವೂ ಈ ಧ್ಯೇಯವನ್ನಿಟ್ಟುಕೊಂಡೇ ಕಾರ್ಯ ಮಾಡುತ್ತಿದ್ದಿತು. ಆದರೆ ಅದು ಧ್ಯೇಯವನ್ನು ಸಾಧಿಸಲು ಶಕ್ತವಾಗದೆ ಅಸ್ತವಾಯಿತು. ಯುಕ್ತರಾಷ್ಟ್ರದ ಹಣೆಬರಹವೂ ಅದರಂತೆ ಆಗಬಾರದೆಂದಿದ್ದರೆ ಅದರ ಪ್ರಬಲ ಸದಸ್ಯ ರಾಷ್ಟ್ರಗಳು ಶಾಂತಿ ಮಂತ್ರವನ್ನು ಬರಿ ಬಾಯಿಂದ ಜಪಿಸುತ್ತ ಕುಳಿತರೆ ನಡೆಯದು. ಅದಕ್ಕಾಗಿ ಹೃತ್ಪೂರ್ವಕ ಕಾರ್ಯಮಾಡಬೇಕು. ಸಣ್ಣ ಪುಟ್ಟ ವಿಷಯಗಳಲ್ಲಿ ವ್ಯರ್ಥ ವೇಳೆ ಕಳೆಯದೆ ಪರಸ್ಪರ ವಿಶ್ವಾಸ, ಪ್ರೇಮವನ್ನು ಗಳಿಸುವದಕ್ಕಾಗಿ ಮನವಾರೆ ದುಡಿಯಬೇಕು. ಹಿಂದುಸ್ತಾನದ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಪ್ಯಾರಿಸಿನಲ್ಲಿ ಯುಕ್ತರಾಷ್ಟ್ರ ಸಂಘದ ಸಾಮಾನ್ಯ ಸಭೆಯಲ್ಲಿ ಭಾಷಣ ಮಾಡುತ್ತ ಕೆಲ ಮಹತ್ವದ ಮಾತುಗಳನ್ನು ಹೇಳಿದ್ದಾರೆ. ಯುಕ್ತರಾಷ್ಟ್ರ ಸಂಘವು ಯುರೋಪದ ಪ್ರಬಲ ರಾಷ್ಟ್ರಗಳ ಮತ್ತು ಅಮೇರಿಕೆಯ ವರ್ಚಸ್ಸಿಗೊಳಗಾಗಿದ್ದರಿಂದ ಏಶಿಯದಲ್ಲಿಯ ರಾಷ್ಟ್ರಗಳ ನೆನಪೇ ಅದಕ್ಕಾಗುವದಿಲ್ಲ. ಯುರೋಪೆಂದರೇ ಅಖಿಲ ಜಗತ್ತು ಎಂಬ ಭಾವನೆ ಆ ಸಂಘದ ಪ್ರಮುಖ ಸದಸ್ಯರಲ್ಲಿ ಆದಂತಿದೆ. ಈ ತಪ್ಪು ಕಲ್ಪನೆಯನ್ನು ಹೋಗಲಾಡಿಸಿಕೊಂಡು ಅವರು ಏಶಿಯ ರಾಷ್ಟ್ರಗಳತ್ತ ಗಮನಿಸುವದು ಅವಶ್ಯವೆಂದು ಜವಾಹರಲಾಲರು ಸಕಾಲದಲ್ಲಿಯೇ ಎಚ್ಚರಿಸಿರುವರು. ಪರಸ್ಪರ ದ್ವೇಷ, ಸಂಶಯ ಹಿಂಸೆ ಸ್ವಾರ್ಥ ಭಾವನೆಯನ್ನು ಬಿಟ್ಟುಗೊಟ್ಟು, ಯುದ್ಧದ ಭೀತಿಯನ್ನು ತೆಗೆದುಹಾಕಿ ಶಾಂತಿಗಾಗಿ ಪ್ರಯತ್ನಿಸಿದರೆ ಮಾತ್ರ ಅದು ಸಾಧ್ಯವಾಗುವದು ಎಂದು ಪಂಡಿತರು ಅಭಿಪ್ರಾಯಪಟ್ಟಿರುವರು. ಮಹಾತ್ಮರು ಹೇಳಿಕೊಟ್ಟ ಆದರ್ಶ ಮಾರ್ಗವನ್ನು ಅನುಸರಿಸಿದರೆ ಧ್ಯೇಯವು ತಾನಾಗಿಯೇ ಸಿದ್ಧಿಸುವದೆಂದೂ ಅವರು ನುಡಿದಿರುವರು. ಧ್ಯೇಯವೊಂದೇ ಒಳ್ಳೆಯದಿದ್ದರೆ ನಡೆಯದು, ಅದರ ಜೊತೆ ಸಾಧನಗಳೂ ಒಳ್ಳೆಯವಿರಬೇಕೆಂದು ಮಹಾತ್ಮರು ಪದೇ ಪದೇ ಹೇಳುತ್ತಿದ್ದರು. ದ್ವೇಷ ಹಿಂಸೆಗಳು ಜಾಗತಿಕ ಶಾಂತಿಯನ್ನು ಸಂಸ್ಥಾಪಿಸವು, ಅವುಗಳಿಂದ ದ್ವೇಷ, ಹಿಂಸೆಗಳು ಮತ್ತಷ್ಟು ಹೆಚ್ಚುವವು, ಈ ದ್ವೇಷ ಹಿಂಸೆಗಳ ಚಕ್ರದಲ್ಲಿ ಸಿಕ್ಕು ಜಗತ್ತು ಅಪಾರ ಹಾನಿಗೊಳಗಾಗಬೇಕಾಗುವದು ಎಂದೂ ಅವರು ಹೇಳಿರುವರು.

ಕಾಲ್ಪನಿಕ ಯುದ್ಧ ಭೀತಿಯಿಂದ ಜಗತ್ತು ತಲ್ಲಣಿಸುತ್ತದೆ. ಈ ಯುದ್ಧ ಭೀತಿಯನ್ನು ಬಿಟ್ಟು ಕೊಡುವಲ್ಲಿಯೆ ಜಗತ್ತಿನ ಹಿತವಿದೆ, ಶಾಂತಿಯಿದೆ, ಸಮೃದ್ಧಿಯಿದೆ ಎಂದರವರು. ಪ್ರಬಲ ಅಣುಬಾಂಬು, ಪಾಶವೀಶಕ್ತಿ ಭಾರತವನ್ನು ಬೆದರಿಸಲಾರವೆಂಬುದು ಭಾರತದ ಸ್ವಾತಂತ್ರ್ಯ ಯುದ್ಧದಲ್ಲಿ ಸಿದ್ಧವಾಗಿದೆ. ಇದನ್ನೆ ಆದರ್ಶವಾಗಿಟ್ಟುಕೊಂಡು ಜಾಗತಿಕ ಸಮಸ್ಯೆಗಳನ್ನು ಬಿಡಿಸಲಣಿಯಾದರೆ ಧ್ಯೇಯವು ಕೈಗೂಡಬಲ್ಲದೆಂದೂ ಅವರ ಅಭಿಪ್ರಾಯ. ಜವಾಹರಲಾಲರ ಅಂತಃಕರಣದಿಂದ ಹೊರಹೊಮ್ಮಿದ ಈ ವಿಚಾರಗಳನ್ನು ಯುಕ್ತರಾಷ್ಟ್ರ ಸಂಘದ ಎಲ್ಲ ಸದಸ್ಯರು ಮನನ ಮಾಡಿ ಕಾರ್ಯಕ್ಕಣಿಯಾದರೆ ಯುದ್ಧದ ಭೀತಿ ಮಾಯವಾಗುವದಲ್ಲದೆ ಜಾಗತಿಕ ಶಾಂತಿಗೂ ಅವಕಾಶ ಸಿಕ್ಕುವದು.



ಸಂಸ್ಥಾನ ಶಾಖೆಯ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್, ಹೈದ್ರಾಬಾದದ ಮಿಲಿಟರಿ ಗವರ್ನರ ಮೇಜರ ಜನರಲ್ ಚೌಧರಿ, ಸಂಸ್ಥಾನ ಶಾಖೆಯ ಕಾರ್ಯದರ್ಶಿ ಶ್ರೀ ವೆಲ್ಲೋಡಿ ಮತ್ತು ಸಹಾಯಕ ಕಾರ್ಯದರ್ಶಿಗಳಾದ ಶ್ರೀಶಂಕರ ಮತ್ತು ಬೂಚ ಇವರೊಡನೆ ಸರದಾರ ವಲ್ಲಭಭಾಯಿ ಪಟೇಲರು ಮುಂಬಯಿಯ ತಮ್ಮ ನಿವಾಸಸ್ಥಾನದಲ್ಲಿ ಹೈದರಾಬಾದದ ಬಗ್ಗೆ ಚರ್ಚೆ ಮಾಡುತ್ತಿರುವರು. ಶ್ರೀ ಡಿ. ಎಸ್. ಬಖಲೆ ಮತ್ತು ಲಾಲ ಇವರೂ ಉಪಸ್ಥಿತರಿರುವರು.

ವಾರದ ಸಿಂಹಾವಲೋಕನ

ಒಕ್ಕೊರಲಿನ ಬೇಡಿಕೆ

ಘಟನಾ ಸಮಿತಿಯ ಅಧ್ಯಕ್ಷರಿಂದ ನೇಮಕವಾದ ದರ್ ಸಮಿತಿಯು ಕಳೆದ ವಾರ ಹುಬ್ಬಳ್ಳಿ, ಪುಣೆ ಮತ್ತು ಮುಂಬಯಿಗಳಲ್ಲಿ ಸಂಚರಿಸಿ ಭಾಷಾನ್ವಯ ಪ್ರಾಂತರಚನೆಯ ಸಂಬಂಧದಲ್ಲಿ ಸಾಕ್ಷಿ ಪುರಾವೆಗಳನ್ನು ತೆಗೆದುಕೊಂಡಿತು. ಸಮಿತಿಯ ಕಾರ್ಯಕಲಾಪಗಳ ಸಂಕ್ಷಿಪ್ತ ಯೋಜನೆಯನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಕೊಟ್ಟಿದ್ದೇವೆ. ಭಾಷಾನ್ವಯ ಪ್ರಾಂತಗಳಿಲ್ಲದ್ದಕ್ಕಾಗಿ ಬಗೆಬಗೆಯ ಕಷ್ಟನಷ್ಟಗಳ ಅನುಭವವಿಲ್ಲದ ಮುಂಬಯಿಯ ಹಲವು ಸಾಕ್ಷಿಗಳನ್ನು ಬಿಟ್ಟರೆ ಉಳಿದವರೆಲ್ಲ ಕೂಡಲೆ ಭಾಷಾನ್ವಯ ಪ್ರಾಂತಗಳಾಗಬೇಕೆಂದು ಸಮಿತಿಯ ಮುಂದೆ ಸಾಕ್ಷಿ ನುಡಿದರು. ಕರ್ನಾಟಕವು ಹಲವು ಆಡಳಿತೆಗಳಲ್ಲಿ ಹರಿದು ಹಂಚಿ ಹೋದ್ದರಿಂದ ಅದರ ಉನ್ನತಿಗೆ ಎಷ್ಟೊಂದು ಅಡ್ಡಿ ಆತಂಕಗಳಾಗುತ್ತಿವೆಂಬುವನ್ನು ಕೂಡಲೆ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತ ಕೊಡುವದೆಷ್ಟೊಂದು ಅಗತ್ಯವಾಗಿದೆಂಬುದನ್ನೂ ಕರ್ನಾಟಕದಲ್ಲಿಯ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮಹಾ ವ್ಯಕ್ತಿಗಳು ಸಮಿತಿಯವರಿಗೆ ಮನವಟ್ಟು ಮಾಡಿಕೊಟ್ಟರು. ಹಿಂದೂ ಮಧ್ಯಮ ಅಲ್ಪಸಂಖ್ಯಾಕರು ಮತ್ತು ಮಹಾರಾಷ್ಟ್ರ ಮಂಡಳದವರು ತಮಗೆ ಹಲವಾರು ಸಂರಕ್ಷಣೆಗಳನ್ನು ಬೇಡಿದರೂ ಕರ್ನಾಟಕ ಸ್ವತಂತ್ರ ಪ್ರಾಂತವನ್ನು ವಿರೋಧಿಸಲಿಲ್ಲ. ಕೊಂಕಣಿಗರ ಪರವಾಗಿ ಸಾಕ್ಷಿ ನುಡಿದವರು ಸ್ವತಂತ್ರ ಕೊಂಕಣ ಪ್ರಾಂತ ನಿರ್ಮಾಣವಾಗುವದು ಶಕ್ಯವಿಲ್ಲದ್ದರಿಂದ ಕೊಂಕಣಿಗರು ಕರ್ನಾಟಕದಲ್ಲಿಯೇ ಸೇರುವರಲ್ಲದೆ ಮಹಾರಾಷ್ಟ್ರದಲ್ಲಿ ಸೇರುವದಿಲ್ಲ ಎಂದು ಸ್ಪಷ್ಟಪಡಿಸಿದರು. ಗೋವೆಯ ಪ್ರತಿನಿಧಿಗಳಾದ ಶ್ರೀ ರಿಬೆರೋ ಅವರೂ ಗೋವಾ ಪ್ರಾಂತವು ಮಹಾರಾಷ್ಟ್ರದಲ್ಲಿ ಸೇರಬಯಸುವದಿಲ್ಲ ಕರ್ನಾಟಕದಲ್ಲಿಯೇ ಸೇರುವದು ಎಂದು ಮುಂದಟ್ಟಾಗುವಂತೆ ನುಡಿದರು. ಕರ್ನಾಟಕವು ಸ್ವತಂತ್ರ ಪ್ರಾಂತವಾಗಲು ಎಲ್ಲ ಬಗೆಯಿಂದ ಯೋಗ್ಯವಾಗಿದೆಂದು ಅಂಕಿಸಂಖ್ಯೆ ಮತ್ತು ಉಳಿದ ಪುರಾವೆಗಳಿಂದ ಸಿದ್ಧ ಮಾಡಿ ಕೊಡಲಾಯಿತು. ಮೈಸೂರು ಕರ್ನಾಟಕದಲ್ಲಿ ಸೇರದಿದ್ದರೂ ಕರ್ನಾಟಕವು ಸ್ವತಂತ್ರ ಪ್ರಾಂತವಾಗಿ ಯಶಸ್ವಿಯಾಗಿ ತನ್ನ ಆಡಳಿತವನ್ನು ಸಾಗಿಸಬಲ್ಲದು ಎಂಬದನ್ನೂ ಸ್ಪಷ್ಟಪಡಿಸಲಾಯಿತು. ಮಹಾರಾಷ್ಟ್ರದ ಪ್ರಮುಖರು ಈ ಭಾಷಾನ್ವಯ ಪ್ರಾಂತಗಳ ರಚನೆಗೆ ಬೆಂಬಲ ಕೊಟ್ಟರು. ಕರ್ನಾಟಕಸ್ಥರು ಮತ್ತು ಮಹಾರಾಷ್ಟ್ರೀಯರು ಅದರಂತೆ ತಮಿಳು ತೆಲುಗರು ಭಾಷಾನ್ವಯ ಪ್ರಾಂತ ರಚನೆಗೆ ಎಷ್ಟು ಆತುರರಾಗಿರುವರೆಂಬುವನ್ನು ನೆನೆದು ದರ್ ಸಮಿತಿಯವರು ಆ ಬಗೆಯಾಗಿ ಶಿಫಾರಸು ಮಾಡುವರೆಂದು ನೆರೆನಂಬಿದ್ದೇವೆ.

ಕರ್ನಾಟಕ ವಿಶ್ವವಿದ್ಯಾಲಯ

ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯ ಸಂಬಂಧದಲ್ಲಿ ವಿಚಾರ ಮಾಡಿ ವರದಿ ಒಪ್ಪಿಸಲು ಮುಂಬಯಿ ಸರಕಾರದವರು ನೇಮಿಸಿದ್ದ ಲೋಕೂರ ಸಮಿತಿಯ ವರದಿಯೀಗ ಪ್ರಸಿದ್ಧವಾಗಿದೆ. ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವಿಲ್ಲದ್ದರಿಂದ ಅದು ಬಗೆಬಗೆಯ ಕಷ್ಟನಿಷ್ಠುರ ಅಡಚಣಿಗಳನ್ನು ಅನುಭವಿಸುತಿರುವಂತೆ ಸ್ವತಂತ್ರ ವಿಶ್ವವಿದ್ಯಾಲಯವಿರದ್ದರಿಂದ ಕನ್ನಡ ಕುವರರು ಉಚ್ಚ ಶಿಕ್ಷಣಕ್ಕಾಗಿ ಬಹಳ ತೊಂದರೆ ತಾಪತ್ರಯಗಳನ್ನು ಅನುಭವಿಸಬೇಕಾಗುತ್ತಿದೆ. ಕರ್ನಾಟಕದಲ್ಲಿ ಒಂದು ಸರಕಾರೀ ಕಾಲೇಜು ಸ್ಥಾಪಿತವಾಗಬೇಕಾದರೆ ಕನ್ನಡಿಗರು ಎರಡು ಲಕ್ಷ ರೂಪಾಯಿಗಳನ್ನು ಕೂಡಿಸಿ ಕೊಡಬೇಕಾಗಿ ಬಂತು; ಇದೆಲ್ಲವೂ ಸ್ವತಂತ್ರ ಪ್ರಾಂತವಿಲ್ಲದಿರುವುದಕ್ಕಾಗಿ. ಇರಲಿ. ಲೋಕೂರ ಸಮಿತಿಯವರು ಕರ್ನಾಟಕದ ಶಿಕ್ಷಣಜ್ಞರ ಮತ್ತು ಉಳಿದ ಮಹನೀಯರ ಸಾಕ್ಷಿ ಪುರಾವೆಗಳನ್ನು ತೆಗೆದುಕೊಂಡು ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆ ಅತ್ಯಗತ್ಯವೆಂದು ಶಿಫಾರಸು ಮಾಡಿದ್ದಾರೆ. ಮುಂಬಯಿ ಪ್ರಾಂತದಲ್ಲಿಯ ಕನ್ನಡ ಜಿಲ್ಹೆ, ವಿಲೀನವಾದ ಕನ್ನಡ ಸಂಸ್ಥಾನ ಪ್ರದೇಶ, ಈ ಕರ್ನಾಟಕ ಪ್ರಾದೇಶಿಕ ವಿಶ್ವವಿದ್ಯಾಲಯದಲ್ಲಿ ಸಮಾವೇಶವಾಗಬೇಕಲ್ಲದೆ ಮದ್ರಾಸ ಪ್ರಾಂತದ ಬಳ್ಳಾರಿ ದಕ್ಷಿಣ ಕನ್ನಡ ಜಿಲ್ಹೆಗಳು ಸಮಾವೇಶವಾಗುವಂತೆ ವಿರ್ಸಡಿಸಬೇಕೆಂದು ಸೂಚಿಸಲಾಗಿದೆ. ಈ ವಿಶ್ವವಿದ್ಯಾಲಯದ ಪರೀಕ್ಷೆಯಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗಿರಬೇಕೆಂದು ಸೂಚಿಸಲಾಗಿದೆ. ಪದವೀಧರೋತ್ತರ ಅಭ್ಯಾಸವು ಹಿಂದಿಯಲ್ಲಿ ನಡೆಯಬೇಕೆಂದು ಸೂಚಿಸಿದ್ದಾರೆ. ಸಮಿತಿಯವರು ಇದರಿಂದ ಹಿಂದುಸ್ತಾನದ ಏಕತೆಗೆ ಒಳ್ಳೆ ಅನುಕೂಲ ವಾತಾವರಣವುಂಟಾಗುವದೆಂದು ಅಭಿಪ್ರಾಯಪಟ್ಟಿದ್ದಾರೆ. ವಿಶ್ವವಿದ್ಯಾಲಯಕ್ಕೆ ಮೂಲ ವೆಚ್ಚಕ್ಕಾಗಿ ಮೊದಲಿನ ಐದು ವರ್ಷಗಳಲ್ಲಿ ೪೦ ಲಕ್ಷ ರೂಪಾಯಿಗಳು ಬೇಕಾಗುವವು. ಇದರಲ್ಲಿ ೩೦ ಲಕ್ಷ ರೂಪಾಯಿಗಳನ್ನು ಸರಕಾರವು ಕೊಡಬೇಕು. ಅದರ ವೆಚ್ಚಕ್ಕೆಂದು ಸರಕಾರವು ಪ್ರತಿವರ್ಷ ಏಳು ಲಕ್ಷ ರೂಪಾಯಿಗಳನ್ನು ಕೊಡುತ್ತ ಹೋಗಬೇಕೆಂದು ಸಮಿತಿ ಸೂಚಿಸಿದೆ. ಮುಂಬಯಿ ಸರಕಾರದವರು ಕರ್ನಾಟಕ ವಿಶ್ವವಿದ್ಯಾಲಯವು ಬೇಗನೆ ಸ್ಥಾಪಿತವಾಗುವದಕ್ಕೆ ಅವಶ್ಯಕ ಕ್ರಮವನ್ನು ಕೈಕೊಳ್ಳಬೇಕೆಂದು ಬಿನ್ನವಿಸುತ್ತೇವೆ.

ದೀರ್ಘಾಯುಗಳಾಗಲಿ

ಭಾರತದ ಹಿರಿಯ ಮುಂದಾಳುಗಳಾದ ಸರದಾರ ವಲ್ಲಭಭಾಯಿ ಪಟೇಲರಿಗೆ ಕಳೆದ ೩೧ ನೇ ತಾರೀಖಿಗೆ ೭೩ ವರುಷ ತುಂಬಿದವು. ಅವರ ೭೪ ನೇ ವರ್ಧಂತ್ಯುತ್ಸವವು ಅವರ ರಾಜಕೀಯ ಕಾರ್ಯಕ್ಷೇತ್ರದ ಪ್ರಮುಖ ನಗರವಾದ ಮುಂಬಯಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಆ ಕಾಲಕ್ಕೆ ಅವರಿಗೆ ೭೩೧ ತೊಲಿ ಚಿನ್ನದ ಅಶೋಕಸ್ತಂಭವನ್ನು ಸಮರ್ಪಿಸಿ ಅವರನ್ನು ಗೌರವಿಸಲಾಯಿತು. ಬಾರ್ಡೋಲಿಯ ಸತ್ಯಾಗ್ರಹದಲ್ಲಿ ಬಲಾಢ್ಯ ಬ್ರಿಟಿಶ ಸರಕಾರದ ಬಲವನ್ನು ಮಣ್ಣುಮುಕ್ಕಿಸಿ ಯಶಸ್ವಿಯಾಗಿ ಸರದಾರ ಬಿರುದನ್ನು ಪಡೆದ ಸರದಾರ ವಲ್ಲಭಭಾಯರು ಈಗ ಇಡೀ ಹಿಂದುಸ್ತಾನವನ್ನು ಒಂದೇ ಆಡಳಿತ ಸೂತ್ರದಲ್ಲಿ ತರುವಲ್ಲಿ ಬಹಳ ಮಟ್ಟಿಗೆ ಯಶಸ್ವಿಯಾಗಿ ಸಮಸ್ತ ಭಾರತವರ್ಷದ ಸರದಾರ ಪದವನ್ನು ಸಂಪಾದಿಸಿದರು. ಸರದಾರರು ಬಾಯಿಬಡಾಯಿ ಕೊಚ್ಚುವವರಲ್ಲ ಒಳ್ಳೆ ಕರ್ತೃತ್ವಶಾಲಿಗಳು. ಆಡಿದಂತೆ ಮಾಡಿತೋರಿಸುವವರು. ಎರಡನೆಯವರು ಎಷ್ಟೇ ಚುಚ್ಚು ನುಡಿದರೂ ಹೆದರದೆ ಬೆದರದೆ ತನ್ನ ನಿರ್ಧಾರದಂತೆ ಮುಂದಡಿಯಿಡುವವರು. ಹೈದರಾಬಾದದ ಸಂಬಂಧದಲ್ಲಿ ಸರದಾರರು ವಹಿಸಿದ್ದ ಧೋರಣದ ಬಗ್ಗೆ ಅನೇಕರು ಟೀಕೆ ಮಾಡಿದರು. ಸರದಾರರು ಅತ್ತ ಗಮನಿಸದೆ ಸಕಾಲದಲ್ಲಿಯೇ ತಕ್ಕಕ್ರಮವನ್ನು ಕೈಕೊಂಡು ಯಶಸ್ವಿಯಾದರು. ಈಗ ಕಾಶ್ಮೀರ ಸಮಸ್ಯೆಯತ್ತ ಅವರು ಗಮನಕೊಡುತಿರುವರು. ಸರ್ವಾಧರಣೀಯರಾದ ಸರದಾರರಿಗೆ ಜಗಚ್ಚಾಲಕನು ದೀರ್ಘಾಯುರಾರೋಗ್ಯವನ್ನು ದಯಪಾಲಿಸಿ ಹಿಂದುಸ್ತಾನವನ್ನು ಸರ್ವಾಂಗಸುಂದರ ನಾಡನ್ನಾಗಿ ಮಾಡುವ ಶಕ್ತಿಯನ್ನು ಅನುಗ್ರಹಿಸಲಿ.

ಗಾಂಧೀಜಿಯ ಚತುಃ ಸೂತ್ರಗಳು

ಹಿಂದುಸ್ತಾನ ಸರಕಾರದ ಉಪಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಮುಂಬಯಿ ನಾಗಪುರ ವರ್ಧಾಗಳಲ್ಲಿ ಮಾಡಿದ ಭಾಷಣಗಳು ಅತ್ಯಂತ ಮನನೀಯವಾಗಿವೆ. ಗಳಿಸಿದ ಸ್ವಾತಂತ್ರ್ಯವನ್ನು ಅರಗಿಸಿಕೊಂಡು ಹಿಂದುಸ್ತಾನವನ್ನು ಸರ್ವಾಂಗಸುಂದರ ಆದರ್ಶ ರಾಷ್ಟ್ರವನ್ನಾಗಿ ಮಾಡುವ ಅವಶ್ಯಕತೆಯನ್ನು ಸರದಾರರು ಒತ್ತಿ ಹೇಳಿರುವರು. ಗಾಂಧೀಜಿಯವರ ಚತುಃಸೂತ್ರಗಳಲ್ಲಿ ಕೆಲ ಮಟ್ಟಿಗೆ ದೇಶವು ಪ್ರಗತಿ ಪಡೆದಿದ್ದರೂ ಅವು ಪೂರ್ಣ ಯಶಸ್ವಿಯಾಗಬೇಕಾದುದು ಅಗತ್ಯವಾಗಿದೆಂದು ಅವರು ಪ್ರತಿಪಾದಿಸಿದ್ದಾರೆ ಅಸ್ಪೃಶ್ಯತಾ ನಿವಾರಣೆ, ವಸ್ತ್ರ ಸ್ವಾವಲಂಬನೆ ಹಿಂದು ಮುಸಲ್ಮಾನ ಐಕ್ಯ ಮತ್ತು ರಾಷ್ಟ್ರೀಯ ಶಿಕ್ಷಣ ಇವೇ ಆ ಚತುಃಸೂತ್ರಗಳಾಗಿದ್ದು ಇವನ್ನು ಪರಿಪೂರ್ಣಗೊಳಿಸಲು ಭಾರತೀಯರೆಲ್ಲ ಪರಿಶ್ರಮಿಸಬೇಕೆಂದು ಸರದಾರರು ಕೇಳಿಕೊಂಡಿರುವರು. ಯುವಕರು ಹೊಣೆಯರಿತು ಕಾರ್ಯ ಮಾಡಬೇಕೆಂದು ಉಪದೇಶಿಸಿರುವರು. ಸದ್ಯದ ವಿಷಮ ಪರಿಸ್ಥಿತಿಯಲ್ಲಿ ಸರದಾರರಂಥ ಮಾನ್ಯ ಮುಂದಾಳುಗಳ ಉಪದೇಶಾಮೃತದಂತೆ ನಡೆಯುವದೇ ಭಾರತೀಯರೆಲ್ಲರ ಕರ್ತವ್ಯವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಭಯ ಮತ್ತು ಶಂಕೆ

ಒಬ್ಬರು ಬರೆಯುತ್ತಾರೆ:—

"ಭಾರತದಲ್ಲಿ ಅಧಿಕಾಂಶ ಪತ್ರಿಕೆಗಳು ಹೈದರಾಬಾದದ ಮೇಲೆ ಕೈಕೊಳ್ಳಲ್ಪಟ್ಟ ಪೋಲೀಸು ಕ್ರಮವನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿವೆ. ಅವುಗಳಲ್ಲಿ ಹೆಚ್ಚಿನವುಗಳು ಅದು ಕೈಕೊಳ್ಳಲ್ಪಡುವದಕ್ಕೆ ಎಷ್ಟೋ ಮುಂಚೆಯೇ ಅಂಥ ಏನಾದರೊಂದು ಕ್ರಮವನ್ನು ಕೈಕೊಳ್ಳಬೇಕೆಂದು ಸರಕಾರಕ್ಕೆ ಉತ್ತೇಜನ ಕೊಡುತ್ತಿದ್ದವು. ಪೋಲೀಸುಕ್ರಮ ಸೆಪ್ಟೆಂಬರ ೧೩ ನೇ ದಿನ ಪ್ರಾರಂಭವಾದರೂ ನೀವು ೨೬ ನೇ ದಿನದ ವರೆಗೆ ಏನೂ ಹೇಳಲಿಲ್ಲ. ತಾ. ೨೬ ರ "ಹರಿಜನ"ದಲ್ಲಿ ನೀವು ಬರೆದುದರಲ್ಲಿಯೂ ಸ್ಪಷ್ಟತೆಯ ಅಭಾವವಿದೆ; ಅದು ಮಹಾತ್ಮಾಜಿಯವರ ಉಪದೇಶಗಳಿಗೆ ಅನುಸಾರವಾಗಿಯೂ ಇಲ್ಲ. ಮಹಾತ್ಮಾಜಿಯವರದೇ ಆಗಿದ್ದ "ಹರಿಜನ" ಪತ್ರಿಕೆಯಲ್ಲಿ ಅವರ ವಿಚಾರಗಳನ್ನು ಪ್ರತಿಪಾದಿಸುವಾಗ ಭೀತಿಗಾಗಲಿ ಶಂಕೆಗಾಗಲಿ ಎಡೆಯಿರಕೂಡದೆಂದು ನನ್ನಂಥವರು ಅಪೇಕ್ಷಿಸುತ್ತಾರೆ. ಹೈದರಾಬಾದ ಪೋಲಿಸುಕ್ರಮವನ್ನು ಕುರಿತ ನಿಮ್ಮ ಉಲ್ಲೇಖಗಳು ಸಂದಿಗ್ಧವಾಗಿವೆ; ಅಂತರ್ಯವನ್ನು ದಮನ ಮಾಡಿ ಬರೆದಂತಿವೆ. ಅದು ಗಾಂಧೀಜಿಯ ಅಹಿಂಸಾತತ್ವಕ್ಕೆ ವ್ಯತಿರಿಕ್ತವೂ ಆಗಿದೆ.

"ಭಾರತ ಸರಕಾರದವರು ಹೈದರಾಬಾದದ ಮೇಲೆ ಕೈಕೊಂಡ ಸಮರ ಕ್ರಮವನ್ನು ಮಹಾತ್ಮಾಜಿಯವರ ತತ್ವಗಳ ಆಧಾರದಿಂದ ಸಮರ್ಥಿಸುವದು ಎಂದೆಂದೂ ಸಾಧ್ಯವಿಲ್ಲ. ಭಾರತ ಸರಕಾರದವರು ಮುಂದೊಡ್ಡಬಹುದಾದ ಒಂದೇ ಒಂದು ಸಮರ್ಥನೆಯೆಂದರೆ, ಕೈಬೆರಳಲ್ಲೆಣಿಸುವಷ್ಟು ಜನರು ಹೈದರಾಬಾದಿನ ಜನತೆಯ ನಿಜವಾದ ದನಿಯನ್ನು ಉಡುಗಿಸಿ ಅವರ ಮೇಲೆ ದಬ್ಬಾಳಿಕೆಯನ್ನು ನಡೆಸುತ್ತಿದ್ದರೆಂಬುದು. ಆದರೆ ೨೫ ವರ್ಷಗಳ ಹಿಂದೆ ಮಹಾತ್ಮಾಜಿಯವರು ಸ್ವಾತಂತ್ರ್ಯ ಸಮರದ ಕಹಳೆಯನ್ನೂದಿದಾಗ ಭಾರತದಲ್ಲಿ ಸ್ಥಿತಿಗತಿ ಹೀಗೆಯೇ ಇದ್ದಿಲ್ಲವೆ? ಇಲ್ಲಿಯೂ ವಿದೇಶೀಯರಾದ ಕೆಲವರೇ ಬ್ರಿಟಿಶರು ಸೈನ್ಯಬಲದಿಂದ ನಮ್ಮ ದೇಶವನ್ನು ಆಳುತ್ತಿದ್ದಿಲ್ಲವೆ? ಆ ನಮ್ಮ ಹೋರಾಟದಲ್ಲಿ ಮಹಾತ್ಮಾಜಿಯವರು ಹೊರಗಿನವರ ಸಶಸ್ತ್ರ ಹಸ್ತಕ್ಷೇಪವನ್ನು ಎಂದೂ ಅಪೇಕ್ಷಿಸದೆ ಒಳಗೇ ಜನರಲ್ಲಿ ಸತ್ಯ ಅಹಿಂಸೆಗಳ ಮೂಲಕ ಸತ್ವವನ್ನು ತುಂಬಿ ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸಿದರು. ಈ ಎರಡು ಪ್ರಕರಣಗಳಲ್ಲಿ ಅಲ್ಪ ಸ್ವಲ್ಪ ಭೇದವಿರುವದು ನಿಜ; ಆದರೆ ಮುಖ್ಯ ವಿಷಯಗಳಲ್ಲಿ ಅವೆರಡೂ ಒಂದೇ ಬಗೆಯಾಗಿವೆ.

"ಕೈಬೆರಳಲ್ಲೆಣಿಸುವಷ್ಟು ಜನ ಪುಂಡರಿಗೆ ಬೆದರಿ ನಿಸ್ಸಹಾಯರಾಗಿ ಅವರಿಗೆ ತಲೆವಾಗುವಷ್ಟು ಮಟ್ಟಿಗೆ ಹೈದರಾಬಾದ ಜನತೆಯ ಧೃತಿ ಕುಗ್ಗಿ ಹೋಗಿದ್ದರೆ ಅವರಲ್ಲಿ ಧೃತಿಯನ್ನು ತುಂಬಿಸಿ ಸತ್ಯ ಅಹಿಂಸೆಗಳ ಮೂಲಕ ಹೋರಾಡಲು ಸಿದ್ಧರಾಗುವಂತೆ ಅವರನ್ನು ಸಂಘಟಿಸಿ ಬಲಗೊಳಿಸಬೇಕಾಗಿತ್ತು. ಆದರೆ ಹಿಂದುಸ್ತಾನ—ಮಹಾತ್ಮಾಜಿಯವರ ಅನುಯಾಯಿಯೆಂದು ಹೇಳಿಕೊಳ್ಳುವ ಹಿಂದುಸ್ತಾನ—ಮಾಡಿದ್ದೇನು? ರಜಾಕಾರ ಪುಂಡರನ್ನು ಗುಂಡಿನ ಬಲದಿಂದ ಸದೆದು ನೂರಕ್ಕೆಂಭತ್ತೈದು ಜನರನ್ನು ಅದು ವಿಮೋಚನಗೊಳಿಸಿತು. ಮಹಾತ್ಮಾಜಿಯವರು ಇಂದು ಜೀವಂತರಾಗಿದ್ದಿದ್ದರೆ, ಅವರು ಹೈದ್ರಾಬಾದಕ್ಕೆ ಹೋಗಿ ಅಲ್ಲಿಯ ಜನರಿಗೆ ಸತ್ಯಾಗ್ರಹ ಮಾರ್ಗವನ್ನು ಬೋಧಿಸಿ, ರಜಾಕಾರರನ್ನೂ ಅವರ ಮುಂದಾಳುಗಳನ್ನೂ ಪ್ರೇಮದಿಂದ ಒಲಿಸಿಕೊಳ್ಳುತ್ತಿದ್ದರೆಂಬಲ್ಲಿ ನನಗೇನೂ ಸಂದೇಹವಿಲ್ಲ. ಭಾರತದ ಒಂದು ಭಾಗಕ್ಕೆ ಇನ್ನೊಂದು ಭಾಗದ ಮೇಲೆ ಶಸ್ತ್ರಬಲವನ್ನು ಪ್ರಯೋಗಿಸಲು ಅವರೆಂದೂ ಅನುವುಗೊಡುತ್ತಿರಲಿಲ್ಲ.

"ಹೈದರಾಬಾದದ ಪೋಲೀಸು ಕ್ರಮವನ್ನು ಬ್ರಿಟಿಶರು ಹಿಟ್ಲೆರನ ಅಭಿಯೋಗದ ಗಂಡಾಂತರಕ್ಕೊಳಗಾದಾಗ ಅವರಿಗೆ ಗಾಂಧೀಜಿಯವರು ಕೊಟ್ಟ ಉಪದೇಶದೊಡನೆ ಅಥವಾ ಭಾರತದ ಮೇಲೆ ಜಪಾನಿ ಆಕ್ರಮಣವಾಗುವ ಭಯ ವುಂಟಾದಾದ ನಾವು ಕೈಕೊಳ್ಳಬೇಕೆಂದು ಅವರು ಸೂಚಿಸಿದ ನೀತಿಯೊಡನೆ ಹೊಂದುಗೂಡಿಸುವದು ಸರ್ವಥಾ ಸಾಧ್ಯವಿಲ್ಲ. ಜನರು ಅಭಿಯೋಗವನ್ನು ಖಡ್ಗದಿಂದಲ್ಲ, ಸತ್ಯದಿಂದ ಮತ್ತು ಅಹಿಂಸಾತ್ಮಕ ಅಸಹಕಾರದಿಂದ ಪ್ರತಿಭಟಿಸಬೇಕೆಂದು ಮಹಾತ್ಮಾಜಿ ಸೂಚಿಸಿದ್ದರು. ಅಂದ ಮೇಲೆ ರಜಾಕಾರರ ಉಪಟಳವನು ಅದೇ ರೀತಿಯಲ್ಲಿ ಎದುರಿಸಬೇಕೆಂದು ಹೈದರಾಬಾದ ಜನತೆಗೆ ಅವರು ಉಪದೇಶಿಸುತ್ತಿದ್ದಿಲ್ಲವೆ? ನಾವು ಮಹಾತ್ಮಾಜಿಯ ಉಪದೇಶಗಳನ್ನು ಬಿಟ್ಟು ಎತ್ತಲೋ ತೇಲಿಹೋಗುತ್ತಿದ್ದೇವೆಂಬಲ್ಲಿ ಯಾವ ಸಂಶಯವೂ ಇಲ್ಲ.

"ನಿಮ್ಮ ಬರೆಹಗಳನ್ನೋದಿದರೆ ನಿಮಗೆ ಮಹಾತ್ಮಾಜಿಯ ಮಾರ್ಗಗಳು ಸಮ್ಮತವಾಗಿವೆಯೆಂದು ನನಗೆ ತೋರುತ್ತದೆ.' ಆದರೆ ನೀವು ನಿಮ್ಮ ವಿಚಾರಗಳನ್ನು ಸ್ಪಷ್ಟವಾಗಿ ಪ್ರತಿಪಾದಿಸಲು ಶಂಕಿಸುವಂತೆ ಭಾಸವಾಗುತ್ತದೆ. ಶಾಸನದ ಭಯದಿಂದ ನೀವು ಹೀಗೆ ಮಾಡುತಿರಬಹುದೇನೊ. ಆದರೆ ನಿಮಗೆ ನಿಜವಾಗಿ ಮಹಾತ್ಮಾಜಿಯ ತತ್ವಗಳನ್ನು ಪ್ರಚುರಪಡಿಸಬೇಕೆಂದಿದ್ದರೆ ನೀವು ಶಾಸನಕ್ಕೆ ಹೆದರಬಾರದು—ಆ ಶಾಸನ ನಮ್ಮದೇ ಆದ ರಾಷ್ಟ್ರೀಯ ಸರಕಾರದ್ದೇ ಇರಲೊಲ್ಲದೇಕೆ. "ಹರಿಜನ"ದಲ್ಲಿ ಈಗ ಬರುತಿರುವ ಲೇಖಗಳು ಮಹಾತ್ಮಾಜಿಯ ಬರೆವಣಿಗೆಗಳಲ್ಲಿ ತುಂಬಿ ತುಳುಕುತಿದ್ದ ನಿರ್ಭಯತೆ, ಮೌಲಿಕತೆ, ಉಜ್ವಲ ಆಶಾವಾದ, ನವ ವಿಚಾರಗಳ ಪ್ರಸಾರದ ಲವಲವಿಕೆ ಇವೇ ಮೊದಲಾದ ಜನಪ್ರಿಯವಾದ ಗುಣಗಳಿಂದ ವಿರಹಿತವಾಗಿರುವದೇ ಈಗ ಆ ಪತ್ರಿಕೆಯ ಪ್ರಸಾರ ಇಳಿಯಲು ಕಾರಣವಾಗಿದ್ದರೂ ಇರಬಹುದು.

"ತಾ. ೨೬ ಸೆಪ್ಟೆಂಬರದ "ಹರಿಜನ" ಸೇವಕದಲ್ಲಿ ನೀವೇ ಹೇಳಿರುವ ಮಾತನ್ನು ಉದಾಹರಿಲು ಅಪೇಕ್ಷಿಸುತ್ತೇನೆ: 'ಸೈನ್ಯದ ಮೇಲಿನ ಅವಲಂಬನೆಯನ್ನು ನಾವು ತ್ಯಜಿಸಿದಾಗಲೆ ನಿಜವಾದ ಪ್ರಜಾತಂತ್ರ ಸ್ಥಾಪಿತವಾದೆಂತೆ. ಇದು ಅಹಿಂಸಾತ್ಮಕ ಸಾಧನಗಳಿಂದ ಮಾತ್ರ ಸಾಧ್ಯವಾದೀತು. ಶಸ್ತ್ರಬಲವನ್ನು ಹಿಂಸೆಯಿಂದ ಎದುರಿಸುವದೆಂದರೆ ಒಂದು ಪ್ರತಿಸೈನ್ಯವನ್ನು ನಿರ್ಮಿಸಿ ಅದಕ್ಕೆ ಅಡಿಯಾಳಾಗಿ ನಡೆದುಕೊಳ್ಳುವದು' ಹೈದರಾಬಾದದ ವಿಷಯದಲ್ಲಿಯೂ ನೀವು ಅದೇ ನಿರ್ಭಯ ನಿರ್ದಾಕ್ಷಿಣ್ಯ ಭಾವದಿಂದ ಬರೆದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. "ಹರಿಜನ"ವೂ ಭಯ-ಅಜ್ಞಾನಗಳಿಗೆ ಒಳಗಾಯಿತೆಂದರೆ ಸತ್ಯದ ನಂದಾದೀಪವನ್ನು ಯಾರು ಉರಿಸುತ್ತ ಹೋಗಬೇಕು?"

ಮೇಲಿನ ಪತ್ರದಲ್ಲಿ ಆರೋಪಿಸಲ್ಪಟ್ಟ ಕೆಲವು ದೋಷಗಳಿಗೆ ನಾನು ಭಾಜನನಾಗಿರುವದು ನಿಜವೆಂದು ಒಪ್ಪಿಕೊಳ್ಳುತ್ತೇನೆ. ಹೈದರಾಬಾದದಲ್ಲಿ ತಾನೇ ತಾನಾಗಿದ್ದ ಕೇಡುಗಳಿಗೆ ಶುದ್ಧ ಅಹಿಂಸಾತ್ಮಕ ಪ್ರತೀಕಾರೋಪಾಯವನ್ನು ಸೂಚಿಸಲು ನಾನು ಸಮರ್ಥನಾಗಲಿಲ್ಲ. ಅಹಿಂಸೆಯ ಆರಾಧಕನು ದುಷ್ಕರ್ಮಿಗಳ ಕೈಯಲ್ಲಿ ಮೃತ್ಯುವನ್ನಾದರೂ ಸ್ವಾಗತಿಸುವನೆಂಬೀ ಮಾದರಿಯ ಬಾಪುವಿನ ಕೆಲ ಉಪದೇಶಗಳನ್ನು ನಾನು ಪುನರುಚ್ಚಾರ ಮಾಡಬಹುದಾಗಿತ್ತು. ಆದರೆ ಗಾಂಧೀಜಿಯ ಮರಣಾನಂತರ, ಯಾರಲ್ಲಿ ಅಹಿಂಸಾತ್ಮಕವಾಗಿ ಮಾಡುವ ಇಲ್ಲವೆ ಮಡಿಯುವ ದಿಟ್ಟತನವುಂಟೋ ಅವರು ನನ್ನ ಮಾರ್ಗದರ್ಶನವನ್ನು ಅಪೇಕ್ಷಿಸುವದೇ ಇಲ್ಲ ಮತ್ತು ಯಾರು ಅಪೇಕ್ಷಿಸುವರೋ ಅವರಲ್ಲಿ ಅಂಥ ಧೈರ್ಯವೇ ಇಲ್ಲವೆಂದಾಗಿದೆ. ಅವರು ಅದಕ್ಕಿಂತಲೂ ಕಡಿಮೆ ಅಪಾಯಕರವಾದ ಹಾದಿಗಳನ್ನು ಹುಡುಕುತ್ತಾರೆ. ಹೋಗಿರಿ, ಮಡಿಯಿರಿ ಎಂದು ಬಾಪು ಜನರಿಗೆ ಹೇಳುತ್ತಿದ್ದರು—ಏಕೆಂದರೆ ಅಂಥ ಪ್ರಸಂಗ ಒದಗಿದರೆ ಸ್ವತಃ ಹೈದರಾಬಾದಕ್ಕೆ ಹೋಗಲು ಅವರು ಸಿದ್ಧರಾಗುತಿದ್ದರು. ಇತರ ಆತಂಕಗಳನ್ನು ಬದಿಗಿಟ್ಟರೂ ನಾನು ಆ ಕೆಲಸಕ್ಕೆ ಶರೀರತಃ ಅಯೋಗ್ಯನಿದ್ದೇನೆ. ಭಾರತೀಯ ಪತ್ರಿಕೆಗಳು ಸಮರ ಕ್ರಮಕ್ಕಾಗಿ ಕಿರಿಚಿಕೊಂಡವು. ಅದನ್ನು ಕಂಡು ನನಗೆ ವ್ಯಥೆಯಾಯಿತು. ಆದರೆ ಎಲ್ಲಿವರೆಗೆ ನಾನು ಬೇರೊಂದು ದಿಕ್ಕು ತೋರಿಸಲು ಅಸಮರ್ಥನಾಗಿದ್ದೆನೋ ಅಲ್ಲಿ ವರೆಗೆ ಅದನ್ನು ನಾನು ಖಂಡಿಸಬಲ್ಲೆನಾದರೂ ಹೇಗೆ? ಸಾಮಾನ್ಯ ಜನರು ಮಾತ್ರವಲ್ಲ, ಅಹಿಂಸೆಯ ಕೈವಾರಿಗಳೆಂದು ಖ್ಯಾತರಾದವರು ಕೂಡ ಈ ಕೂಗಿಗೆ ಬೆಂಬಲ ಕೊಟ್ಟರು. ಶ್ರೀ ಭನಸಾಲಿಯವರು ತಮ್ಮ ಮೊದಲನೆ ಉಪವಾಸವನ್ನು ಪ್ರಾರಂಭಿಸಿದಾಗ ಅದು ಅಹಿಂಸಾತ್ಮಕ ಸಂಯಮದ ಜಾತಿಯದೆಂದು ನಾನು ಬಗೆದೆನು. ಆದರೆ ಅವರು ಎರಡನೆ ಬಾರಿ ಉಪವಾಸವನ್ನು ಕೈಕೊಂಡಾಗ ಅವರಿಗೂ ಯಾವದೊಂದು ಅಹಿಂಸಾತ್ಮಕ ಪರಿಹಾರೋಪಾಯ ತೋಚಿದ್ದಿಲ್ಲವಿಷ್ಟೇ ಅಲ್ಲ, ಅವರ ಉಪವಾಸವೂ ಭಾರತ ದ್ದವೇ ಗುರಿ ಹಿಡಿಯಲ್ಪಟ್ಟಿತ್ತೆಂದು ಸಂಪೂರ್ಣವಾಗಿ ಸ್ಪಷ್ಟವಾಯಿತು. ಭಾರತ ಸರಕಾರದ ಮಾಡುತಿದ್ದುದನ್ನು ಕಂಡು ಅವರು ಸೈರಣೆಗೆಟ್ಟಿದ್ದರು. ಹಿಂದುಸ್ತಾನ ಸರಕಾರದವರು ಸಮರ ಕ್ರಮವನ್ನು ಕೈಕೊಳ್ಳಲು ಖಂಡಿತವಾಗಿ ನಿರ್ಧರಿಸಿದ್ದಾರೆಂದು ಮನವಟ್ಟಾದ ಮೇಲೆಯೇ ಅವರು ಉಪವಾಸವನ್ನು ಮುರಿದರು. ನಾನು ಅವರು ಎರಡನೆ ಉಪವಾಸಕ್ಕೆ ಅನುಮೋದನೆ ಕೊಡಲಾರದಾದೆ. ಅದಕ್ಕಾಗಿ ಅವರು ತುಸು ನೊಂದುಕೊಂಡರು ಕೂಡ. ಭನಸಾಲಿಯವರಂಥ ಭಕ್ತರ ಪಾಡೇ ಹೀಗಾದರೆ ಜನಸಾಮಾನ್ಯರ ಮತ್ತು ಪತ್ರಿಕೆಗಳ ಕೂಗು ಬಲ ಪ್ರಯೋಗಕ್ಕೆ ಅನುಕೂಲವಾಗಿದ್ದುದರಲ್ಲಿ ವಿಚಿತ್ರವೇನೂ ಇಲ್ಲ. ನಿಜವಾಗಿ ಕೇಳಿದರೆ, ಸರಕಾರವೇ ಹೆಚ್ಚು ಸಹನೆ ತೋರಿತು. ಬಲ ಪ್ರಯೋಗಕ್ಕೆ ಅದೇ ಹಿಂದೆ ಮುಂದೆ ನೋಡಿತು; ಅಷ್ಟು ಮಟ್ಟಿಗೆ ಅದೇ ಹೆಚ್ಚು ಅಹಿಂಸಕವೆಂದು ಹೇಳಬೇಕು. ಹೀಗಿರುವಾಗ ನಾನು ಸರಕಾರವನ್ನು ಖಂಡಿಸುವದಾದರೂ ಹೇಗೆ?

ಗಾಂಧೀಜಿ ಬರೆಯುತಿದ್ದಂತೆ ಬರೆಯುವ ಅಳವು ನನ್ನದಲ್ಲ. ಇದರಲ್ಲಿ ಶಾಸನ ಭಯದ ಮಾತೇ ಇಲ್ಲ. ಸರಕಾರದ ವಿಶಿಷ್ಟ ಧೋರಣೆಯನ್ನು ಕುರಿತು ಅಸಂತೋಷ ವ್ಯಕ್ತಗೊಳಿಸುವದನ್ನು ದಂಡನೀಯವಾಗಿ ಮಾಡುವ ಕಾಯದೆ ಯಾವದೂ ಇದ್ದಂತೆ ನನಗೆ ಗೊತ್ತಿಲ್ಲ. ಆದರೆ ಗಾಂಧೀಜಿ ಬರೆದುದೆಲ್ಲ ಅಧಿಕಾರವಾಣಿಯಾಗಿತ್ತು. ಏಕೆಂದರೆ ಅದರ ಬೆನ್ನಿಗೆ ಅವರ ಆಜೀವನ ಸೇವೆಯೂ ಬೇಕಾದಾಗ ಕ್ರಿಯೆಯನ್ನು ಕೈಕೊಳ್ಳುವ ಸನ್ನದ್ಧತೆಯೂ ಇದ್ದವು. ಅವರು ಬ್ರಿಟಿಶರಿಗೂ ಇತರರಿಗೂ ಕೊಟ್ಟ ಉಪದೇಶದ ಹಿಂದೆ ಮುವ್ವತ್ತು ವರ್ಷದ ಸೇವೆಯ ಬಲವಿತ್ತು. ಆ ಉಪದೇಶವನ್ನು ಅವರು ಬ್ರಿಟಿಶರಿಗೆ ೧೯೧೪ ರಲ್ಲಿ ಕೊಡಲಾರ್ತರಿಲ್ಲ. ಮೊದಲನೆ ಮಹಾ ಯುದ್ಧದ ಕಾಲದಲ್ಲಿ ರೆಡ್‌ಕ್ರಾಸ್ ಸಂಸ್ಥೆಗಾಗಿ ಒಂದು ಸ್ವಯಂಸೇವಕ ದಲವನ್ನು ಕೂಡ ಅವರು ಸಂಘಟಿಸಿದ್ದರು. ಮುಂದೆ ಅವರು ನಮ್ಮ ದೇಶದ ತರುಣರನ್ನು ಸೈನ್ಯದಲ್ಲಿ ಸೇರಲು ಒತ್ತಾಯಗೊಳಿಸಿದ್ದೂ ಅದಕ್ಕಾಗಿ ಒಂದು ಸತ್ರವನ್ನೇ ಪ್ರಾರಂಭಿಸಿದ್ದೂ ಅಲ್ಲದೆ ಆಶ್ರಮದ ಕೆಲ ಅಂತೇವಾಸಿಗಳನ್ನು ಸಹ ಸೈನ್ಯದಲ್ಲಿ ಭರತಿ ಮಾಡಿದ್ದರು. ಇದೂ ಅಲ್ಲದೆ, ಹೈದರಾಬಾದದ ವಿರುದ್ಧ ಕೈಕೊಂಡ ಕ್ರಮವನ್ನು ಬಾಪೂ ವಿರೋಧಿಸುತಿದ್ದರು ಅಥವಾ ನಿಷೇಧಿಸುತಿದ್ದರು ಎಂದೂ ಖಂಡಿತವಾಗಿ ಹೇಳುವಹಾಗಿಲ್ಲ. ಕಾಶ್ಮೀರದಲ್ಲಿ ಸೈನಿಕ ಕ್ರಿಯೆ ಪ್ರಾರಂಭವಾದಾಗ ಅವರು ನಮ್ಮೆಲ್ಲರ ನಡುವೆ ಇದ್ದರು. ಅದು ಹೊರತು ಬೇರೆ ದಾರಿ ಅವರಿಗೂ ತೋಚಲಿಲ್ಲವೋ ಏನೊ— ಅಂತೂ ಕೇವಲ ಅಹಿಂಸೆಯ ಹೆಸರೆತ್ತಿ ಅವರು ಅದನ್ನು ಖಂಡಿಸಲಿಲ್ಲ.

ಬಾಪುವಿನ ಲೇಖಗಳಿಂದ ಕೆಲ ವಾಕ್ಯಗಳನ್ನೆತ್ತಿಕೊಂಡು ಸುಂದರವಾದ ಲೇಖವನ್ನು ಹೊಸೆಯುವದೇನೂ ಕಷ್ಟವಲ್ಲ. ಆದರೆ ಅದನ್ನು ನಾನೆಂತು ಮಾಡಲಿ? ಅದು ಅವಾಸ್ತವವಾಗುತಿತ್ತು. ಒಂದು ಬಗೆಯ ಡಂಭಾಚಾರವಾಗುತಿತ್ತು. ಅದರಿಂದ ಉದ್ಭವಿಸಿದ್ದ ಪ್ರಶ್ನೆಯನ್ನು ಬಿಡಿಸಲು ಸಹಾಯವಾಗುತಿದ್ದಿಲ್ಲ.

ಕೆಲವರ ಉಪದೇಶಗಳು ಎಷ್ಟೇ ಯೋಗ್ಯವೂ ಅಮೂಲ್ಯವೂ ಆಗಿದ್ದರೂ ಜನರ ಮನದಟ್ಟಲಾರದೆ ಹೋಗುವದನ್ನೂ ಅವರು ಅದನ್ನು ಅಂಗೀಕರಿಸದಿರುವದನ್ನೂ ಕಾಣುತ್ತೇವೆ. ಆದರೆ ಅದೇ ಉಪದೇಶ ಬಾಪುವಿನಂಥ ಮಹಾತ್ಮನ ಬಾಯಿಂದ ಉದುರಿದರೆ ಜನರು ಒಡನೆ ಅದನ್ನು ಒಪ್ಪಿಕೊಂಡು ಬಿಡುವರು. ಅದಕ್ಕೆ ಕಾರಣವೆಂದರೆ, ಜನರಿಗೆ ಮನದಟ್ಟುವಂತೆ ಮಾಡಲು ಒಬ್ಬನ ಮಾತುಗಳು ಸತ್ಯವೂ ವಿವೇಕ ಪೂರ್ಣವೂ ಆಗಿದ್ದರಷ್ಟೇ ಸಾಲದು. ಅದನ್ನು ಉಸುರಿದವನು ಅಧಿಕಾರ ಸಂಪನ್ನನಾಗಿದ್ದರೆ ಮಾತ್ರ ಅದು ಪರಿಣಾಮಕರವಾಗುವದು. ಅದರ ಹಿಂದೆ ಅದನ್ನು ನುಡಿದವನ ಅನುಭವ, ಸೇವೆ ಮತ್ತು ತ್ಯಾಗದ ಅನುಶಾಸನಗಳಿರಬೇಕು. ಯಾವುದೊಂದು ವಿಚಾರವು ತರ್ಕಶುದ್ಧ ಚಿಂತನೆಯ ಫಲಿತಾಂಶವಿರಬಹುದು. ಇಲ್ಲವೆ ಉಜ್ವಲ ಕಲ್ಪನೆಯಿಂದ ಉದ್ಭೂತವಾಗಿರಬಹುದು; ಆದರೂ ಅದೊಂದು ಪ್ರಸ್ತಾವ ಮಾತ್ರ: ಅದನ್ನು ಉಚ್ಚರಿಸಿದವನು ಅಧಿಕಾರ ವಾಣಿಯನ್ನು ಸಂಪಾದಿಸದಷ್ಟು ಕಾಲ ಅದಕ್ಕೆ ಕ್ರಿಯಾಪ್ರೇರಕಶಕ್ತಿ ಇರುವದಿಲ್ಲ.

ನನ್ನಲ್ಲಿ ಸಂದೇಹವೂ ಮೌನವೂ ಕಂಡು ಬಂದಿದ್ದರೆ, ಅದರ ಕಾರಣ ನನ್ನಿಂದ ಹೊರಗಿನ ಯಾವ ಭಯದಲ್ಲಿಯೂ ಅಡಕವಾಗಿಲ್ಲ. ನನ್ನ ಅಂತರಂಗಕ್ಕೆ ಪ್ರಾಮಾಣಿಕವಾಗದಿರುವ ಯಾವ ಮಾತನ್ನೂ ಆಡಬಾರದೆಂಬ ನನ್ನ ಆತುರವೇ ಅದಕ್ಕೆ ಕಾರಣ.

ಮುಂಬಯಿ ಕಿ. ಘ. ಮಶ್ರೂವಾಲಾ
೨೩—೧೦—೪೮

ಅಧ್ಯಕ್ಷರ ಚುನಾವಣೆ

ಜಯಪುರದಲ್ಲಿ ಕೂಡಲಿರುವ ಕಾಂಗ್ರೆಸ ಅಧಿವೇಶನಕ್ಕೆ ಡಾ. ಪಟ್ಟಾಭಿ ಸೀತಾರಾಮಯ್ಯನವರು ಅಲ್ಪ ಬಹುಮತದಿಂದ ಅಧ್ಯಕ್ಷರಾಗಿ ಆರಿಸಿ ಬಂದುದನ್ನು ನೋಡಿದರೆ ಕೆಲವೊಂದು ಮೂಲಭೂತ ಮುದ್ದೆಗಳಲ್ಲಿ ಕಾಂಗ್ರೆಸ್ಸು ಬಹುತಃ ಸಮಸಮನಾಗಿ ವಿಭಾಗಿಸಲ್ಪಟ್ಟಿದೆಂದು ಕಂಡು ಬರುವದು. ಇವೆಲ್ಲ ಮುದ್ದೆಗಳು ಇಂಥವೇ ಎಂಬುದು ನನಗೆ ಸ್ಪಷ್ಟವಾಗಿ ಗೊತ್ತಿರದಿದ್ದರೂ ಅವುಗಳಲ್ಲಿ ಎಲ್ಲಕ್ಕಿಂತ ಹೆಚ್ಚಿನದೆಂದರೆ ರಾಷ್ಟ್ರೀಯ ಭಾಷೆಯ ಪ್ರಶ್ನೆಯೆಂದು ತೋರುತ್ತದೆ. ಕಾಂಗ್ರೆಸ್ಸಿನ ಗೊತ್ತು ಗುರಿಯನ್ನು ಈ ಮೊದಲು ಅರಿತ ಆ ಇಬ್ಬರೂ ಧುರೀಣರು— ಡಾ. ಪಟ್ಟಾಭಿ ಸೀತಾರಾಮಯ್ಯ ಮತ್ತು ಶ್ರೀ ಪುರುಷೋತ್ತಮದಾಸ ಟಂಡನ ಈ ಸಮಯದಲ್ಲಿ ಒಂದೆಡೆ ಸೇರಿ ಈ ಸಂಬಂಧದಲ್ಲಿ ಸರ್ವಸಮ್ಮತವಾದ ಯೋಜನೆಯನ್ನು ಸಿದ್ಧಪಡಿಸಿದ್ದಾದರೆ ಅದೆಷ್ಟು ಸಂತೋಷದ ಸಂಗತಿಯಾಗಬಲ್ಲುದು? ಸರ್ವರಿಗೂ ಸಮಾಧಾನವಾಗುವಂಥ ಯೋಜನೆಯನ್ನು ಸಿದ್ಧಪಡಿಸುವದು ಶಕ್ಯವಿದೆಯೆಂಬ ಬಗ್ಗೆ ನನಗೆ ನಿಶ್ಚಿತವಾಗಿ ಎನಿಸುತ್ತದೆ. ಮಧ್ಯಪ್ರಾಂತ ಶಾಸನಸಭೆಯ ಅಧ್ಯಕ್ಷರಾದ ಶ್ರೀ ಘನಶ್ಯಾಮಸಿಂಹ ಗುಪ್ತರು ಈ ದಿಶೆಯಲ್ಲಿ ಕಾರ್ಯಮಾಡುತಿರುವರು. ಇದರಲ್ಲಿ ಕೆಲಮಟ್ಟಿಗೆ ಪ್ರಗತಿಯೂ ಆಗಿದೆಂದು ತಿಳಿಯುತ್ತದೆ. ಎರಡೂ ಪಕ್ಷಗಳು ಪ್ರಾಮಾಣಿಕ ಮತ್ತು ಸ್ವಾರ್ಥವಿರಹಿತವೆಂದು ಗೃಹೀತವಾದಾಗ, ಅಹಿಂಸೆಯಲ್ಲಿ ಸಮಾನ ವಿಭಜನೆಯು ಸುದೃಢ ಏಕತೆಗೆ ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಇಬ್ಬರೂ ಧುರೀಣರು ಸಮ್ಮತವಾದ ಪರಿಹಾರವನ್ನು ಹುಡುಕಲು ತೊಡಗಿದರೆ ಇತ್ತೀಚಿನ ತಮ್ಮ ವಿರೋಧವನ್ನು ಬಿಟ್ಟುಗೊಟ್ಟು ಸುದೃಢ ಸ್ನೇಹಿತರಾಗಬಲ್ಲರು.

೧೯೦೭ ನೆಯ ಕಾಲವನ್ನೀಗ ನಾವು ಕ್ರಮಿಸುತ್ತೇವೆ. ಎಂದು ಅದು ಹೇಗೋ ನನಗೆನಿಸಹತ್ತಿದೆ. ಸೂರತ ಕಾಂಗ್ರೆಸ ಅಧಿವೇಶನದ ಕಾಲಕ್ಕೆ ದೇಶದ ಪರಿಸ್ಥಿತಿಗಿಂತ ಸದ್ಯದ ಪರಿಸ್ಥಿತಿ ಅಷ್ಟೇನು ಭಿನ್ನವಾಗಿಲ್ಲ. ದ್ವೇಷ ಮತ್ತು ಮತ್ಸರ ಎಲ್ಲೆಲ್ಲಿಯೂ ತಾಂಡವವಾಡುತ್ತವೆ. ಮತ್ತು ತೀರ ಕ್ಷುಲ್ಲಕ ಕಾರಣಕ್ಕಾಗಿಯೂ ಹುಡಿದುಬೀಳುವ ಸಿದ್ಧತೆ ತೋರಿಬರುತ್ತದೆ.

ಡಾ. ಪಟ್ಟಾಭಿ ಸೀತಾರಾಮಯ್ಯ ಮತ್ತು ಶ್ರೀ ಪುರುಷೋತ್ತಮದಾಸ ಟಂಡನ್ ಇವರಿಬ್ಬರೂ ವೃದ್ಧರು ಅನುಭವಿಗಳು ಮತ್ತು ಮಾನ್ಯ ಧುರೀಣರಾಗಿರುವರು. ಇಬ್ಬರೂ ಕಾಂಗ್ರೆಸ್ಸನ್ನು ಸಬಲಗೊಳಿಸುವಲ್ಲಿ ಪರಿಶ್ರಮಪಟ್ಟಿರುವರು. ತಮ್ಮೀ ವೃದ್ಧಾವಸ್ಥೆಯಲ್ಲಿಯೂ ಕಾಂಗ್ರೆಸ ಸಂಸ್ಥೆಯನ್ನು ಸುದೃಢಗೊಳಿಸಲು ಇಬ್ಬರೂ ಕೂಡಿಯೇ ಕಾರ್ಯಮಾಡಿದರು ಎಂದು ಜಯಪುರ ಕಾಂಗ್ರೆಸ್ಸಿನಲ್ಲಿ ಡಂಗುರ ಸಾರುವಂತಾಗಲೆಂದು ನಾನು ಆಶಿಸುತ್ತೇನೆ.

ಮುಂಬಯಿ ಕಿ. ಘ. ಮ.
೨೭—೧೦—೪೮

ಗಡಿಜಿಲ್ಹೆಗಳಲ್ಲಿಯ ಭಾಷೆ

ಪತ್ರಲೇಖಕನೊಬ್ಬನು ಬರೆಯುತ್ತಾನೆ—

"ಅಕ್ಟೋಬರ ೧೦ ನೇ ತಾರೀಕಿನ "ಹರಿಜನ" ಪತ್ರಿಕೆಯಲ್ಲಿ ನೀವು ಮಾತೃಭಾಷಾ ತತ್ವದ ಸಂಬಂಧವಲ್ಲಿ ಬರೆದ ಹಿರಿಬರೆಹದಿಂದ ಎರಡು ಸಂಗತಿಗಳು ಹೊರಹೊಮ್ಮುವವು. ಮಾತೃಭಾಷಾ ಮೂಲಕ ಶಿಕ್ಷಣ ಎಂಬ ತತ್ವವನ್ನು ಮಗುವು ಯಾವ ವಾತಾವರಣದಲ್ಲಿರುವದೋ ಆ ವಾತಾವರಣದ ಭಾಷೆಯ ಮುಖಾಂತರ ಶಿಕ್ಷಣವೆಂಬದಾಗಿ ಬದಲು ಮಾಡಬೇಕು, ಎಂಬದು ಮೊದಲನೆಯದು. ಈ ಭಾಷೆಯೆಂದರೆ ಆಯಾ ಪ್ರಾಂತಗಳಲ್ಲಿ ಪ್ರಚಲಿತವಿದ್ದ ಭಾಷೆ. ಮಗುವು ತನ್ನ ಸುತ್ತಲಿನ ಸ್ವಾಭಾವಿಕ ವಾತಾವರಣಕ್ಕನುಗುಣವಾಗಿ ಕಲಿಯುವ ಸ್ಥಳೀಯ ಭಾಷೆಯಲ್ಲ ಎಂಬುದು ಎರಡನೆಯ ಸಂಗತಿ. ಇವೆರಡೂ ತತ್ವಗಳನ್ನು

—೯ನೆಯ ಪುಟಕ್ಕೆ

ಜೀವಂತ ಶಿಕ್ಷಣ

[ಅಲಹಾಬಾದ ವಿಶ್ವವಿದ್ಯಾಲಯದ ಛಾತ್ರ ಸಂಘದಲ್ಲಿ ತಾ. ೨೯—೪—೪೮ ರಂದು ಶ್ರೀ ವಿನೋಬಾರವರು ಮಾಡಿದ ಭಾಷಣ]

ವಿದ್ಯಾರ್ಥಿಗಳ ಮುಖ್ಯದಲ್ಲಿರಲು ನನಗೆ ಖುಷಿ ತೋರುತ್ತದೆ. ಯಾಕೆಂದರೆ ಆಗ ನನ್ನವರ ಹಳಿಯ ನಾನಿರುವೆನೆಂದು ಅನಿಸುವದು. ಎಲ್ಲರಂತೆ ನಾನೂ ಒಬ್ಬ ವಿದ್ಯಾರ್ಥಿಯೇ ಆಗಿದ್ದೇನೆ. ದಿನದಿನವೂ ಜ್ಞಾನದ ಒಂದೊಂದು ಮೆಟ್ಟಿಲನ್ನು ಹತ್ತುತ್ತ ಸಾಗಿದ್ದೇನೆ.

ಕಲಿತ ಶಿಕ್ಷಣವು ಮುಂದಿನ ಜೀವನದಲ್ಲಿ ಪ್ರಯೋಜನ ಕೊಡುವದೆಂಬ ಭರವಸೆಯಿಂದ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾರೆ. ಆದರೆ ಸೂಕ್ಷ್ಮವಾಗಿ ನೋಡಿದರೆ ವಿಶ್ವವಿದ್ಯಾಲಯದ ಅಭ್ಯಾಸವು ಮುಗಿದಂದು ನಿಜವಾದ ಶಿಕ್ಷಣವು ಪ್ರಾರಂಭವಾಗುತ್ತದೆಯೆನ್ನಬೇಕು. ವಿಶ್ವ ವಿದ್ಯಾಲಯದ ಅಭ್ಯಾಸ ಮುಗಿದಿತೆಂದರೆ ವಿದ್ಯಾರ್ಥಿಗಳು ಅನಂತರ ಗುರುಗಳ ಸಹಾಯವಿಲ್ಲದೆ ಜ್ಞಾನ ಸಂಚಯ ಮಾಡಿ ಕೊಳ್ಳಬಲ್ಲರೆಂದೇ ಅರ್ಥ. ಓದುವ ಕಲಿಸಿ ಸ್ನಾತಕನಾದವನು ಅಸಹಾಯತೆಯನ್ನು ನೀಗಿ ಸ್ವಾವಲಂಬಿಯಾದನೆಂದೇ ಅರ್ಥವಲ್ಲವೆ?

ನೀವೆಲ್ಲ ತರುಣರು. ತಾರುಣ್ಯವೆಂದರೆ ಸಾಮರ್ಥ್ಯ. ತರುಣನ ಹೃದಯ ಆತ್ಮವಿಶ್ವಾಸದ ಆಗರ. ಅವನ ಕಣ್ಣಿಗೆ ಜಗವೆಲ್ಲ ಒಂದು ಹಸಿಯ ಮಣ್ಣಿನ ಮುದ್ದೆಯಾಗಿಯೇ ಕಾಣುವದು. ತಾನು ಬಯಸಿದಂತೆ ಜಗದ ಆಗುಹೋಗುಗಳನ್ನು ರೂಪಿಸಬಲ್ಲೆನೆಂಬ ಹೆಮ್ಮೆ ಅವನಿಗೆ. ಈ ಸಾಹಸದ ಕೆಲಸಕ್ಕೆ ತರುಣನಾದವನಿಗೆ ಸ್ವತಂತ್ರ ಮತ್ತು ತೀಕ್ಷ್ಣ ನಿರ್ಣಯ ಶಕ್ತಿ ಬೇಕು.

ಸ್ವತಂತ್ರ ವಿಚಾರ ಶಕ್ತಿಯು ಜಾಗ್ರತವಾಗುವಂತೆ ಯುವಕರಿಗೆ ತಕ್ಕ ಶಿಕ್ಷಣ ಸಿಕ್ಕುತ್ತಿಲ್ಲ. ಯಾವುದೊ ಒಂದು ಸಂಪ್ರದಾಯ ಬದ್ಧವಾದ ಹಾಗೂ ಪೂರ್ವಸಿದ್ಧವಾದ ವಿಚಾರಗಳನ್ನು ತರುಣರ ತಲೆಯಲ್ಲಿ ತುರುಕುವದೇ ಪ್ರತಿಯೊಂದು ಸರಕಾರದ ಪರಿಪಾಠವಾಗಿ ಹೋಗಿದೆ. ಸರಕಾರವು ಅನುಸರಿಸಿದ ಧೋರಣದನ್ವಯವಾಗಿ ಯುವಕರನ್ನು ಬಂಡವಾಲ ಶಾಹಿಯತ್ತಲೊ, ಸಾಮ್ಯವಾದದತ್ತಲೊ, ಸಮಾಜವಾದದತ್ತಲೊ, ಜಾತೀಯತೆಯತ್ತಲೊ ಇಲ್ಲವೆ ಯಾವುದೊ ಒಂದು ಒಳಿತಿನ ಕೆಡಕಿನ ತತ್ವಗಳತ್ತಲೊ ಬೇಕೆಂದೆ ಹೊರಳಿಸಲಾಗುತ್ತದೆ. ಭಾರತದ ಮಹಾಗುರುಗಳು ತಮ್ಮ ಶಿಷ್ಯರಿಗೆ ಸ್ವತಂತ್ರ ವಿಚಾರ ಮಾಡುವದು ಅಗತ್ಯವೆಂದು ಉಪದೇಶಿಸುವ ಕಾಲವೊಂದಿತ್ತು. ಗುರುವಿನಲ್ಲಿಯ ನ್ಯೂನತೆಗಳನ್ನು ತೊರೆದು ತನಗೆ ಉತ್ತಮವೆಂದು ತೋರಿದ ಅಂಶಗಳನ್ನೇ ಗ್ರಹಿಸಬೇಕೆಂದು ಪ್ರಾಂಜಲವಾಗಿ ಗುರುಗಳಾದವರು ತಾವೇ ಹೇಳುತ್ತಿದ್ದರು. ಕೂಲಂಕಷ ವಿಮರ್ಶಾಂತ್ಯದಲ್ಲಿ ಗುರುವಿನ ಅಭಿಪ್ರಾಯವನ್ನು ಅಲ್ಲಗಳೆಯುವ ಶಿಷ್ಯನ ಬಗ್ಗೆ ಗುರುವು ನಿಜವಾಗಿಯೂ ಹೆಮ್ಮೆ ಪಡಬೇಕು. ತಮ್ಮ ಅಭಿಪ್ರಾಯಗಳನ್ನೇ, ತಮ್ಮ ವಿಚಾರ ಪದ್ಧತಿಯನ್ನೇ ಇನ್ನೊಬ್ಬರ ಮೇಲೆ ಒತ್ತಾಯದಿಂದ ಹೇರುವದೊಂದು ಇತ್ತೀಚಿನ ಪರಿಪಾಠವಾಗಿ ಹೋಗಿದೆ. ವಿದ್ಯಾರ್ಥಿಗಳ ಹಿತದ ದೃಷ್ಟಿಯಿಂದ ಈ ಪ್ರವೃತ್ತಿಯು ಬಹಳ ಘಾತಕವಾದದ್ದು. ಹಾಗೆ ಮಾಡುವದೆಂದರೆ ವಿದ್ಯಾರ್ಥಿಗಳನ್ನು ಯಂತ್ರಗಳನ್ನಾಗಿ ಮಾಡಿದಂತೆಯೇ. ಯಂತ್ರದ ಭಾಗಗಳಾಗಿ ಬಾಳಲು ವಿದ್ಯಾರ್ಥಿಗಳು ಖಂಡಿತ ನಿರಾಕರಿಸಬೇಕು. ಅವರು ಸನಾತನವಾದ ಸತ್ಯವನ್ನು ಅನುಸರಿಸಲು ಹಂಬಲಿಸಬೇಕಲ್ಲದೆ ಗತಾನುಗತಿಕ ಪಥವನ್ನೊ ಪಂಥವನ್ನೊ ಅನುಸರಿಸ ಕೂಡದು.

ವಿದ್ಯಾರ್ಥಿಗಳು ಅನೇಕ ಸಂಘಗಳಲ್ಲಿ ವಿಂಗಡವಾಗಿ ಹೋಗಿದ್ದಾಗಿ ನನಗೆ ತಿಳಿದಿದೆ. ಇಂತಹ ಸಂಘಗಳ ಸದಸ್ಯರು ಯಾವುದೋ ಒಂದು ವಿಚಾರ ಪ್ರಣಾಲಿಯನ್ನು ಅಂಗೀಕರಿಸುವದು ಕ್ರಮಪ್ರಾಪ್ತವಾಗಿದೆ. ವನದಲ್ಲಿ ಸಿಂಹಗಳು ಎಂದಾದರೂ ಗುಂಪುಗಟ್ಟಿಕೊಂಡಿರುವದನ್ನು ಕೇಳಿರುವಿರಾ ? ಆದು ಕುರಿಗಳು ಮಾತ್ರ ಗುಂಪುಗೂಡಿ ತಿರುಗುವದುಂಟು. ಹೀಗೆ ಹೇಳಿದೆನೆಂದು ವಿದ್ಯಾರ್ಥಿಗಳಲ್ಲಿ ಸಂಘಟನೆ ಪರಸ್ಪರ ಸಹಕಾರ ಸಾಮೂಹಿಕ ಕಾರ್ಯ ಇರಕೂಡದೆಂದು ಒಂದು ಕ್ಷಣ ಸಹ ತಿಳಿಯಬಾರದು. ಒಳ್ಳೆಯ ಕೆಲಸ ಮಾಡಲು ಪರಸ್ಪರ ಸಹಕಾರ ಬೇಕೇಬೇಕು. ಆದರೆ ವಿಚಾರ ಸ್ವಾತಂತ್ರ್ಯವೆಂಬುದು ಅಗಲೂ ಅಚಲವಾಗಿರಬೇಕು ಮತ್ತು ಉತ್ತರೋತ್ತರ ಸತ್ಯ ಪ್ರತೀತಿಗೆ ಅನಿರ್ಬಂಧ ಅವಕಾಶವಿರಬೇಕು. ಸತ್ಯಾನ್ವೇಷಣಕ್ಕೆ ಇದು ಅವಶ್ಯಕ. ನಿಜವಾದ ಸಾಮರ್ಥ್ಯವರ್ಧನದ ದಾರಿಯೂ ಇದಾಗಿದೆ.

ಬಲವರ್ಧನಕ್ಕೆ ಆತ್ಮಸಂಯಮನವೂ ಒಂದು ಪ್ರಬಲ ಅಸ್ತ್ರವೇ. ಮನುಷ್ಯನು ಇಂಸ್ವಾಗಬೇಕೆಂಬುದೇ ಅದರ ಅರ್ಥ. ಅಂದರೆ ಅವನು ತನ್ನ ಇಂದ್ರಿಯಗಳನ್ನೆಲ್ಲ ಜಯಿಸಿ ಇಂದ್ರನೆನ್ನಿಸಿಕೊಳ್ಳಬೇಕು. ಈ ಇಂದ್ರಿಯಗಳು ಬಲವರ್ಧನದ ವಿವಿಧ ಸಾಧನಗಳೇ ಆಗಿವೆ. ಅವುಗಳನ್ನು ನಿಗ್ರಹಿಸಲು ಕಲಿಯಬೇಕು. ಈ ನಿಗ್ರಹವು ವಿದ್ಯಾರ್ಥಿಗಳಾಗಿದ್ದಾಗಲೇ ಸಾಧಿಸಿ ಸ್ವಾಯತ್ತ ಪಡಿಸಿಕೊಳ್ಳಬೇಕಾದ ಶ್ರೇಷ್ಠ ಕಲೆಗಳಲ್ಲಿ ಒಂದಾಗಿದೆ. ಬಲವರ್ಧನಕ್ಕೆ ಸ್ಥಿರಚಿತ್ತಬೇಕು, ಸ್ಥಿರಚಿತ್ತಕ್ಕೆ ಆತ್ಮನಿಗ್ರಹಬೇಕು.

ಮಳೆ ಮತ್ತು ಹೊಳೆಗಳ ಹೋಲಿಕೆಯನ್ನು ಕಣ್ಣು ಮತ್ತು ಕಾಲುಗಳ ಕ್ರಿಯೆಗಳಿಗೆ ಅನ್ವಯಿಸಬಹುದು. ಮಳೆಯ ಹನಿಗಳು ಭೂಗೋಲದ ಯಾವ ಭಾಗದಲ್ಲಿಯೂ ಬೀಳಬಹುದು ಮತ್ತು ಬೇಕಾದತ್ತಣಿಂದ ಸಾಗಿರಬಹುದು. ಆದರೆ ಮಳೆಯು ಒಂದು ನಿರ್ದಿಷ್ಟ ಕ್ರಮವನ್ನು ಅನುಸರಿಸಿ ಸುರಿದಾಗಲೇ ಬಿದ್ದ ನೀರು ಹೊಳೆಯಾಗಿ ಹರಿದೀತು. ಅದರಂತೆ ಕಣ್ಣುಗಳಿಗೆ ಈ ವಿಶ್ವದಲ್ಲಿ ಸನಿಹದ ಅಥವಾ ದೂರದ ವಸ್ತುಗಳನ್ನು ಕಾಣುವ ಇಲ್ಲವೆ ಅವಗಮಿನಿಸುವ ಸ್ವಾತಂತ್ರ್ಯವಿದ್ದೇ ಇದೆ. ಆದರೆ ಕಾಲುಗಳು ಮಾತ್ರ ಕೈಕೊಂಡ ಪ್ರವಾಸವನ್ನು ಪೂರೈಸಲು ಮತ್ತು ಗಂತವ್ಯ ಸ್ಥಾನವನ್ನು ಮುಟ್ಟಲು ಒಂದು ದಿಕ್ಕನ್ನು ಅನುಸರಿಸಿ ಹೆಜ್ಜೆ ಹಾಕಬೇಡವೆ ? ನದಿಯ ಹಾಗೆ ಮಾನವನ ಕ್ರಿಯಾಪದ್ಧತಿಗೆ ಒಂದು ಗುರಿ ಒಂದು ಕ್ರಮ ಇರುವದು ಅತ್ಯವಶ್ಯ, ಅದೇಕೆ, ಅನಿವಾರ್ಯ.

ಹರೆಯದ ಹುಡುಗರಲ್ಲಿ ಹುರುಪು ಹುಟ್ಟಿಸಲು ಮಾತನಾಡಬೇಕೆಂದು ನನಗೊಮ್ಮೆ ಕೇಳಲಾಗಿತ್ತು. ಅದಕ್ಕೆ ನಾನೇನೆಂದೆ ಗೊತ್ತೆ ? ಸೋತುಹೋದ ಮುದುಕರಲ್ಲಿ ಹುರುಪು ಹುಟ್ಟಿಸುವ ಅವಶ್ಯಕತೆಯುಂಟಾಗಲಿ. ಹರೆಯದ ಹುಡುಗರಲ್ಲಿಯೂ ಕೃತಕವಾಗಿ ಹುರುಪು ಹುಟ್ಟಿಸುವದೆಂದರೆ ಆ ನಾಡಿನ ದುರ್ದೈವವೆಂದೇ ಅನ್ನಬೇಕು. ತಮ್ಮ ಹುಮ್ಮಸವನ್ನೂ ಹಂಬಲವನ್ನೂ ಕುಗ್ಗದಂತೆ ಇರಿಸಲು ತರುಣರು ಧೃತಿ ಎಂಬದನ್ನು ಸಂಪಾದಿಸಿಕೊಳ್ಳಬೇಕು. ಧೃತಿಯೆಂದರೆ ಸೋಲರಿಯದ ಅಕ್ಷುಣ್ಣ ಕಾರ್ಯತತ್ಪರತೆ. ಕರ್ಮಯೋಗಕ್ಕೆ ಸತತ ಪ್ರಯತ್ನವೂ ದಣಿವಿಲ್ಲದ ಹುಮ್ಮಸವೂ ಅಗತ್ಯವೆಂದು ಗೀತೆಯ ಆದೇಶವಿದೆ. ಆದ್ದರಿಂದ ನೀವೆಲ್ಲ 'ಕರ್ಮಯೋಗಿ'ಗಳಾಗಬೇಕು.

ವಿದ್ಯಾರ್ಥಿಗಳು ರಾಜಕಾರಣದಲ್ಲಿ ಭಾಗವಹಿಸುವದೇ ಬಿಡುವದೇ ಎಂಬುದನ್ನು ಮತ್ತೆ ಮತ್ತೆ ಕೇಳಲಾಗುತ್ತದೆ. ವಿದ್ಯಾರ್ಥಿಯಾದವನು ತನ್ನ ಆತ್ಮದ ಸರ್ವಾಂಗೀಣ ಬೆಳವಣಿಗೆಗೆ ಗಮನಿಸಬೇಕು. ಯಾವದೇ ಅಭಿಪ್ರಾಯಗಳನ್ನು ತನ್ನಲ್ಲಿ ರೂಪಿಸಿಕೊಳ್ಳುವ ಮುನ್ನ ಮೈತುಂಬ ಕಣ್ಣಿಟ್ಟು ಪರೀಕ್ಷಿಸಿಕೊಳ್ಳಬೇಕು. ಅದ್ದರಿಂದ ವಿದ್ಯಾರ್ಥಿಯು ರಾಜಕಾರಣವನ್ನು ಅಭ್ಯಸಿಸಿ ರಾಜಕೀಯ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುವದು ಅವಶ್ಯವೇ. ಆದರೆ ಈ ಅವಲೋಕನವನ್ನು ಕೇವಲ ಸಾಕ್ಷೀಭೂತನಾಗಿ ಪ್ರತ್ಯಗಾತ್ಮನಾಗಿ ಮಾಡಬೇಕು. ಚೇರಮನ್ ಎಂಬುದಕ್ಕೆ ಅಧ್ಯಕ್ಷನೆಂದು ಭಾರತೀಯ ಶಬ್ದವಿದೆ. ಅಧ್ಯಕ್ಷನೆಂದರೆ ಯಾವ ಪಕ್ಷಕ್ಕೂ ಹೊಂದಿಕೊಳ್ಳದೆ ಘಟನೆಗಳನ್ನು ಪ್ರತ್ಯಗಾತ್ಮನಾಗಿ ಸಾಕ್ಷೀಭೂತನಾಗಿ ನೋಡುವವನು ಎಂಬ ಅಭಿಪ್ರಾಯ. ಇದೇ ಬಗೆಯಾಗಿ ವಿದ್ಯಾರ್ಥಿಗಳಾದರೂ ಅಧ್ಯಕ್ಷನಂತೆ ಜೀವನಕ್ಕೆ ಸಂಬಂಧಿಸಿದ ಸಂಗತಿಗಳನ್ನೆಲ್ಲ ಸೂಕ್ಷ್ಮವಾಗಿ ಪರ್ಯಾಲೋಚಿಸಿ, ನಿರೀಕ್ಷಿಸಿ, ಪರೀಕ್ಷಿಸಿ ಆಮೇಲೆ ತೀರ್ಮಾನಕ್ಕೆ ಬರಬೇಕು. ತಮ್ಮ ಸಮಯ ಬಂದಾಗ ಮಾತ್ರ ಕೈಮುಚ್ಚಿಕೊಂಡು ಕುಳ್ಳಿರದೆ ವಿದ್ಯಾರ್ಥಿಗಳು ಕಾರ್ಯಪ್ರವರ್ತರಾಗಬೇಕು.

ಕರ್ಮಯೋಗಿಯಾಗಬೇಕಾದರೆ ಸದಾ ಯಾವುದೊಂದು ಉತ್ಪಾದಕ ಕಾರ್ಯದಲ್ಲಿ ತೊಡಗಿರುವದವಶ್ಯ.

ಕೈಮುಟ್ಟಿ ಏನಾದರೊಂದು ಮಾಡದಿದ್ದರೆ ಸಂಪಾದಿಸಿದ ಜ್ಞಾನವು ನಶಿತವಾಗುವಸಂಭವವಿಲ್ಲ. ಜ್ಞಾನಕ್ಕೆ ಪ್ರತ್ಯಕ್ಷ ಕೃತಿಯ ತಳಹದಿಯಿದ್ದಾಗಲೇ ಅದು ಭದ್ರವಾಗುವದು. ಅಡಿಗೆ ಮಾಡಲು ಬರುತ್ತದೆಯೋ ಎಂದು ನಾನು ಆಗಾಗ ವಿದ್ಯಾರ್ಥಿಗಳಿಗೆ ಕೇಳಿದ್ದೇನೆ. ಅನೇಕರಿಗೆ ಈ ವಿದ್ಯೆ ಬರದು. ಇದು ಹುಡುಗಿಯರ ಕೆಲಸವೆಂದೇ ಅವರ ಗ್ರಹಿಕೆ. ಹುಡುಗರು ಜ್ಞಾನಾನ್ನವನ್ನುಂಡೇ ಬಾಳಬೇಕೆಂದೂ ಅವರ ಕಲ್ಪನೆ ಹಾಗೂ ಈ ಜ್ಞಾನಪಾಕಸಿದ್ಧಿಯಲ್ಲಿ ತಾವೇನೋ ಒಂದು ದೊಡ್ಡ ಕೆಲಸ ಮಾಡಿರುವೆವೆಂಬ ಹೆಮ್ಮೆ ಅವರಿಗೆ ಸ್ತ್ರೀಪುರುಷರಿಬ್ಬ ಮೇಲೆ ಹಾಕಸಿದ್ಧಿಯಲ್ಲಿಯೂ [illegible] ಲ್ಲಿಯೂ ಇಬ್ಬರೂ ಸಮನಾಗಿ ದುಡಿಯಬೇಡವೆ ? ಸ್ತ್ರೀಪುರುಷರಿಗಾಗಿ ಹೀಗೆ ಶ್ರಮವಿಭಾಗ ಮಾಡಿದವರು, ಹೆಣ್ಣು ಗಂಡು ಪರಸ್ಪರರು ಪರಸ್ಪರರ ದಾಸರಾಗಿ ಬಾಳುವಂತೆ ಮಾಡಿದ್ದಾರೆ. ಅವರು ಅತ್ಯಾವಶ್ಯಕವಾದ ಜ್ಞಾನಾನುಭವಗಳಿಗೆ ಜನ ಎರವಾಗುವಂತೆ ಮಾಡಿದ್ದಾರೆ.

ಶ್ರೀ ಕೃಷ್ಣನು ಯುವಕನಾಗಿದ್ದಾಗ ಅತ್ಯಂತ ಕಷ್ಟಕಾರಕ ಕಾಯಿಕ ಕಾರ್ಯಗಳಿಗಾಗಿ ಮೈಮುರಿದು ದುಡಿದಿದ್ದಾನೆ. ಎಂದೇ ಗೀತೆಯ ಉಪದೇಶದಲ್ಲಿ ಸ್ವತಂತ್ರ ವಿಚಾರದ ಕಾಂತಿ ಸರ್ವತ್ರ ಹೊಮ್ಮುತ್ತದೆ. ಭಾರತಕ್ಕೆ ಜಡವಿದ್ಯೆಬೇಕಾಗಿಲ್ಲ. ಭಾರತೀಯರು ಸ್ವಾತಂತ್ರ್ಯ ಪ್ರಭೆಯಿಂದ ಪ್ರತಿಭಾನ್ವಿತವಾದ ಜ್ಞಾನವನ್ನು ಆಚರಣೆಗೆ ಇಳಿಸಬೇಕು. ಎದುರಾಗಿ ಬಂದ ಕಷ್ಟನಿಷ್ಠುರಗಳಿಗೆ ಎದೆಗೊಡಬೇಕು.

—ಡಿ. ಎಂ.

(ಮೂಲ ಹಿಂದುಸ್ತಾನಿಯಿಂದ ಅನೂದಿತ)

ಸರಕಾರವೂ ಅನಪ್ರಸರಣವೂ

ಸರಕಾರವು ಸದಾ ಏರುತ್ತಿರುವ ಅತಿಪ್ರಸರಣದ ಸಮಸ್ಯೆಯನ್ನು ಎದುರಿಸಲು ಕೆಲವೊಂದು ಯೋಜನೆಗಳನ್ನು ಸಿದ್ಧಪಡಿಸಿದೆ. ಈ ಯೋಜನೆಗಳು ಬೃಹತ್ಪ್ರಮಾಣದ ಉದ್ಯಮಗಳತ್ತ ಹೆಚ್ಚು ಒಲಿದಿವೆ. ಒಕ್ಕಲುತನದ ಮತ್ತು ಗ್ರಾಮೋದ್ಯಮಗಳ ಉತ್ಪಾದನೆಯನ್ನು ತೆಗೆದುಕೊಂಡರೆ ಬೃಹತ್ಪ್ರಮಾಣದ ಉದ್ಯಮಗಳ ಉತ್ಪಾದನೆಯು ಸಾಸಿವೆಗಿಂತ ಅಲ್ಪವಾಗುವುದು. ಅದ್ದರಿಂದ ನಾವು ಉತ್ಪಾದನೆಯನ್ನು ಹೆಚ್ಚಿಸಬೇಕೆಂದಿದ್ದರೆ ಒಕ್ಕಲುತನ ಮತ್ತು ಗ್ರಾಮೋದ್ಯಮಗಳನ್ನು ಸ್ವಲ್ಪ ಸುಧಾರಿಸಿದರೂ ಸಾಕು, ಅದು ಅತಿಪ್ರಸರಣವನ್ನು ಹಿಡಿಸಲು ದೊಡ್ಡದೊಂದು ಸಾಧನವಾದೀತು. ಆದರೆ ಉತ್ಪಾದನೆಯ ಈ ಅಂಗವನ್ನು ಸಂಪೂರ್ಣವಾಗಿ ಎಂಬಷ್ಟು ಅಲಕ್ಷ್ಯ ಮಾಡಲಾಗಿದೆ. ಸರಕಾರೀ ವ್ಯವಹಾರದಲ್ಲಿಯ ಒಂದು ವಿಧದ ಮೌಲ್ಯಸ್ವದ ತಗ್ಗು ಫಲರೂಪವೆನಿಸುವ ಈ ಸರಕಾರದ ಲೋಭದ ಪರಿಣಾಮವಾಗಿಯೇ ಇಷ್ಟು ದೊಡ್ಡ ಪರಿಮಾಣದ ಅತಿಪ್ರಸರಣ ಉಂಟಾಯಿತೆಂಬುದನ್ನು ನೆನಪಿಟ್ಟುಕೊಳ್ಳಬೇಕಾಗಿದೆ. ಈ ಅತಿಪ್ರಸರಣದ ಕಾರಣವನ್ನು ವಿಘಟಿಸಲು ಹಣದ ಬೆಲೆಯೇರಿಸಿ ಜನರ ಕೈಗೆ ಅದು ಹೋಗುವ ಪರಿಮಾಣವನ್ನು ಕಡಿಮೆ ಮಾಡಬೇಕು. ೧೦ ರೂಪಾಯಿಗಳನ್ನು ಕೈಯಲ್ಲಿಟ್ಟುಕೊಂಡವನಿಗೆ ತನ್ನ ೧೦ನೆಯ ರೂಪಾಯಿಗೆ ಒಂದು ನಿಶ್ಚಿಷ್ಟ ಬೆಲೆ ಇದೆ ಎನಿಸಿದರೆ, ಅದೇ ಒಂದು ಲಕ್ಷ ರೂಪಾಯಿಯುಳ್ಳವನಿಗೆ, ಹೋಲಿಸಿ ನೋಡಿದರೆ, ಅವನ ಕಡೆಯ ರೂಪಾಯಿಗೆ ಅಲ್ಪ ಬೆಲೆಯಿರಬಹುದು ಅಥವಾ ಏನೂ ಬೆಲೆ ಇಲ್ಲದಿರಬಹುದು ಎಂಬುದನ್ನು ಉದಾಹರಣೆಗೆ ತೆಗೆದುಕೊಳ್ಳಬಹುದು. ಕಡೆಯರೂಪಾಯಿಯ ಘಟಕರೂಪಿ ಮೌಲ್ಯದಲ್ಲಿಯ ಈ ವ್ಯತ್ಯಾಸವನ್ನು ತೆಗೆದು ಹಾಕಲು ಸರಕಾರೀ ಶಾಖೆಯೊಂದಕ್ಕೆ ಖರ್ಚಿಗೆ ಕೊಟ್ಟಿರುವ ಹಣದಲ್ಲಿ ಕಡಿತ ಮಾಡಬೇಕು. ಇದನ್ನು ಸುಲಭವಾಗಿ ಮಾಡುವ ಬಗೆಯೆಂದರೆ, ಭೂಕಂದಾಯವನ್ನೂ ವ್ಯಯನಿತರಣವನ್ನೂ ವಿಕೇಂದ್ರೀಕರಿಸುವದೇ ಆಗಿದೆ. ಹಳೆಯ ಕಾಲದ ಗ್ರಾಮಪ್ರಜಾರಾಜ್ಯವನ್ನು ಪುನಃ ಸಂಸ್ಥಾಪಿಸುವ ಒಂದು ಬಗೆಯ ಸ್ಥಳೀಯ ಆಡಳಿತೆಯ ಪದ್ಧತಿಯನ್ನು ನಾವು ಬೆಳೆಸಿಕೊಂಡು ಬರಬೇಕು. ಇದಾಗುವ ವರೆಗೆ ಅತಿಪ್ರಸರಣದೊಡನೆ ಹೋರಾಡುವುದೆಂದರೆ ರೋಗಚಿಹ್ನಗಳೊಡನಲ್ಲದೆ ರೋಗದೊಡನೆ ವ್ಯವಹರಿಸಿದಂತಾಗದು.

ಇದೇ ಮೇರೆಗೆ ಬಹೂದ್ದೇಶಸಾಧಕ ಸಹಕಾರೀ ಸಂಘಗಳ ಮೂಲಕ ಸ್ಥಳೀಯ ವ್ಯವಹಾರದಲ್ಲಿ ಪದಾರ್ಥ ವಿನಿಮಯವನ್ನು ಕೆಲಮಟ್ಟಿಗೆ ಜಾರಿಗೆ ತರುವುದರಿಂದ ಹಣ ಬಳಕೆಯನ್ನು ಬಹಳವಾಗಿ ಕಡಿಮೆ ಮಾಡಬೇಕು.

ಈ ಸುಧಾರಣೆಗಳು ಇಂದಿನ ಪರಿಸ್ಥಿತಿಯಲ್ಲಿ ಆಡಳಿತೆಯಲ್ಲಿ ಸ್ವಲ್ಪ ಶೈಥಿಲ್ಯವನ್ನು ಉಂಟುಮಾಡಬಹುದು; ಆದರೆ ಹಳ್ಳಿಗರಿಗೆ ತಮ್ಮ ಹೊಣೆ ಹೊರುವುದನ್ನು ಕಲಿಸುವುದಕ್ಕಾಗಿ ನಾವು ಈ ಸಮಸ್ಯೆಯನ್ನು ಎದುರಿಸಲೇಬೇಕಾಗಿದೆ. ನೂರಾರು ವರ್ಷಗಳ ವಿದೇಶೀಯ ರಾಜ್ಯಭಾರ ನಮ್ಮ ಸಾರ್ವಜನಿಕ ಕರ್ತವ್ಯ ಬುದ್ಧಿಯನ್ನು ಇಂದಿನ ಅಲ್ಪದಶೆಗೆ ತಂದು ಮುಟ್ಟಿಸಿದೆ. ಜನರ ಈ ನಾಗರಿಕ ಗುಣವನ್ನು ಪೋಷಿಸಲು ಕೆಲ ದಶಕಗಳೇ ಬೇಕಾದಾವು, ಆದರೆ ಸ್ವರಾಜ್ಯದ ಹೊಣೆಯನ್ನು ಜನರು ಹೊರಬೇಕೆಂದು ನಿರೀಕ್ಷಿಸುವ ಮುನ್ನ ಈ ಅವಧಿ ಕಳೆಯಲೇಬೇಕಾದುದಾಗಿದೆ.

— ಜೆ. ಸಿ. ಕುಮಾರಪ್ಪ

ಅಡಚಣೆ ಬರುತ್ತದೆ. ಉದಾಹರಣೆಗಾಗಿ ಬಿಹಾರದಲ್ಲಿಯ ಮನಭೂಮಿ ಜಿಲ್ಹೆಯನ್ನು ತೆಗೆದುಕೊಳ್ಳುವಾ. ಪುರುಲಿಯ ಮತ್ತು ಧನಬಾದ ಇವೆರಡೂ ಜಿಲ್ಹೆಗಳಲ್ಲಿ ಪ್ರಚಲಿತವಿದ್ದ ಭಾಷೆ ಬಂಗಾಲಿ. ಆದರೆ ಬಿಹಾರದಲ್ಲಿ ಈಗ ಸಂಸ್ಥಾಪಿತವಾದ ಪ್ರಾಂತೀಯ ಭಾಷೆ ಹಿಂದಿಯಾಗಿದೆ. ಇಂಥ ಸಂದರ್ಭಗಳಲ್ಲಿ ಇವೆರಡೂ ಸಂಗತಿಗಳನ್ನು ಹೇಗೆ ಸಮನ್ವಯಿಸುವಿರಿ ? ಈ ಮೊದಲಿನ ನನ್ನ ಲೇಖಗಳಲ್ಲಿ ಈ ಪ್ರಶ್ನೆಗೆ ನಾನು ಉತ್ತರ ಕೊಟ್ಟಿರುವೆನು. ಎಲ್ಲಪ್ರಾಂತಗಳಲ್ಲಿಯ ಗಡಿಜಿಲ್ಹೆಗಳನ್ನು ಬಹುಭಾಷಾ ಭಾಗಗಳೆಂದು ಪರಿಗಣಿಸಲಿಕ್ಕೆಬೇಕು. ದೊಡ್ಡವರು ಸಾಮಾನ್ಯವಾಗಿ ಸಣ್ಣ ಸಣ್ಣ ಸುಸಂಬದ್ಧವಾದ ಸಮಾಹತುಗಳಲ್ಲಿ ಉಳಿಯುವರು ಮತ್ತು ತಮ್ಮ ರೀತಿ ನೀತಿಗಳಿಗನುಸಾರವಾದ ಪರಿಸ್ಥಿತಿಯನ್ನು ನಿರ್ಮಿಸಿಕೊಳ್ಳುವರು. ಮತ್ತೊಂದು ಭಾಷೆಯನ್ನಾಡುವ ಜನರ ಕೂಡ ಅವರು ಕೂಡಿಕೊಂಡು ಹೋಗಲೇಬೇಕಾಗುವದು. ಈ ಪರಿಸ್ಥಿತಿಯಲ್ಲಿ ಬೆಳೆಯುವ ಮಕ್ಕಳು ಎರಡೂ ಭಾಷೆಗಳನ್ನೂ ಸಾಮಾನ್ಯವಾಗಿ ಅಷ್ಟಷ್ಟೇ ಆಡಬಲ್ಲರು. ಪ್ರಾಂತೀಯ ಭಾಷೆಯನ್ನು ಎಲ್ಲರೂ ಕಲಿಯಲೇಬೇಕೆಂಬುದನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆಯಿಲ್ಲ. ಆದರೆ ಎರಡನೆಯ ಭಾಷೆಯು ಕೇವಲ ಮಾತಾಡುವ ಭಾಷೆಯಾಗಿರದಿದ್ದರೆ, ಆ ಪ್ರದೇಶವನ್ನು ಎರಡನೆಯ ಪ್ರಾಂತದಲ್ಲಿ ಹಾಕಿದ್ದರೆ ಎಷ್ಟು ಅವಕಾಶ ಮತ್ತು ಸ್ವಾತಂತ್ರ್ಯವನ್ನು ಆ ಭಾಷೆಗೆ ಕೊಡಲಾಗುತಿದ್ದಿತೋ ಅಷ್ಟೇ ಸ್ವಾತಂತ್ರ್ಯ ಮತ್ತು ಅವಕಾಶವನ್ನು ಕೊಡಲಿಕ್ಕೆಬೇಕು. ಈ ರೀತಿಯಾಗಿ ಮನಭೂಮದಲ್ಲಿಯ ಪ್ರತಿಯೊಬ್ಬನು ಬಿಹಾರದ ಭಾಷೆಯನ್ನು ಕಲಿಯಲಿಕ್ಕೆಬೇಕು. ಆದರೆ ಮನಭೂಮವನ್ನು ಬಂಗಾಲಕ್ಕೆ ವರ್ಗಾಯಿಸಿದ್ದಾದರೆ ಬಂಗಾಲಿಗಳಿಗೆ ಯಾವ ಸೌಕರ್ಯ ಮತ್ತು ಸ್ವಾತಂತ್ರ್ಯ ಸಿಕ್ಕುತಿದ್ದವೊ ಅವನ್ನೆಲ್ಲ ಅವರಿಗೆ ಒದಗಿಸಿಕೊಡಲಿಕ್ಕೆಬೇಕು.

ಮನಭೂಮಕ್ಕೆ ಯಾವುದು ಸರಿಹೋಗುವದೋ ಅದು ಮುಂಬಯಿ ಪ್ರಾಂತದಲ್ಲಿಯ ಠಾಣಾ, ಸುರತ, ಬೆಳಗಾವಿ ಮೊದಲಾದ ಗಡಿಜಿಲ್ಹೆಗಳಿಗೂ ಅನ್ವಯಿಸುವದು.

ಮುಂಬಯಿ
೨೬—೧೦—೧೯೪೮ ಕಿ. ಘ. ಮ.

ಲಾಭದಲ್ಲಿ ಪಾಲು

ಔದ್ಯೋಗಿಕರಲ್ಲಿ ಮತ್ತು ಕೂಲಿಕಾರರಲ್ಲಿ ಉದ್ಯೋಗ ಧಂದೆಗಳಲ್ಲಿಯ ಲಾಭವನ್ನು ಹಂಚುವದರ ಸಂಬಂಧದಲ್ಲಿ ಯೋಜನೆಯೊಂದನ್ನು ಸಿದ್ಧಪಡಿಸಲು ಹಿಂದುಸ್ತಾನ ಸರಕಾರವು ಒಂದು ಸಮಿತಿಯನ್ನು ನೇಮಿಸಿದ್ದಿತು. ಜವಳಿ, ಕಲ್ಲಾರು, ಉಕ್ಕು, ಸಿಮೆಂಟು, ಟಾಯರು ಸಿದ್ಧಪಡಿಸುವ ಮತ್ತು ಸಿಗರೇಟ ಮಾಡುವ ಮೊದಲಾದ ಆರು ಉದ್ಯೋಗಗಳಲ್ಲಿ ಕೂಲಿಕಾರರಿಗೆ ಲಾಭದಲ್ಲಿ ಪಾಲು ಕೊಡುವ ಸಂಬಂಧದಲ್ಲಿ ಸಮಿತಿಯವರು ಕೆಲವೊಂದು ಯೋಜನೆಯನ್ನು ಶಿಫಾರಸು ಮಾಡಿರುವರು.

ಕೇಂದ್ರೀಕೃತ ಉದ್ಯೋಗಗಳಲ್ಲಿ ಲಾಭವೇ ಇರತಕ್ಕದ್ದಲ್ಲ ಎಂಬುದು ನಮ್ಮ ಅಭಿಪ್ರಾಯ. ಕೇಂದ್ರೀಕೃತ ಸ್ವರೂಪದಲ್ಲಿ ಸಂಘಟಿಸಬೇಕಾದ ಎಲ್ಲ ಉದ್ಯೋಗಗಳನ್ನು ನೋಕರಿಯ ತಳಹದಿಯಲ್ಲಿ ಕಾರ್ಯಕಾರೀ ಮಾಡತಕ್ಕದ್ದು. ಅವೆಲ್ಲ ಸರಕಾರದ ನಿಯಂತ್ರಣಕ್ಕೆ ಒಳಪಟ್ಟಿರಬೇಕು. ವೆಚ್ಚ ಹೋಗಿ ಉಳಿದ ಹಣವೆಲ್ಲ ಅದೇ ಉದ್ಯೋಗದಲ್ಲಿ ಮತ್ತೆ ವ್ಯಯವಾಗತಕ್ಕದ್ದು. ಇಂಥ ಉದ್ಯೋಗಗಳಲ್ಲಿಯ ಕೆಲಸಗಾರರಿಗೆ ಸಾಕಷ್ಟು ಸಂಬಳ ಮತ್ತು ಕೂಲಿ ದೊರೆಯಲಿಕ್ಕೆ ಬೇಕು. ಮನೆಮಾರಿಗೆಯ ಮತ್ತು ಹಳ್ಳಿ ಕೈಗಾರಿಕೆ ಉದ್ಯೋಗಗಳಂಥ ಉದ್ಯೋಗಗಳಲ್ಲಿಯ ಕೂಲಿಕಾರರಿಗೆ ದೊರೆಯುವಷ್ಟು ಸಂಭಾವನೆ ಈ ಕೂಲಿಕಾರರಿಗೆ ದೊರೆಯತಕ್ಕದ್ದು.

ಗಿರಣಿಗಳಲ್ಲಿಯ ಲಾಭದಲ್ಲಿಯ ಪಾಲಿನ ಯೋಜನೆ ಮತ್ತು ಅಂಥವೇ ಅನೇಕ ಕಲ್ಯಾಣಪ್ರದವೆಂದು ಹೇಳಲಾಗುವ ಯೋಜನೆಗಳು ಕೆಲಸಗಾರರನ್ನು ದಾಸ್ಯದಲ್ಲಿ ನೂಕುವ ಮತ್ತು ಅವರ ಪರಿಶ್ರಮದ ಪ್ರತಿ ಔಂಸನ್ನು ಹೀರುವ ಯೋಜನೆಗಳಾಗಿವೆ. ತೋರಿಕೆಗೆ ಕೆಲಸಗಾರನಿಗೆ ಹಣದ ಲಾಭ ಅದರಿಂದ ಸಿಕ್ಕುವದೆಂದು ಎನಿಸಿದರೂ ಕೊನೆಯಲ್ಲಿ ಅವು ಗಿರಣಿ ಉತ್ಪಾದನೆಗಳಿಗೆ ಹೆಚ್ಚು ಒಳ್ಳೆ ಪೇಟೆಗಳನ್ನು ದೊರಕಿಸಿ ಕೊಡುವವು. ಇವೆಲ್ಲ ಕೂಲಿಕಾರರನ್ನು ದಾಸ್ಯದಲ್ಲಿ ನೂಕುವುವಲ್ಲದೆ ಅವರನ್ನು ಮುಕ್ತ ಮಾಡುವುದಿಲ್ಲ. ಅವರ ವ್ಯಕ್ತಿತ್ವದ ಬೆಳವಣಿಗೆಗೂ ಅವು ಸಹಾಯಕಾರಿಯಾಗಲಾರವು.

— ಜೆ. ಸಿ. ಕುಮಾರಪ್ಪ

ಕಾರ್ಯಕಲಾಪಗಳ ದಿಗ್ದರ್ಶನ

ಅಕ್ಟೋಬರ ತಿಂಗಳ ತಾ. ೧ ರಿಂದ ತಾ. ೨೨ ರ ವರೆಗೆ ಮುಂಬಯಿ ಶಾಸನ ಸಭೆಯಲ್ಲಿ ಏನೇನು ನಡೆದಿತೆಂಬುದರ ದಿಗ್ದರ್ಶನವನ್ನು ಕೆಳಗೆ ಕೊಡಲಾಗಿದೆ. ತಾ. ೨೨ ಕ್ಕೆ ಶ್ರೀಮತಿ ಲೀಲಾವತಿ ಮುನಸಿಯವರು ತಂದ ಒತ್ತಾಯದ ಶಿಕ್ಷಕ ವೃತ್ತಿಯ ಗೊತ್ತುವಳಿಯನ್ನು ಚರ್ಚಿಸಿ ಅನಿಯಮಿತ ಅವಧಿಯ ವರೆಗೆ ಶಾಸನ ಸಭೆಯು ಮುಂಬರಿದಿತು.

ಅಕ್ಟೋಬರ ತಾ ೧ ರಂದು ಮುಂಬಯಿ ಪ್ರಾಂತದ ಬಾಲ ಅಪರಾಧಿಗಳ ಪುನರ್ನಿವೇಶಕ್ಕೆ ಸಂಬಂಧಪಟ್ಟ ಮಸೂದೆಯು ಸ್ವೀಕೃತವಾಯಿತು. ಬಾಲ ಅಪರಾಧಿಗಳನ್ನು ತಕ್ಕ ವಾತಾವರಣದಲ್ಲಿಡಬೇಕೆಂದೂ ಅವರ ವಿಚಾರಣೆಯು ಪ್ರತ್ಯೇಕ ನ್ಯಾಯಾಲಯದಲ್ಲಿಯೇ ನಡೆಯಬೇಕೆಂದೂ ನ್ಯಾಯಾಧೀಶರು ಬಾಲ ಅಪರಾಧಿಗಳ ಹಿತಚಿಂತಕರ ಹಾಗೆ ವರ್ತಿಸತಕ್ಕದ್ದೆಂದೂ ಈ ಗೊತ್ತುವಳಿಯಲ್ಲಿ ಕಾಣಿಸಲಾಗಿದೆ. ಸಭೆಯು ಸೋಮವಾರ ತಾ ೪ ಕ್ಕೆ ಮುಂದರಿಯಿತು.

ಅಕ್ಟೋಬರ ತಾ. ೪ ರಂದು ಅರ್ಥಸಚಿವರಾದ ಶ್ರೀ ವೈಕುಂಠಲಾಲ ಮೆಹತಾ ಅವರು ೧೯೪೮-೪೯ ನೇ ವರ್ಷದ ಬಗ್ಗೆ ಒಟ್ಟು ೨ ಕೋಟಿ ೩೦ ಲಕ್ಷ ೪೨ ಸಾವಿರ ೬೩೨ ರೂಪಾಯಿಗಳ ಹೆಚ್ಚು ವೆಚ್ಚದ ಪುರವಣಿ ಪತ್ರಿಕೆಯನ್ನು ಮಂಡಿಸಿದರು. ಮದ್ಯಪ್ರತಿಬಂಧ ಯೋಜನೆಗೂ ಮದ್ಯಪ್ರತಿಬಂಧದಿಂದಾಗುವ ಲಾಭಗಳ ಬಗ್ಗೆ ಸಂಶೋಧನ ನಡೆಸುವದಕ್ಕೂ ಪೋಲೀಸ ಶಾಖೆಯಲ್ಲಿ ಬರುವ ಹೆಚ್ಚಿನ ವೆಚ್ಚಕ್ಕೂ ಚಿಕ್ಕಲುತನದ ಸುಧಾರಣೆಯ ಯೋಜನೆಗೂ ಮೇಲ್ಕಾಣಿಸಿದಷ್ಟು ಹೆಚ್ಚಿನ ವೆಚ್ಚವು ತಗಲುವದೆಂದು ಪುರವಣಿ ಪತ್ರಿಕೆಯನ್ನು ಸಭೆಯಲ್ಲಿ ಮಂಡಿಸುತ್ತ ಅರ್ಥಸಚಿವರು ತಿಳಿಸಿದರು.

ಅಕ್ಟೋಬರ ತಾ. ೫ ಕ್ಕೆ ದಲಿತ ವರ್ಗದ ಮಂತ್ರಿ ಶ್ರೀ ಜಿ. ಡಿ. ತಪಾಸೆಯವರ ಹರಿಜನ ಮಂದಿರ ಪ್ರವೇಶ ಕಾಯದೆಯ ತಿದ್ದುಪಡಿ ಮಸೂದೆಯು ಸರ್ವಾನುಮತದಿಂದ ಸ್ವೀಕೃತವಾಯಿತು. ಈ ತಿದ್ದುಪಡಿಯಲ್ಲಿ ದೇವಾಲಯ ಎಂಬ ಶಬ್ದಕ್ಕೆ ಹೀಗೆ ವ್ಯಾಖ್ಯೆ ಕೊಡಲಾಗಿದೆ. ಯಾವದೇ ಹೆಸರಿನಿಂದ ಯಾರದೇ ಸ್ವಾಮಿತ್ವದಲ್ಲಿದ್ದರೂ ರೂಢಿಪರಂಪರೆಯಿಂದ ಹಿಂದು ಧರ್ಮೀಯರಿಂದ ಧಾರ್ಮಿಕ ಪೂಜೆಗಾಗಿ ಉಪಯೋಗಿಸಲ್ಪಡುವ ಯಾವದೇ ಸ್ಥಳವು ದೇವಾಲಯವೆನ್ನಿಸಿಕೊಳ್ಳುವದು. ಅಂಥಲ್ಲೆಲ್ಲ ಹರಿಜನರಿಗೆ ಪ್ರವೇಶವಿರಬೇಕು ಎಂದು ತೋಡಲಾಗಿ ಈ ತಿದ್ದುಪಡಿಯಲ್ಲಿ ಉಂಟು.

ಅಕ್ಟೋಬರ ತಾ ೭ ಕ್ಕೆ ಅರ್ಥಸಚಿವರ ಪೂರಕ ಪತ್ರಿಕೆಯ ಚರ್ಚೆಯಾಗಿ ಅದು ಮಾನ್ಯಮಾಡಲ್ಪಟ್ಟಿತು. ಇಂದಿನ ಸಭೆಯಲ್ಲಿ ಶಾಸನಸಭೆಯ ಸದಸ್ಯರಿಗೆ ಸಭೆಗಾಗಿ ಮುಂಬೈ, ಪುಣೆಗೆ ಬಂದಾಗ ಆಗುವ ಸ್ಥಳಾಭಾವದ ದೂರುಗಳವಿಷಯ ಮುಂದೆ ಬಂದಿತು. ಬರುವ ವರ್ಷದೊಳಗಾಗಿ ಈ ಕೊಂದರೆ, ಅಗದಂತೆ ವಿರ್ಸಾಡು ಮಾಡಲಾಗುವದೆಂದು ಅರ್ಥಸಚಿವರು ಆಶ್ವಾಸನಕೊಟ್ಟರು. ಆಮೇಲೆ ಆರೋಗ್ಯಸಚಿವರಾದ ಡಾ. ಗಿಲ್ಡರರು, ಪ್ರತಿಯೊಂದು ಜಿಲ್ಹೆಯ ಸ್ಥಳದಲ್ಲಿ ಸರಕಾರದವರು ಒಂದಾದರೂ ಕ್ಷಯರೋಗ ಚಿಕಿತ್ಸಾಲಯ ಸ್ಥಾಪಿಸುವರೆಂದು ಅರುಹಿದರು. ನಂತರ ಹೊಲಸಾಗುವಳಿ ಕಾಯದೆ ತಿದ್ದುಪಡಿ ಮಸೂದೆಯ ಪ್ರಥಮವಾಚನ ಮುಂದೆಸಾಗಿತು. ೨೮೫ ತಿದ್ದುಪಡಿಗಳಲ್ಲಿ ೫೮ ಮಾತ್ರ ಮಾನ್ಯಮಾಡಲ್ಪಟ್ಟು ಸಭೆ ಮರುದಿನಕ್ಕೆ ಮುಂಬರಿಯಿತು.

ಅಕ್ಟೋಬರ ೮ ರಂದು ಪೂರಕ ಪತ್ರಿಕೆಯ ಬಗ್ಗೆ ಚರ್ಚೆ ನಡೆದಾಗ ಪೂರೈಕೆ ಮಂತ್ರಿ ಶ್ರೀ ದಿನಕರರಾವ ದೇಸಾಯಿಯವರು ಬಟ್ಟೆ ಹಾಗು ಆಹಾರ ಧಾನ್ಯಗಳ ಭಾವೀ ನಿಯಂತ್ರಣಗಳ ಬಗ್ಗೆ ಸರಕಾರದ ಧೋರಣವೇನೆಂಬುದನ್ನು ಸಾರಿದರು. ಭತ್ತ ಬೆಳೆಯುವ ಭಾಗದಲ್ಲಿ ಬೇಗ ಒತ್ತಾಯದ ಎತ್ತುವಳಿ ಜಾರಿ ಮಾಡಲಾಗುವದೆಂದೂ ಹಿಂಗಾರಿ ಹಾಗೂ ಉಳಿದ ಬೆಳೆಗಳ ಬಗ್ಗೆ ಸರಕಾರದ ಧೋರಣವಿನ್ನೂ ನಿರ್ಧಾರವಾಗಿಲ್ಲವೆಂದೂ ೧ ಲಕ್ಷಕ್ಕಿಂತ ಹೆಚ್ಚು ವಸತಿಯಿದ್ದ ಪಟ್ಟಣಗಳಲ್ಲಿ ಸೀದಾ ಪದ್ಧತಿಯನ್ನು ಅಮಲಿನಲ್ಲಿ ತರಲು ಸರಕಾರವು ನಿರ್ಧರಿಸಿದೆಯೆಂದೂ ಹೇಳಿದರು. ಬಟ್ಟೆಯ ಹಂಚುವಿಕೆಯ ಬಗ್ಗೆ ಮಾತನಾಡುತ್ತ ಬಟ್ಟೆಯ ಸೀದಾ ಪ್ರಾರಂಭವಾದ ಮೇಲೆ ಪ್ರತಿಯೊಬ್ಬರಿಗೆ ವರ್ಷಕ್ಕೆ ೧೩ ರಿಂದ ೨೦ ಗಜ ವಸ್ತ್ರ ಸಿಕ್ಕುವ ಹಾಗೆ ಏರ್ಪಾಡು ಮಾಡಲಾಗುವದೆಂದು ಅರುಹಿದರು.

ಆ ಮೇಲೆ ಕೂಲಿಕಾರ ಮಂತ್ರಿ ಶ್ರೀ ನಂದಾ ಅವರು ವಾಸ ಸೌಕರ್ಯಕ್ಕಾಗಿ ಸರಕಾರವು ಈಗಾಗಲೇ ೪ ಕೋಟಿ ರೂ.ಗಳ ಗೃಹ ನಿರ್ಮಾಣ ಯೋಜನೆ ಕೈಕೊಂಡಿರುವದಾಗಿಯೂ ಈ ಬಗ್ಗೆ ಕೇಂದ್ರ ಸರಕಾರಕ್ಕೆ ಸಾಲ ಕೇಳಲಾಗಿದೆಯೆಂದೂ ಇಟ್ಟಿಗೆಗಳ ಕೊರತೆಯನ್ನು ಹೋಗಲಾಡಿಸಲು ೩-೪ ಕಾರಖಾನೆಗಳನ್ನು ಬೇಗ ತೆರೆಯಲಾಗುವದೆಂದೂ ಗೃಹ ಯೋಜನೆಯ ಬಗ್ಗೆ ಒಂದು ಮಂಡಳ ರಚಿಸಲಾಗುವದೆಂದೂ ಸಾರಿದರು.

ಅಕ್ಟೋಬರ ತಾ. ೯ ರಂದು ಅರ್ಥಸಚಿವರು ಮಂಡಿಸಿದ ಪೂರಕ ಪತ್ರಿಕೆಯು ಬೇಗ ಕೆಲಸ ಮಾನ್ಯವಾಯ್ತು. ಸಾವಕಾರೀ ಕಾಯದೆ ತಿದ್ದುಪಡಿಯ ಮಸೂದೆಯೂ ಇಂದು ಸ್ವೀಕೃತವಾಯಿತು. ಇದರಲ್ಲಿಯ ಮುಖ್ಯ ಅಂಶವೆಂದರೆ ಬ್ಯಾಂಕುಗಳಲ್ಲದೆ ಸಾವಕಾರೀ ವ್ಯವಹಾರವನ್ನು ಸಾಗಿಸುವ ಇನ್ನಿತರ ಇನ್‌ಕಾರ್ಪೊರೇಟೆಡ್ ಸಂಸ್ಥೆಗಳು ಈ ಕಾಯದೆಯಲ್ಲಿ ಒಳಗೊಳ್ಳುವಂತೆ ಮಾಡಿದೆ.

ಪ್ರಶ್ನೋತ್ತರಗಳು

ಅಕ್ಟೋಬರ ತಾ. ೧೧ ರಂದು ಪ್ರಶ್ನೋತ್ತರಗಳ ಕಾಲಕ್ಕೆ ಈ ಕೆಳಗಿನ ಅಂಶಗಳು ತಿಳಿದವು.

ಕಂಧಾಯ, ಪೋಲೀಸ ಮತ್ತು ಗುಪ್ತ ಪೋಲೀಸ ಶಾಖೆಗಳ ನೌಕರರು ಆರ್. ಎಸ್. ಎಸ್. ಕ್ಕೆ ನಿಷ್ಠೆಯುಳ್ಳವರಿದ್ದಾರೆಂಬುದು ಸುಳ್ಳು. ಮುಸ್ಲಿಂ ಲೀಗು ಈಗ ನಿರುಪದ್ರವಿಯಾಗಿದೆ. ಅದರ ವರ್ಚಸ್ಸು ಏನೂ ಉಳಿದಿಲ್ಲ.

ಮಾಂಡ್ವಾ, ಚೋರಿಯಾ, ರತ್ನಾಗಿರಿ, ಪೂರ್ಣಗಡ, ಜೈತಾಪೂರ, ವಿಜಯ ದುರ್ಗ ಬಂದರಗಳಲ್ಲಿ ಧಕ್ಕೆಗಳನ್ನು ಕಟ್ಟುವದೇ ಮೊದಲಾದ ಯೋಜನೆಗಳ ಬಗ್ಗೆ ವಿಚಾರ ನಡೆದಿದ್ದು ಈ ವಿಷಯದಲ್ಲಿ ಹಿಂದುಸ್ತಾನ ಸರಕಾರದ ಸಲಹೆ ಸೂಚನೆಗಳನ್ನೇ ನಿರೀಕ್ಷಿಸಲಾಗುತ್ತಿದೆ.

ಅಕ್ಟೋಬರ ತಾ ೧೬ ರಂದು ಮಾನ್ಯಮಂತ್ರಿ ಶ್ರೀ ನಂದಾರು, ಕೇಂದ್ರ ಸರಕಾರದವರು ಮನೆ ಕಟ್ಟುವ ಯೋಜನೆಗೆ ೨ ಕೋಟಿ ರೂ. ಸಾಲ ಕೊಟ್ಟಿದ್ದಾರೆಂದೂ ಇದು ವರೆಗೆ ಮುಂಬಯಿ ಅಹಮದಾಬಾದ ಸೊಲ್ಲಾಪುರಗಳಲ್ಲಿ ೩ ಸಾವಿರ ಮನೆಕಟ್ಟಲಾಗಿದೆಯೆಂದೂ ಅಲ್ಲದೆ ೫ ಸಾವಿರ ಮಿಲಿಟರಿ ಗುಡಿಸಲುಗಳನ್ನು ವಾಸಯೋಗ್ಯವಾಗುವಂತೆ ಸರಿಪಡಿಸಲಾಗಿದೆಯೆಂದೂ ಹೌಸಿಂಗ ಸೋಸಾಯಟಿಗಳಿಗೆ ಹಣದ ಮೂಲಕ ಪ್ರೋತ್ಸಾಹಿಸಲಾಗುವದೆಂದೂ ಅರುಹಿದರು.

ಕಬ್ಬಿನ ಕರದಿಂದ ೭೫ ಲಕ್ಷ ರೂ. ಉತ್ಪನ್ನ ಬರಬಹುದೆಂದು ಇಂದು ಅರ್ಥಸಚಿವರು ಈ ವಿಷಯದ ಬಗ್ಗೆ ಮಂಡಿಸಿದ ಮಸೂದೆಯ ಚರ್ಚೆಯ ಕಾಲಕ್ಕೆ ಅರುಹಿದರು. ಇಂದಿನ ಸಭೆಯಲ್ಲಿ ಮುಖ್ಯಮಂತ್ರಿಗಳು ಈ ಅಧಿವೇಶನವು ತಾ ೨೨ ಕ್ಕೆ ಮುಕ್ತಾಯವಾಗುವದೆಂದು ತಿಳಿಸಿದರು.

ಅಕ್ಟೋಬರ ತಾ ೧೮ ರಂದು ಜಾತಿಯಿಂದ ಹೊರಗೆ ಹಾಕುವದನ್ನು ತಡೆಯಬೇಕೆಂಬ ಮಸೂದೆಯನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಕಳಿಸಬೇಕೆಂದು ಸಭೆಯು ಒಪ್ಪಿಕೊಂಡಿತು.

ಸಂಯುಕ್ತ ಅಧಿವೇಶನ

ತಾ ೧೯ ಕ್ಕೆ ಮುಂಬಯಿ ಶಾಸನಸಭೆ ಮತ್ತು ವಿಧಿಮಂಡಲಗಳ ಸಂಯುಕ್ತ ಸಭೆಯು ಪುಣೆಯ ಶಾಸನ ಸಭೆಯ ಭವನದಲ್ಲಿ ಸೇರಿತ್ತು. ಮುಂಬಯಿ ಗವರ್ನರರಾದ ಸರ್ ರಾಜಾ ಮಹಾರಾಜ ಸಿಂಗರು ಅಂದು ಮಾತನಾಡಿದರು. ಹೀಗೆ ಸಂಯುಕ್ತ ಸಭೆಯನ್ನುದ್ದೇಶಿಸಿ ಗವರ್ನರರು ಭಾಷಣ ಮಾಡಿದ್ದು ಇದೇ ಮೊದಲ ಉದಾಹರಣೆ. ಪ್ರಾಂತದ ಪಾರ್ಲಿಮೆಂಟರಿ ಇತಿಹಾಸದಲ್ಲಿಯೇ ಇದೊಂದು ಅಪೂರ್ವ ಘಟನೆಯೆಂದು ಸ್ವತಃ ಗವರ್ನರರು ಈ ಸಂದರ್ಭವನ್ನು ವರ್ಣಿಸಿದರು. ಅಧಿಕ ಉತ್ಪಾದನೆಗೆ ಸಕಲರೂ ನೆರವಾಗಿ ಅತಿಪ್ರಸರಣವನ್ನೂ ಏರಿಕೆಯ ಬೆಲೆಗಳನ್ನೂ ತಡೆಗಟ್ಟಬೇಕೆಂದು ಪ್ರತಿಪಾದಿಸಿದರಲ್ಲದೆ ನಿರಾಶ್ರಿತರ ಸಮಸ್ಯೆ, ವಸತಿಯ ಪ್ರಶ್ನೆ, ಅನ್ನವಸ್ತ್ರದ ಕೊರತೆ, ವಿಲೀನ ಸಂಸ್ಥಾನಗಳ ಆಡಳಿತ ಮೊದಲಾದ ವಿಷಯಗಳ ಬಗ್ಗೆ ಭಾಷಣ ಮಾಡಿದರು.

[illegible]

ಬೆಳವಿ ಪಟ್ಟೋಜಿಪಂತರು ಹೇಳಿದರು.

ಭಾರತದ [illegible] ಕುಲಕರ್ಣಿ [illegible] ಒಳಿತೆಂದು ಒಬ್ಬರು ಹೇಳಿದರು. ಯಾವ ಜಾತಿಯವರಿಗೂ ಸ್ಥಳಗಳನ್ನು ಕಾಯ್ದಿರಿಸಬಾರದೆಂದು ಒಬ್ಬರು ಹೇಳಿದರೆ ಇನ್ನೊಬ್ಬರು ಕಾಯ್ದಿರಿಸಬೇಕೆಂದು ಹೇಳಿದರು. ಒಬ್ಬರು ಭಾಷಾವಾರ ಪ್ರಾಂತರಚನೆಯಾಗಬೇಕೆಂದರೆ ಇನ್ನೊಬ್ಬರು ಇದರಿಂದ ಅನಾಹುತವಾಗುವದೆಂದು ಹೇಳಿದರು.

ಲಂಚಗುಳಿತನಕ್ಕಾಗಿ ಈ ೨ ವರ್ಷಗಳಲ್ಲಿ ೬೦೩ ಸರಕಾರಿ ಅಧಿಕಾರಿಗಳನ್ನು ದಂಡಿಸಲಾಗಿದೆಯೆಂದು ತಾ ೨೧ ರಂದು ಶ್ರೀ ಪೀರರು ತಿಳಿಸಿದರು. ಸರಕಾರಿ ನೌಕರ ಆಸ್ತಿಯ ವಿವರವನ್ನು ಕಾಲಕಾಲಕ್ಕೆ ಪರೀಕ್ಷಿಸಿ ಲಂಚಗುಳಿತನವನ್ನು ನಿರ್ಮೂಲಗೊಳಿಸಲಾಗುವದೆಂದೂ ಈ ಬಗ್ಗೆ ಆಜ್ಞೆ ಹೊರಡಿಸಲಾಗಿದೆಯೆಂದೂ ಮುಖ್ಯಮಂತ್ರಿಗಳು ಹೇಳಿದರು. ಅಜಾದ ಹಿಂದ ಸೇನೆಯ ೧೬೮ ಜನರನ್ನು ಪುನಃ ನೌಕರಿಗೆ ತೆಗೆದುಕೊಳ್ಳಲಾಗಿದೆಯೆಂದೂ ನಿವೃತ್ತ ಸೈನಿಕರಂತೆ ಉಳಿದವರಿಗೂ ಪ್ರಾಶಸ್ತ್ಯ ಕೊಡಲಾಗಿದೆಯೆಂದೂ ತಿಳಿಸಿದರು.

ಇಂದಿನ ದಿನವೇ ಶ್ರೀಮತಿ ಲೀಲಾವತಿ ಮುನಸಿಯವರು ಕಡ್ಡಾಯದ ಶಿಕ್ಷಕ ವೃತ್ತಿಯ ಬಗ್ಗೆ ಒಂದು ಗೊತ್ತುವಳಿ ಮಂಡಿಸಿದರು. ಮ್ಯಾಟ್ರಿಕ್ ಪರೀಕ್ಷೆಯಾದ ನಂತರ ಮುಂದೆ ಕಲಿಯಲಾಗದವರು ೨ ವರ್ಷ ಹಳ್ಳಿಗಳ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿ ದುಡಿಯಲೇಬೇಕೆಂಬ ಯೋಜನೆಯೊಂದನ್ನು ಸರಕಾರವು ಕೈಕೊಳ್ಳಬೇಕೆಂಬುದೇ ಈ ಗೊತ್ತುವಳಿಯ ಗುರಿ. ಶ್ರೀಮತಿ ಇಂದುಮತಿ ಶೇಟರು, ಶಿಕ್ಷಣ ಪೂರೈಸಿದ ನಂತರ ೨ ವರ್ಷ ಸಮಾಜಕ್ಕೆ ಯಾವ ಬಗೆಯ ಸೇವೆ ಸಲ್ಲಿಸತಕ್ಕದ್ದು ಎಂಬುದನ್ನು ಪರಿಶೀಲಿಸಲು ಒಂದು ಸಮಿತಿ ರಚಿತವಾಗಬೇಕೆಂದು ಇದಕ್ಕೆ ಒಂದು ತಿದ್ದುಪಡಿ ಸೂಚಿಸಿದರು.

ಅಕ್ಟೋಬರ ತಾ ೨೨ ರಂದು ಶ್ರೀಮತಿ ಲೀಲಾವತಿ ಮುನಸಿಯವರ ಗೊತ್ತುವಳಿಯ ಚರ್ಚೆಯಲ್ಲಿಯೇ ಹೊತ್ತು ಹೋದುದರಿಂದ ಶ್ರೀ ವೆಂಕಟರಾವ ಪವಾರರು ತರಬೇಕೆಂದಿದ್ದ ಸಂಯುಕ್ತ ಮಹಾರಾಷ್ಟ್ರ ನಿರ್ಮಾಣದ ಗೊತ್ತುವಳಿಯು ಚರ್ಚೆಗೆ ಬರಲಿಲ್ಲ. ಶ್ರೀ ಪೀರರು ಶ್ರೀಮತಿ ಮುನಸಿಯವರ ಗೊತ್ತುವಳಿಯನ್ನು ತಿದ್ದುಪಡಿಯೊಡನೆ ಒಪ್ಪಿಕೊಂಡರು. ನಂತರ ಮುಂಬಯಿ ಶಾಸನ ಸಭೆಯು ಅನಿಯಮಿತ ಅವಧಿಯ ವರೆಗೆ ಮುಂಬರಿದಿತು.

ಹೈದ್ರಾಬಾದ ಹೊಸ ಮಿಲಿಟರಿ ಸರಕಾರ ಸಲ್ಲಾಗಾರರಾದ ರಾಜಾ ಧೊಂಡಿರಾಜರು ಒಂದು ಸಂದರ್ಭದಲ್ಲಿ ಮಿಲಿಟರಿ ಆಡಳಿತೆಯು ತನ್ನ ನಿಷ್ಪಕ್ಷಪಾತದಿಂದ ಎಲ್ಲ ತೊಡಕುಗಳನ್ನೂ ತೊಡೆದು ಹಾಕಿ ಜಗತ್ತಿನಲ್ಲಿ ಭಾರತದ ಪ್ರತಿಷ್ಠೆಯು ಹೆಚ್ಚುವಂತೆ ಮಾಡಿದೆಯೆಂದು ಹೇಳಿದ್ದಾರೆ. ಮಿಲಿಟರಿ ಗವರ್ನರರು ಹೈದರಾಬಾದ ನಾಗರಿಕರ ಸಹಾಯವನ್ನು ಪಡೆಯಲು ಉತ್ಸುಕರಾಗಿದ್ದಾರೆಂಬುದಕ್ಕೆ ತಮ್ಮನ್ನು ತಮ್ಮ ಸರಕಾರದಲ್ಲಿ ಸೇರಿಸಿಕೊಂಡದ್ದೇ ಸಾಕ್ಷಿಯೆಂದೂ ಅವರು ಹೇಳಿದರು.

ಚಿತ್ರರಂಗ

ಲೀಲಾ

[illegible]

ಅರ್ಥ ವಾಕ್ಯ [illegible] ತಿರಸ್ಕಾರದಿಂದ [illegible] ಹೇಳಿ ತಯಾರುಮಾಡಿಕೊಂಡಿದ್ದ [illegible] ಮುಗ್ಧನಂತೆ ನಟಿಸುತ್ತಿದ್ದ [illegible] ನನ್ನು ಒಲಿಸಲು ಅವನ ಮುಂದೆ [illegible] ಶೃಂಗಾರದರ್ಶನ ನಡೆಸಿ [illegible] ಳಾದಳು. ಆಗ ನರೇಶನಿಗೆ [illegible] ತಾಯಿಗೆ ದೂರು ಮಾಡಿದ; [illegible] ಮದುವೆಯಾಗುವೆ ಎಂದು ಕೇಳಿದೆ [illegible] ಯಾಕೆ ಮಾಡಿದೆ ಎಂದು; [illegible] ನಲ್ಲಿ ತಾನು ಮುಂದಿಗೆ ತಿಂದು [illegible] ಕೆಂದು ನೀನೊಪ್ಪುವೆಯೆಂದು [illegible] ಅವಳವರಿಗೆ ಹೇಳಿದೆ ಎಂದಳು. [illegible] ಇವನ ಪತ್ರದ ಮೇರೆಗೆ [illegible] ಪಡೆದು ಲೀಲೆ ಬಂದು ಇವನ ತಾಯಿಗೆ [illegible] ಯಾಗಿ ಅವಳ ಅಪ್ರಸನ್ನತೆಯನ್ನು [illegible] ಳಾದಳು. ಪ್ರಿಯತಮ ನರೇಶನು [illegible] ಕೊಟ್ಟ ನಂತರ ತೃಪ್ತಳಾದರೂ [illegible] ಬಂದು ಅವಳೊಬ್ಬಳನ್ನೇ ಕರೆದು [illegible] ಮದುವೆಯಾದರೆ ನರೇಶನಿಗೆ ಅಸ್ತಿ [illegible] ಅವನ ತಾಯಿ ಮಾಡುವಳೆಂದು [illegible] ರಿಂದ ಲೀಲೆ ಅವನ ಜೀವನ [illegible] ದೆಂದು ಅಲ್ಲಿಂದ ಹೇಳದೆ ಕೇಳದೆ [illegible] ಓಡಿದಳು; ನರೇಶ ಮನೆಗೆ ಬಂದು [illegible] ಮದುವೆ ಮಾತಿತ್ತಿದರೆ [illegible] ಅವನ ತಾಯಿ [illegible] ಬಲದ [illegible] ಇಂದಿರೆಯನ್ನು ಮದುವೆಯಾಗಲು [illegible] ಸಮ್ಮತಿಸುತ್ತ. ಮದುವೆಗೆ ಮೂರು [illegible] ಇದ್ದಲ್ಲಿ ಲೀಲೆಯು ನೀರಿಗಾಗಿ [illegible] ಓಡಿದ. ಲೀಲೆ [illegible]

— ೧೯೪೮ [illegible]

ಅಧ್ಯಕ್ಷ ಡಾ: ಪಟ್ಟಾಭಿ ಸೀತಾರಾಮಯ್ಯ

[ಲೇಖಕರು ಶ್ರೀ " ಗಿರೀಶ "]

[illegible] ತರ್ಕವನ್ನೂ ಎದುರಿಸ [illegible] ಆ ಕಾಂಗ್ರೆಸ್ಸಿಗರು [illegible]. ಇಂದು ಏಳು ದಿನದ ಸೈರಣೆಗೆ ಭಾರತದ ಗವರ್ನರ ಜನರಲ್ ಪದ ದೊರೆತಿ[illegible]. ದಿನದ [illegible] ಕಾಂಗ್ರೆಸ್ [illegible] ಸ್ವತಂತ್ರವೇ [illegible] ಏಕೆಂದರೆ [illegible] ಮಧ್ಯದಲ್ಲಿ ಸಿಲುಕಿರುವ ಈ [illegible] ಸೂತ್ರಧಾರಿತ್ವದಿಂದ [illegible] ಸುರಕ್ಷಿತ?

ತಾಳಿದವ ಬಾಳುವನು ಎಂದು ಹಳೆಯ ಗಾದೆ. ಡಾ. ಪಟ್ಟಾಭಿ ಸೀತಾರಾಮಯ್ಯನವರು ಹತ್ತು ವರ್ಷ ತಾಳಿದರು-ಅದರಿಂದಲೇ ಅಂದು ಪಡೆಯಲಾರದ್ದನ್ನು ಇಂದು ಪಡೆದರು. ಹತ್ತು ವರ್ಷ ಹಿಂದೆ ತ್ರಿಪುರಿ ಕಾಂಗ್ರೆಸ್ಸಿನ ಅಧ್ಯಕ್ಷ ಪದಕ್ಕೆ ಸುಭಾಷ ಬೋಸರೊಡನೆ ಸೆಣಸಿ ಸೋತಾಗ ಗಾಂಧೀಜಿ "ಪಟ್ಟಾಭಿಯ ಸೋಲು ನನ್ನ ಸೋಲು" ಎಂದು ಉದ್ವಿಗ್ನರಾಗಿ ನುಡಿದು ಸುಭಾಷರ ರಾಜಕೀಯ ನೌಕೆಯನ್ನು ನುಚ್ಚು ನುರಿ ಮಾಡಿದ್ದರು. ಇಂದು ಅಂಥ ಪ್ರಚಂಡ ವಾಣಿಯ ಬೆಂಬಲವಿಲ್ಲದೆ ಪಟ್ಟಾಭಿಯವರು ಕಾಂಗ್ರೆಸ್ ಅಧ್ಯಕ್ಷ ಪದಕ್ಕೆ ಆರಿಸಿ ಬಂದಿದ್ದಾರೆ— ಪ್ರಚಂಡ ಬಹುಮತದಿಂದ ಎನ್ನಲು ಬಾರದಿದ್ದರೂ ಉತ್ತರ-ದಕ್ಷಿಣಗಳ ಸೆಣಸಾಟವೆಂಬ ದೃಷ್ಟಿಯಿಂದ ನೋಡಿದಲ್ಲಿ ಅವರು ಗೆದ್ದದ್ದು ದೊಡ್ಡ ಮಾತೇ ಎನ್ನಬೇಕು.

ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯನವರಿಗಿರುವ ಕಾಂಗ್ರೆಸ್ ಅಧ್ಯಕ್ಷಪದದ ಅರ್ಹತೆಗಳು ಹಲವಾರು. ಅವರು ವಯೋವೃದ್ಧರು, ಜ್ಞಾನವೃದ್ಧರು, ತಪೋವೃದ್ಧರು. ಅವರ ವಯಸ್ಸು ಅರುವತ್ತಕ್ಕೆ ಹತ್ತಿರ ಬಂದಿದೆ. ಅವರ ಜ್ಞಾನದ ಸಾಮ್ರಾಜ್ಯ ಬಹು ವಿಸ್ತಾರವಾದುದು. ರಾಜಕಾರಣವಂತೂ ಸರಿಯೆ; ಅರ್ಥಶಾಸ್ತ್ರದಲ್ಲಿಯೂ ಅವರದು ಎತ್ತಿದ ಕೈ. ಪುಸ್ತಕೀ ಅರ್ಥಶಾಸ್ತ್ರದಲ್ಲಿ ಮಾತ್ರವಲ್ಲ, ವ್ಯವಹಾರದಲ್ಲಿ ಕೂಡ. ಅವರು ಆಂಧ್ರ ದೇಶದ ಆರ್ಥಿಕ ಪುನರುಜ್ಜೀವನಕ್ಕೆ ಬಹು ಮಟ್ಟಿಗೆ ಕಾರಣವಾದ ಬ್ಯಾಂಕುಗಳು, ವಿಮಾ ಕಂಪನಿಗಳು, ಸಹಕಾರಿ ಸಂಘಗಳೇ ಮೊದಲಾದವುಗಳನ್ನು ಪ್ರಾರಂಭಿಸಿ, ಮಾರ್ಗದರ್ಶನ ಮಾಡಿಸಿ, ಯಶಸ್ಸಿನ ಮೆಟ್ಟಲನ್ನು ಏರಿಸಿದರು. ಈ ವಿಷಯದಲ್ಲಿ ಅವರ ಪ್ರಾವೀಣ್ಯವನ್ನರಿತೇ ಮದ್ರಾಸಿನಲ್ಲಿ ರಾಜಾಜಿ ಮಂತ್ರಿಮಂಡಲವಿದ್ದಾಗ ರಚಿಸಲ್ಪಟ್ಟ ಆರ್ಥಿಕ ಸಲಹೆ ಸಮಿತಿಯಲ್ಲಿ ಅವರಿಗೆ ಸ್ಥಾನ ಕೊಡಲಾಯಿತು. ಪತ್ರಿಕಾ ವ್ಯವಸಾಯದಲ್ಲಿಯೂ ಅವರು ಬಹಳವಾಗಿ ಪರಿಶ್ರಮಿಸಿದವರು. ಅವರು ಕೆಲ ಕಾಲ ಮಚಲೀಪಟ್ಟಣದಲ್ಲಿ "ಜನ್ಮಭೂಮಿ" ಎಂಬ ಇಂಗ್ಲೀಷ ಪತ್ರಿಕೆಯನ್ನು ನಡೆಸುತಿದ್ದರು. ಈಗಲಾದರೂ ಪಟ್ಟಾಭಿಗೆ ಪತ್ರಿಕೆಗಳು, ಪತ್ರಿಕಾಕರ್ತರೆಂದರೆ ತೀರ ಅಭಿಮಾನ. ಸುದ್ದಿಗಾರನೊಡನೆ ತಾಸುಗಟ್ಟಳೆ ವಿನೋದವಾಗಿ ಅವರಲ್ಲಿ ಹಾವೊಬ್ಬರಾಗಿ ಹರಟುತ್ತ ಕೂಡುತ್ತಾರೆ. ಅವರು ಅನೇಕ ಗ್ರಂಥಗಳನ್ನೂ ಬರೆದಿದ್ದಾರೆ. ಅದರಲ್ಲಿ ಕಾಂಗ್ರೆಸ್ಸಿನ ಇತಿಹಾಸಕ್ಕೆ ಪ್ರಥಮ ಗೌರವ ಸಲ್ಲಬೇಕು. ತಮ್ಮ ಲೇಖನಿಯ ಮಂತ್ರಶಕ್ತಿಯಿಂದ ಅವರು ಒಣ ಇತಿಹಾಸಕ್ಕೆ ಸರಸ ಸಾಹಿತ್ಯದ ಸೊಬಗನ್ನು ತಂದುಕೊಟ್ಟಿದ್ದಾರೆ.

ಪಟ್ಟಾಭಿಯವರ ತಪಃಪುಣ್ಯವೂ ಕಡಿಮೆಯಲ್ಲ. ಅವರು ಗಾಂಧೀಜಿಗಿಂತಲೂ ಹಳೆಯ ಕಾಂಗ್ರೆಸ್ಸಿಗರೆಂದು ಹೇಳಿದರೆ ಯಾರಾದರೂ ಆಶ್ಚರ್ಯಪಡಬಹುದು. ಆದರೆ ಅದು ಅಕ್ಷರಶಃ ಸತ್ಯ. ಅವರು ೧೯೦೬ ರಿಂದಲೂ ಕಾಂಗ್ರೆಸ್ಸಿಗೆ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಹತ್ತು ವರ್ಷಗಳಿಂದ ಕಟ್ಟಿ [illegible] ತಮ್ಮ [illegible] ಲಾಭದಾಯಕ [illegible] ವೃತ್ತಿಯನ್ನು ತ್ಯಜಿಸಿ ಅವರು ರಾಜಕಾರಣದಲ್ಲಿ ಧುಮುಕಿದವರು. ಅಂದಿನಿಂದ ಕಾಂಗ್ರೆಸ್ಸು ಕೊಟ್ಟ ಕರೆಗಳಿಗೆಲ್ಲ – ಅವು ಹೋರಾಟದವೆ ಇರಲಿ, ರಚನಾತ್ಮಕ ಕಾರ್ಯಕ್ರಮದವೆ ಇರಲಿ—ಅವರು ಓಗೊಟ್ಟು ಸರ್ವಶಕ್ತಿಯಿಂದ ದುಡಿದಿದ್ದಾರೆ. ಹಲಗಾಲ ಅವರು



ಡಾ. ಪಟ್ಟಾಭಿ [illegible]
[illegible]

ಆಂಧ್ರ ಪ್ರಾಂತಿಕ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರಲ್ಲದೆ ಕಾಂಗ್ರೆಸ್ ಕಾರ್ಯ ಸಮಿತಿಯ ಸದಸ್ಯರೂ ಆಗಿ ದೇಶದ ರಾಜಕಾರಣಕ್ಕೆ ಮಾರ್ಗದರ್ಶನ ಮಾಡಿಸಿವರು.

ಆದರೆ ಪಟ್ಟಾಭಿಯವರ ಹೆಸರು ಎದ್ದು ಕಾಣುವದು ಸಂಸ್ಥಾನಿ ಪ್ರಜೆಗಳ ಹೋರಾಟದ ಇತಿಹಾಸದಲ್ಲಿ. ಅ. ಭಾ ಸಂಸ್ಥಾನಿ ಪ್ರಜಾಪರಿಷತ್ತಿನ ಕಾರ್ಯ ನಿರ್ವಾಹಕರಲ್ಲಿ ಅವರೊಬ್ಬರಾದಂದಿನಿಂದ ಸಂಸ್ಥಾನಗಳ ರಾಜಕಾರಣದಲ್ಲಿ ಅಸಡ್ಡೆ ತೋರಿಸುತ್ತ ಬಂದಿದ್ದ ಕಾಂಗ್ರೆಸ್ಸು ಅದರಲ್ಲಿ ಹೆಚ್ಚು ಹೆಚ್ಚಾಗಿ ಸೆಳೆಯಲ್ಪಟ್ಟಿದ್ದಲ್ಲದೆ ಗಾಂಧೀಜಿಯೂ ಅದರಲ್ಲಿ ಅಷ್ಟಿಷ್ಟು ಆಸ್ಥೆ ವಹಿಸತೊಡಗಿದರು. ಇದೀಗ ಹೈದರಾಬಾದ ಸಮಸ್ಯೆಯ ಪರಿಹಾರವಾದುದರಿಂದ ಭಾರತ ಸಂಸ್ಥಾನಿ ಪ್ರಜೆಗಳು ಪೂರ್ಣವಾಗಿ ವಿಮುಕ್ತರಾದಂತಾಗಿದೆ. ಈ ವರೆಗೆ ಪ್ರಥಮ ಪ್ರಾಶಸ್ತ್ಯವನ್ನು ತಾವು ಈ ಸಮಸ್ಯೆಗೆ ಕೊಡುತ್ತ ಬಂದಿದ್ದು ಇನ್ನು ಅದು ಅವಶ್ಯವಿಲ್ಲೆಂದೇ ಈಗ ಕಾಂಗ್ರೆಸ್ ಅಧ್ಯಕ್ಷತೆಗೆ ತಾವು ಸೆಣಸಿರುವುದಾಗಿ ಅವರು ಮೊನ್ನೆ ಸಾರಿದರು. ಸಂಸ್ಥಾನಿ ಪ್ರಜೆಗಳ ವಿಷಯದಲ್ಲಿ ಅವರಿಗಿರುವ ಅತುಲ ಪ್ರೇಮದ ದ್ಯೋತಕವಿದು.

ರಾಜಾಜಿಗೆ ಗಾಂಧೀಜಿಯ ಅಂತರಂಗದ ಕಾವಲುಗಾರನೆಂಬ ಬಿರುದಾದರೆ ಡಾ। ಪಟ್ಟಾಭಿಗೆ ಗಾಂಧೀಜಿಯ ಮಲ್ಲಿನಾಥನೆಂಬ ಬಿರುದು. ಗಾಂಧೀಜಿಯ ಆರ್ಥಿಕ ತತ್ವಜ್ಞಾನಕ್ಕೆ, ಅವರ ರಾಜಕೀಯ ಸೂತ್ರಗಳಿಗೆ ಪಟ್ಟಾಭಿಯವರು ಕೊಟ್ಟಷ್ಟು ಸರಳ, ತರ್ಕಶುದ್ಧ ವ್ಯಾಖ್ಯೆಯನ್ನು ಬೇರಾರೂ ಕೊಟ್ಟಿರಲಾರರು. ಅದರಲ್ಲಿ ರಾಜಾಜಿಯ ವಚನಗಳಲ್ಲಿ ಕಾಣುವ ವಿಮರ್ಶಕ ದೃಷ್ಟಿಯಾಗಲಿ, ಪಂ. ಜವಾಹರರ ಬರವಣಿಗೆಯ ವಿಶ್ವದೃಷ್ಟಿ, ತನ್ಮಯತೆಗಳಾಗಲಿ, ಕಂಡು ಬಾರವು ನಿಜ. ಆದರೆ ಮೊನೆಯಾದ ತರ್ಕ, ಸ್ನಿಗ್ಧಪ್ರವಾಹ, ಪ್ರತಿವಾದಿಯ ವಾದವನ್ನು ನಿರಸನಗೊಳಿಸುವ ಚಮತ್ಕಾರ ಇವುಗಳಿಂದ ವಿಷಯವನ್ನು ಹಸಿಗೋಡೆಯಲ್ಲಿ ಹರಳು ನಡುವಂತೆ ಮನಗಾಣಿಸುವ ಸಾಮರ್ಥ್ಯ ಅವರಿಗೆ ಕೈಗೂಡಿದೆ.

ಅಖಿಲ ಭಾರತದ ರಾಜಕಾರಣದಲ್ಲಿ ಅವರ ಖ್ಯಾತಿ ಅಷ್ಟು ಮೆರೆದಿಲ್ಲವಾದರೆ ಅದಕ್ಕೆ ಕಾರಣಗಳನ್ನು ಹಲವಾರು ಕೊಡಬಹುದು. ಮೊದಲನೆಯದಾಗಿ, ಪಟ್ಟಾಭಿಯ ತೇಜ ಕ್ಷಾತ್ರವಲ್ಲ, ಬ್ರಾಹ್ಮ; ಅದರಿಂದಲೇ ಅದು ಉತ್ತೇಜಿತವಲ್ಲ, ಪ್ರಶಾಂತ, ನಿರೀಹ. ಎರಡನೆಯದಾಗಿ ಅವರಲ್ಲಿ ಆಂಧ್ರ ದೇಶದ ಬಗ್ಗೆ ಭಾರೀ ಅಭಿಮಾನವಿದೆ. ದೇಶದ ಪ್ರಥಮ ಶ್ರೇಣಿಯ ಮುಂದಾಳುಗಳಲ್ಲಿ ಅವರಷ್ಟು ಪ್ರಾಂತಾಭಿಮಾನ ಬೇರಾರಲ್ಲಿಯೂ ಇಲ್ಲವೆನ್ನಬಹುದು. ಇದೇ ಕಾರಣದಿಂದ ಅವರಿಗೆ ೧೯೩೭ರಲ್ಲಿ ಮದ್ರಾಸಿನ ಮುಖ್ಯ ಮಂತ್ರಿತ್ವ ಕೈಗೆ ಬಾರದೆ ಹೋಯಿತೆಂದು ಕೆಲವರು ಹೇಳುವರು. ತಮಿಳರು ಅವರ ನೇತೃತ್ವದಲ್ಲಿ ಕೆಲಸ ಮಾಡಲ ಒಪ್ಪಲಿಲ್ಲವಂತೆ. ಉಳಿದ ಪ್ರಾಂತಗಳಿಗಿಂತ ಮೊದಲು ಆಂಧ್ರ ಪ್ರಾಂತವನ್ನು ರಚಿಸಬಹುದೆಂದು ಭಾರತ ಸರಕಾರ ಧೋರಣ ತಳೆದಿದ್ದರೆ ಅದಕ್ಕೆ ಪಟ್ಟಾಭಿಯವರ ಪ್ರಭಾವವೂ ಕಾರಣವಾಗಿತ್ತೆಂದು ಬಲ್ಲವರ ಭಾವನೆ. ಮುಖ್ಯವಾಗಿ ಪಟ್ಟಾಭಿಯವರ ವ್ಯಕ್ತಿತ್ವದಲ್ಲಿ ಜನಕೋಟಿಯನ್ನು ತನ್ನ ಜತೆ ಕೊಚ್ಚಿಕೊಂಡೊಯ್ಯಬಲ್ಲ ಓಜಸ್ಸಿನ ಅಭಾವವಿದೆ. ಕಣ್ಣು ಕೋರೈಸುವ ಪ್ರತಾಪವಿಲ್ಲ. ಮುಂದೊತ್ತಿ ಹೋಗಿ ಹೇಗಾದರೂ ಜನಪ್ರಿಯತೆಯನ್ನು ಸಂಪಾದಿಸುವ ಸಂಧಿಸಾಧಕ ಪ್ರವೃತ್ತಿಯೂ ಅವರಲಿಲ್ಲ.

ಅಧ್ಯಕ್ಷ ಪಟ್ಟಕ್ಕೆ ಪಟ್ಟಾಭಿಯವರೊಡನೆ ಸ್ಪರ್ಧಿಸಿದ ಬಾಬೂ ಪುರುಷೋತ್ತಮದಾಸ ಟಂಡನ್ನರನ್ನೂ ಇವರನ್ನೂ ಹೋಲಿಸುವದಾದರೆ, ಪಟ್ಟಾಭಿಯವರ ಗೆಲವಿನಿಂದ ಕಾಂಗ್ರೆಸ್ಸಿನಲ್ಲಿ ಸಾತ್ವಿಕಕ್ಕೆ ಮತ್ತೊಮ್ಮೆ ವಿಜಯವಾಗಿ ರಾಜಸಕ್ಕೆ ಹಿಂದೇಟುಬಿತ್ತೆಂದು ಹೇಳಲಡ್ಡಿಯಿಲ್ಲ. ಟಂಡನ್ನರ ಪ್ರವೃತ್ತಿ ರಾಜಸ; ತುಸು ಜಾತೀಯತೆಯೂ ಅವರಲ್ಲಿದೆಂದು ಆರೋಪ ಅದರೆ ಅವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರೆ ಕಾಂಗ್ರೆಸ್ಸಿನಲ್ಲಿ ಇಂದು ಕಾಣಬರುತಿರುವ ಹೊಚ್ಚಾಟದ, ಅನಿರ್ಧಾರದ, ದುರಾಲಾಧ್ಯರನ್ನು ಆರಾಧಿಸುವ ನೀತಿ ಬದಿಗೊತ್ತಲ್ಪಟ್ಟು ಸರಿಯೆ ಇರಲಿ, ತಪ್ಪೇ ಇರಲಿ ಸ್ಪಷ್ಟವಾದ ಧೋರಣೆ ಬರಲು ಸಾಧ್ಯವಾಗುತಿತ್ತು. ಆದರೆ ಅದರ ಸಂಗಡ ಕಾಂಗ್ರೆಸ್ಸಿನಿಂದ ಕೆಲ ಸತ್ವಗಳು ಸಿಡಿದು ಹೋಗಲಿಕ್ಕೂ ಅವಕಾಶವಾಗುತಿತ್ತು. ಪಟ್ಟಾಭಿಯವರು ಯಥಾಸ್ಥಿತಿವಾದಿಗಳು. ಅವರ ನೇತೃತ್ವದಲ್ಲಿ ಕಾಂಗ್ರೆಸ್ಸು ಯಾವ ತೀಕ್ಷ್ಣ ಪರಿವರ್ತನೆಯನ್ನೂ ಹೊಂದದೆ ಇದ್ದುದನ್ನು ಉಳಿಸಿಕೊಂಡು ಸಾಗಬಹುದು. ಆದರೆ "ನೇತೃತ್ವ"ದ ತುಲನೆ ಅಪ್ರಸ್ತುತವೇನೊ—ಏಕೆಂದರೆ ಭಾರತದ ಭಾಗ್ಯನಿರ್ಣಯ ಮಾಡುವ ಶಕ್ತಿಗಳು ಇಂದು ಕಾಂಗ್ರೆಸ ಗದ್ದುಗೆಯ ಮೇಲಿರದೆ ಮಂತ್ರಿಪದದ ಮೇಲೆ ಆಸೀನವಾಗಿವೆಯಲ್ಲವೇ?

[illegible]

(ಸಾಂಗತ್ಯ)

೧

ಮೂಡಣ ದೆಸೆಯೊಳಗೆಸೆಯುವ ಚೆನ್ನಾದ
ಚಿನ್ನದ ಚೆಂಡನು ನೋಡಣ್ಣ !
ಮೂಡುವೆಣ್ಣಿನ ಹಣೆ ತಿಲಕವೊ ಬಾನಿನ
ಮಿಂಚು ದೀವಿಗೆಯಿದೊ ಹೇಳಣ್ಣ !

೨

ನಗುನಗುತಲಿ ನಭಕೇರುತ ನಗಿಸುವ
ಅಗಣಿತ ನಕ್ಷತ್ರಗಣವನ್ನು !
ನಗದಿಹ ರಜನಿಯ ಬಗೆಯ ತಾನರಳಿಸಿ
ಸೊಗದ ಸುಗ್ಗಿಯೊಳೊಯ್ವ ಜಗವನ್ನ !

೩

ನೋಡು! ನೋಡಿಳೆಗೆಲ್ಲ ಹಾಲ್ದೇನಸುರಿಸುವ
ಅಕ್ಷಯ ಬಿಂದಿಗೆಯಿಹುದಣ್ಣ !
ಮೂಡುತ ಸಾಗರದೆದೆಯನುಕ್ಕೇರಿಸಿ
ಕುಣಿಸುವ ಮಾಟದ ಚೆಲುವನ್ನ !

೪

ಕುಂಭಿನಿಯುಕ್ಕೆಲ್ಲ ತಂಭಾಲ ಚೆಲ್ಲಿದ
ತುಂಬುದಿಂಗಳ ಬಿಂಬ ಕಾಣಣ್ಣ !
ಅಂಬೆಗಾಲಿಕ್ಕುವ ಕಂದಯ್ಯಗಾದರು
ಸಂಭ್ರಮಗೊಳಿಸುವ ಬಿಳಿ ಬಣ್ಣ !

೫

ದಿನದ ಹೋರಾಟದೆ ತೊಳಲಿದ ಬಳಲಿದ
ಜೀವಕೋಟಿಯ ಕಣ್ಣು-ಮನವನ್ನ !
ತಣಿಸುತ್ತ ಕುಣಿಸುತ್ತ ಬೇರೊಂದು ಲೋಕಕೆ
ಸೆಳೆಯುವ ಒಲಿದಿತ್ತು ಸವಿಜೊನ್ನ !

೬

ವಿಶ್ವದೊಡೆಯ ಬಾನ ಬೈಲೊಳಾಡಲು ತಾನು
ಸೃಷ್ಟಿಸಿಕೊಂಡನೆ ಇವನನ್ನ !
ಲಾಸ್ಯಕೆ ತಾಳ ವಿಕ್ಕುತ ನಾವು ಸುಖಿಸೋಣ
ಚಂದಿರ ಅಸ್ತಮಿಸುವ ಮುನ್ನ!

— ರಾಜಾರಾಮ ಚಿತ್ರಿಗೆಮಠ

× × ×

ಓವೊ ನನ್ನ ದೇವರೇ !

(ರವೀಂದ್ರ ಗೀತ)

ನನ್ನ ನಾಡ ನೆಲದ ಮಣ್ಣು,
ನದಿಯ ನೀರು, ಫಲಿತ ಹಣ್ಣು,
ಬೀಸುವೆಲರು-ಮಧುರವಿರಲಿ
ಓವೊ ನನ್ನ ದೇವರೆ !
ನನ್ನ ನಾಡ ಗೃಹ-ಗೃಹಗಳು,
ನನ್ನ ನಾಡ ಪೇಟೆ ಬನಗಳು,
ಮೇಣ್ ನೆನಹು-ತುಂಬಿ ಬರಲಿ
ಓವೊ ನನ್ನ ದೇವರೆ !
ನನ್ನ ನಾಡು ಕೊಟ್ಟ ಅಭಯ,
ಇಟ್ಟ ಆಸ್ಥೆ ಗೈವ ಗೆಯ್ಮೆ,
ನುಡಿವ ಮಾತು-ಸತ್ಯವಿರಲಿ
ಓವೊ ನನ್ನ ದೇವರೆ !
ನನ್ನ ನಾಡ ಸಕಲ ಜನದ
ಪ್ರಾಣ—ಹೃದಯ ಒಂದೆ ಇರಲಿ
ಓವೊ ನನ್ನ ದೇವರೆ !

- ಮುದೇನೂರ ಸಂಗಣ್ಣ



ಮಕ್ಕಳ ಗಾಂಧೀಜಿ

ನಾನು ಗಾಂಧೀಜಿಯನ್ನು ಚಿತ್ರದಲ್ಲಿ ನೋಡಿದ್ದೇನೆ. ನನ್ನ ಅಣ್ಣ ಗಾಂಧೀಜಿಯವರು ಮಕ್ಕಳನ್ನು ಆಡಿಸುವ, ಅವರೊಡನೆ ನಗುವ ಚಿತ್ರಗಳನ್ನು ಆಗಾಗ ತೋರಿಸುವನು. ಆ ಚಿತ್ರದಲ್ಲಿರುವ ಮಕ್ಕಳಂತೆ ನನ್ನನ್ನು ಗಾಂಧೀಜಿಯವರು ಎತ್ತಿಕೊಳ್ಳಬಾರದೇಕೇ ? ಎಂದು ಮೊನ್ನೆ ಮೊನ್ನೆ ನನ್ನ ಅಣ್ಣನನ್ನು ಕೇಳಿದೆ. ಆದರೆ ಅವರು ದೇವರ ಹತ್ತರ ಹೋಗಿದ್ದಾರೆ. ಇನ್ನು ಎಂದೂ ಬರುವದಿಲ್ಲ ಎಂದನು. ಆಗ ನಾನು ಬಿಕ್ಕಿ ಬಿಕ್ಕಿ ಅತ್ತೆ. ಅದನ್ನು ಕಂಡು ನನ್ನ ಅಣ್ಣನೂ ಅತ್ತ. ಆದರೆ ಮುಂದೆ ಅವನು ಗಾಂಧೀಜಿಯವರು ಎಲ್ಲ ಕಡೆಗೂ ಇದ್ದಾರೆ ಅಂದ. ಅದು ಹೇಗೆ ? ಎಂದು ಪ್ರಶ್ನಿಸಿದೆ. ನಿನ್ನಲ್ಲಿ ಇದ್ದಾರೆ, ನನ್ನಲ್ಲಿದ್ದಾರೆ, ಎಲ್ಲರಲ್ಲೂ ಇದ್ದಾರೆ ಎಂದ. ಆಗ ಆನಂದಿಸಿದೆ ಕುಣಿದೆ ಗಾಂಧಿಕಿ ಜೈ, ಗಾಂಧಿಕಿ ಜೈ ಎಂದು ಹಾರಾಡಿದೆ.

ಅವರು ಯರವಡಾ ಅರಮನೆಯಲ್ಲಿದ್ದಾಗ ಮಕ್ಕಳಿಗಾಗಿ ಬರೆದ ಒಂದು ಪತ್ರ ನಮ್ಮ ಅಣ್ಣ ತೋರಿಸಿದ. ಅದನ್ನು ನಾನು ದಿನಾಲು ಓದುತ್ತೇನೆ. ನೀವೂ ಕೇಳಿ – 'ಮರಿಗಳೆ, – ಹಕ್ಕಿಮರಿಗಳು ರೆಕ್ಕೆಯಿಲ್ಲದೆ ಹಾರಲಾರವು. ರೆಕ್ಕೆಯಿದ್ದರೆ ಎಲ್ಲರೂ ಹಾರಬಹುದು. ಆದರೆ ನೀವು ರೆಕ್ಕೆಯಿಲ್ಲದೆಯೇ ಹಾರಾಡಲು ಕಲಿತರೆ, ನಿಮ್ಮ ಎಲ್ಲ ತೊಂದರೆ ಕೊನೆಗಂಡಂತೆ ಮತ್ತು ನಿಮಗೆ ನಾನು ಅದನ್ನು ಕಲಿಸುವೆ. ಇದು ನೋಡಿ ನನಗೆ ರೆಕ್ಕೆಗಳಿಲ್ಲ. ಆದರೂ ನಿಮ್ಮೆಡೆಗೆ ಮನಸ್ಸಿನಿಂದ ಪ್ರತಿನಿತ್ಯ ಹಾರುತ್ತ ಬರುವೆನಲ್ಲ ! ಇಲ್ಲಿ ನೋಡಿ, ವಿಮಲೆ ಇದ್ದಾಳೆ, ಹರಿ ಇದ್ದಾನೆ ಮತ್ತು ಧರ್ಮಕುಮಾರ ಇದ್ದಾನೆ. ನೀವಾದರೂ ಮನಸ್ಸಿನಿಂದ ನನ್ನೆಡೆಗೆ ಹಾರಾಡುತ್ತ ಬರಬಹುದು. ವಿಚಾರ ಮಾಡಲು ಕಲಿತವರಿಗೆ ಗುರುಗಳ ಆವಶ್ಯಕತೆ ಇಲ್ಲ. ಗುರುವು ದಾರಿ ತೋರಬಹುದು; ಆದರೆ ವಿಚಾರಶಕ್ತಿ ಕೊಡಲಾರ. ಅದು ನಮ್ಮಲ್ಲಿ ಹುದುಗಿದೆ. ಜಾಣರಾದವರಿಗೆ ಜಾಣ ವಿಚಾರಗಳು ಬರುವವು. ನಿಮ್ಮಲ್ಲಿ ಯಾರು ಪ್ರಭುಭಾಯಿಯ ಸಾಯಂಕಾಲ ಪ್ರಾರ್ಥನೆಯಲ್ಲಿ ಭಾಗವಹಿಸಿ ಸರಿಯಾಗಿ ಪ್ರಾರ್ಥನೆ ಮಾಡುವದಿಲ್ಲ, ನನಗೆ ಹೇಳಿರಿ. ನೀವೆಲ್ಲರೂ ಸಹಿ ಮಾಡಿದ ಒಂದು ಪತ್ರ ಹಾಕಿರಿ, ಯಾರಿಗೆ ಸಹಿ ಮಾಡಲು ಬರುವದಿಲ್ಲವೋ ಅವರು ಕತ್ತರಿಗುರುತು ಹಾಕಲಿ.- ಬಾಪೂನ ಆಶೀರ್ವಾದ, " ಇತ್ಯಾದಿ.

ಈ ಪತ್ರವನ್ನು ಓದಿ ನಾನೂ ಒಂದು ಹಕ್ಕಿಯಾಗಿದ್ದೇನೆ. ಹಕ್ಕಿಯಂತೆ ಗಾಂಧೀಜಿ ಕಡೆಗೆ ಹಾರುತ್ತೇನೆ. ಅವರೂ ನನ್ನ ಹತ್ತರ ಬರುವರು. ನಮ್ಮ ಶಕು, ಸಾವಿತ್ರಿ, ಸಖಾರಾಮರೂ ಹಕ್ಕಿಗಳಾಗಿದ್ದಾರೆ. ಹೀಗಾಗಿ ನಮ್ಮಲ್ಲಿಯೇ ಗಾಂಧೀಜಿ ಇದ್ದಾರೆ. ಅವರ ಚಿತ್ರದ ಎದುರಿಗೆ ಅವರೇ ಹೇಳಿಕೊಟ್ಟ "ರಘುಪತಿ ರಾಘವ ರಾಜಾರಾಮ" ದಿನಾಲು ಹೇಳುತ್ತೇನೆ. ಹಾಗೆಯೇ ನಮ್ಮ ಓಣಿಯ ಹುಡುಗರಿಗೂ ಅನ್ನಲು ಹೇಳುತ್ತೇನೆ. ನಾವೆಲ್ಲರೂ ಗಾಂಧೀಜಯವರ ಪ್ರೀತಿಯ ಪುಟ್ಟ ಹಕ್ಕಿಗಳಾಗಿ ಹಾರಾಡುವಂತೆ ಆಗಲಿ ಎಂದು ದೇವರಲ್ಲಿ ಬೇಡಿಕೊಳ್ಳುತ್ತೇನೆ. ನೀವೂ ಬೇಡಿಕೊಳ್ಳಿ.

——ಸುವಿ:ತ್ರಾ ಥಿಟೆ.

ಅಕ್ಟೋಬರ ತಾ ೧೯ ರಂದು ಮೈಸೂರು ಪ್ರಜಾ ಪ್ರತಿನಿಧಿ ಸಭೆಯು ಹಗಲು ೧೨ಕ್ಕೆ ಭಾಷ್ಯಂರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯ್ತು. ಇಂದಿನ ಸಭೆಗೆ ಮಂತ್ರಿಗಳೂ ಕೂಡ ೫ ನಿಮಿಷ ತಡ ಮಾಡಿಯೇ ಬಂದರು. ಸಭೆಗೆ ಸಾಕಷ್ಟು ಸದಸ್ಯರು ಬಂದಿರಲಿಲ್ಲವಾಗಿ ಸಭೆಯನ್ನು ಮುಂದರಿಸಬೇಕೆಂದು ಒಬ್ಬರು ವಿಧಿಬಿಂದು ವೆತ್ತಿದರು.

ಅಷ್ಟರಲ್ಲಿ ಸಭೆ ಜರಗಲು ಬೇಕಾದಷ್ಟು ಜನ ಬಂದು ಸಭೆಯ ಕೆಲಸ ನಡೆದಿತು. ಇಂದು ಕೆಲವು ಅರಿಕೆಗಳ ಚರ್ಚೆಯಾಯಿತು. ಕೋತಿಗಳ ಕಾಟವನ್ನು ಕುರಿತು ವಿನೋದಯುಕ್ತ ಚರ್ಚೆ ನಡೆದಿತು.

ಅಕ್ಟೋಬರ ತಾ. ೨೦ ರಂದು ಆಹಾರ ಪರಿಸ್ಥಿತಿಯು ಹದಗೆಟ್ಟಿರುವದರಿಂದ ಹಳ್ಳಿಗರಿಗೂ ಆಹಾರ ಧಾನ್ಯವನ್ನು ಒದಗಿಸಿ ಕೊಡಬೇಕು. ಸೀದಾ ಪದ್ಧತಿಯು ಜಾರಿ ಇರುವಲ್ಲಿ ಒಳ್ಳೇ ಧಾನ್ಯ ಪೂರೈಸಬೇಕು ಎಂಬಿವೇ ಮೊದಲಾದವುಗಳ ಬಗ್ಗೆ ಪ್ರಶ್ನೋತ್ತರಗಳಾಗಿ ಆ ಮೇಲೆ ಕೆಲವು ಅರಿಕೆಗಳ ಚರ್ಚೆ ನಡೆದಿತು. ಆಹಾರ ಧಾನ್ಯಗಳ ಚರ್ಚೆ ನಡೆದಾಗ ಶ್ರೀಮತಿ ಸುನಂದಮ್ಮನವರು ಸೀದಾದಲ್ಲಿ ಕೊಡಲಾದ ಧಾನ್ಯಗಳಲ್ಲಿ ಕಸರು ಬಹಳ ಹೊರಡುವದೆಂದು ದಕ್ಕೆ ಆಹಾರ ಶಾಖೆಯ ಅಧಿಕಾರಿಗಳಾದ ಶ್ರೀ ಗುರು ದತ್ತರು ಅದನ್ನು ಒಪ್ಪುವದಿಲ್ಲವೆಂದರು.

ಶ್ರೀ ಸುನಂದಮ್ಮ — ನಾನು ಹೆಂಗಸು, ದಿನಾಲೂ ಕಾಳು ಸ್ವಚ್ಛ ಮಾಡುತ್ತೇನೆ. ಇಂತಿಷ್ಟು ಕಸರು ಹೊರಡುವದೆಂದು ಹೇಳಿದರೆ ಒಪ್ಪುವಿರಾ ?

ಶ್ರೀಗುರು ದತ್ತ — ಖಂಡಿತ ಒಪ್ಪಲಾರೆ.

ಶ್ರೀ ಸುನಂದಮ್ಮ — ಸತ್ಯ ಸಂಗತಿ ಒಪ್ಪದಿದ್ದರೆ ಏನು ಮಾಡಬೇಕು ?

ಶ್ರೀ ಗುರು ದತ್ತ — ಅದಕ್ಕೆ ಕಸರೆಂದು ಹೇಳುವವರ ಮತ್ತು ಅದಿಲ್ಲವೆನ್ನುವವರ ಸಂಯುಕ್ತ ಸಭೆಯಾಗಬೇಕು. (ನಗು)

ಪ್ರಶ್ನೋತ್ತರಗಳ ನಂತರ ಶ್ರೀ ಭೋಪಾಳಂ ಚಂದ್ರಶೇಖರಯ್ಯನವರು ಸಭೆಯ ಹಕ್ಕು ಬಾಧ್ಯತೆಗಳಿಗೆ ಲೋಪ ಬಂದ ಬಗ್ಗೆ ಒಂದು ನಿಲುವಳಿ ಸೂಚನೆ ತಂದರು. ಅದನ್ನು ಅಧ್ಯಕ್ಷರು ತಳ್ಳಿ ಹಾಕಿದರು.

ಅಕ್ಟೋಬರ ತಾ. ೨೧ ರಂದು ಮಲೆನಾಡಿನ ಅಭಿವೃದ್ಧಿ ಯೋಜನೆ, ಮೋಟಾರು ಲಾಯಸೆನ್ಸ ಪದ್ಧತಿ ಗೊತ್ತುಪಡಿಸುವದು, ಮನೆ ಕೈಗಾರಿಕೆಯಲ್ಲಿ ಮಹಿಳೆಯರನ್ನೇ ಅಧಿಕಾರಿಗಳನ್ನಾಗಿ ನೇಮಿಸುವದು ಇವೇ ಮೊದಲಾದ ಅರಿಕೆಗಳ ಚರ್ಚೆ ನಡೆದಿತು.

ಮಲೆ ನಾಡಿನ ಅಭಿವೃದ್ಧಿಯ ಯೋಜನೆಯ ಬಗ್ಗೆ ಉತ್ತರ ಕೊಡುತ್ತ ವ್ಯವಸಾಯ ಮಂತ್ರಿ ಶ್ರೀ ಎಚ್. ಸಿದ್ಧಯ್ಯನವರು ಹೀಗೆ ಹೇಳಿದರು — ಮಲೆನಾಡಿನಲ್ಲಿ ಡಿ. ಡಿ. ಟಿ. ಪ್ರಯೋಗದ ೧೨೦ ಕೇಂದ್ರ ತೆರೆಯಲಾಗಿದೆ. ಜೋಗ ವಿದ್ಯುತ್ ಕೇಂದ್ರ, ಭದ್ರಾವತಿಯಲ್ಲಿ ಸಿಮೆಂಟ, ಕಾಗದ, ಕಬ್ಬಿಣ ಕಾರಖಾನೆ ತೆರೆದಿದೆ. ೯ ಕೋಟಿ ರೂ. ವೆಚ್ಚದ ಲಕ್ಕವಳ್ಳಿ ಕೆರೆಯ ಯೋಜನೆ ಮಾಡಿದೆ. ಅಡಿಕೆ ರೋಗದ ಸಂಶೋಧನೆಯ ಕೇಂದ್ರ, ಒಳ್ಳೆ ಭತ್ತದ ಬೀಜದ ಪೂರೈಕೆ, ಮಾರ್ಗ ಸೌಕರ್ಯ ಬೆಳೆಸುವ ವಿಚಾರ ಸರಕಾರಕ್ಕಿದೆ. ಮಲೆನಾಡ ಅಭಿವೃದ್ಧಿ ಸಮಿತಿಯ ಸೂಚನೆಯಂತೆ ೨ ಕೋಟಿ ರೂ. ಯೋಜನೆ ಕಾರ್ಯರೂಪಕ್ಕಿಳಿಸುವ ವಿಚಾರವನ್ನು ಸರಕಾರ ನಡೆಸಿದೆ.

ಹಿರಿಯೂರು ತಾಲೂಕಿನಲ್ಲಿ ಸಕ್ಕರೆ ಕಾರಖಾನೆ ಸ್ಥಾಪಿಸಬೇಕೆಂದು ಮಾಡಿಕೊಂಡ ಒಂದು ಅರಿಕೆಗೆ ಹಿಂದುಸ್ತಾನ ಸರಕಾರದವರು ಇದಕ್ಕೆ ಬೇಕಾಗುವ ಯಂತ್ರ ಸಾಮಗ್ರಿ ತರಿಸಲು ಅನುಮತಿ ಕೊಡುವದಿಲ್ಲವಾಗಿ ಈಗ ಇದು ಸಾಧ್ಯವಿಲ್ಲವೆಂದು ಶ್ರೀ ಎಚ್ ಸಿದ್ಧಯ್ಯನವರು ಉತ್ತರಿಸಿದರು.

ಕಬ್ಬಿಣ ಸಿಮೆಂಟು ರೈತರಿಗೆ ಪ್ರಾಮಾಣಿಕ ರೀತಿಯಿಂದ ಸುಲಭವಾಗಿ ಸಿಕ್ಕುವದಿಲ್ಲವೆಂದು ಒಬ್ಬರು ದೂರಿದರು. ಸರಕಾರವು ಇದನ್ನು ಸಹಾನುಭೂತಿ ಪೂರ್ವಕ ಪರ್ಯಾಲೋಚಿಸುವವೆಂದು ಆಶ್ವಾಸನ ಕೊಡಲಾಯಿತು.

ಅಕ್ಟೋಬರ ತಾ. ೨೨ ರಂದು ಮುನ್ನ ದಿನ ಭೂಪಾಳಂರಿಗೆ ಹೊರಗೆ ಹೋಗಲು ಹೇಳಿದ್ದರ ಬಗ್ಗೆ ಸವಸ್ಯರ ಹೇಳಿಕೆ ಕೇಳಿಕೊಳ್ಳಬೇಕೆಂದು ಕೆಲ ಸದಸ್ಯರು ಅಂಕಿತ ಹಾಕಿ ಅಧ್ಯಕ್ಷರಿಗೆ ನುನವಿ ಮಾಡಿಕೊಂಡಿದ್ದರು. ಅಧ್ಯಕ್ಷರು ಅವರಲ್ಲಿ ಒಬ್ಬರಿಗೆ ಮಾತ್ರ ಮಾತನಾಡಲು ಅವಕಾಶ ಕೊಟ್ಟರು. ಅವರಿಗೆ ಉತ್ತರ ಕೊಡುತ್ತ ಅಧ್ಯಕ್ಷರು, ನಿಯಮ ೩೦ ರ ಪ್ರಕಾರ ಸಭೆಯು ಲಕ್ಷ್ಯಕ್ಕೆ ತಂದು ೩೧ ನೇ ಕಲಮಿನ ಪ್ರಕಾರ ಕ್ರಮ ಕೈಕೊಂಡು ಶ್ರೀ ಭೂಪಾಳಂರವರ ನಿಲುವಳಿ ಸೂಚನೆಗೆ ಅವಕಾಶ ಕೊಡದಿರಬೇಕಾಯ್ತು ಎಂದು ಮೊದಲಾಗಿ ಹೇಳಿದರು.

ಅಕ್ಟೋಬರ ತಾ. ೨೩ ರಂದು ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಸ್ವಾರಸ್ಯದ ಪ್ರಶ್ನೋತ್ತರಗಳು ನಡೆದವು. ಕಾಂಗ್ರೆಸ ಸದಸ್ಯರು ಹೊತ್ತಿಗೆ ಸಭೆಗೆ ಬಾರದ್ದರಿಂದ ೧೫ ನಿಮಿಷ ಸಭೆಯ ಚಟುವಟಿಕೆ ಸ್ಥಗಿತವಾಗಿತ್ತು.

ಪತ್ರಿಕೆಗಳಲ್ಲಿ ಬಂದ ವರದಿಗಳಿಗೆ ಸರಕಾರವು ಉತ್ತರ ಕೊಟ್ಟಿದೆಯೇ ಎಂದು ಒಬ್ಬರು ಕೇಳಿದರು. ಅದಕ್ಕೆ ಗೃಹ ಮಂತ್ರಿ ಶ್ರೀ ಮರಿಯಪ್ಪನವರು ಅವೆಲ್ಲ ಅಪಪ್ರಚಾರಾತ್ಮಕವಾದ್ದರಿಂದ ಸರಕಾರವು ಉತ್ತರ ಕೊಟ್ಟಿಲ್ಲವೆಂದರು. ಅವೆಲ್ಲ ಸುಳ್ಳೆಂದು ಸಿದ್ಧ ಮಾಡಿ ಕೊಡುವಿರಾ ಎಂದುದಕ್ಕೆ ಅಧ್ಯಕ್ಷರು ಇಂತಹ ಪ್ರಶ್ನೆಗೆ ಅವಕಾಶ ಕೊಡುವದಿಲ್ಲವೆಂದು ಹೇಳಿದರು. ಪತ್ರಿಕಾ ಸಲಹೆ ಸಮಿತಿ ಇಲ್ಲವೇ ಎಂದು ಒಬ್ಬರು ಕೇಳಲು ಅದು ಇಲ್ಲವೆಂದೂ ಅದು ನಿಂತು ೧ ವರ್ಷವಾಯಿತೆಂದೂ ಮಂತ್ರಿ ಮರಿಯಪ್ಪನವರು ನುಡಿದರು. ಪತ್ರಿಕೋದ್ಯಮವನ್ನು ರಾಷ್ಟ್ರೀಕರಣ ಮಾಡಲಾಗುವದೇ ಎಂದು ಒಬ್ಬರು ಕೇಳಿದರು ಈ ಪ್ರಶ್ನೆಯೇ ಈಗ ಉದ್ಭವಿಸಿಲ್ಲವೆಂದು ಅಧ್ಯಕ್ಷರು ಹೇಳಿದರು. ಒಬ್ಬರಂತೂ, ಪ್ರತಿಯೊಂದು ಪತ್ರಿಕೆಯ ಮೇಲೆ ಒಬ್ಬೊಬ್ಬ ಮಂತ್ರಿಗಳ ದ್ವೇಷವಿದೆಯೇ ಎಂದು ಕೇಳಿದರು. ಅಧ್ಯಕ್ಷರು, ಇದು ಕುತ್ಸಿತ ಪ್ರಶ್ನೆ. ಇಂತಹ ಪ್ರಶ್ನೆಗೆ ಅವಕಾಶ ಕೊಡುವದಿಲ್ಲನೆಂದು ತಡೆದರು.

ಈ ದಿನ ಆಹಾರ ಹತೋಟಿಯ ಬಗ್ಗೆ ಸಂಜೆ ೭॥ ಗಂಟೆಯ ವರೆಗೂ ಚರ್ಚೆಯಾಯ್ತು. ಆದರೆ ಯಾವ ನಿರ್ಣಯವೂ ಆಗಲಿಲ್ಲ.

ತಾ. ೨೬ ರಂದು ಶ್ರೀ ಗೋಮಟೇಶ್ವರನ ಮುಖದಲ್ಲಿ ಬಿರುಕು ಕಾಣುತ್ತದೆ. ಅದನ್ನು ಕೂಡಲೆ ಸರಿಪಡಿಸಬೇಕೆಂದ ಸೂಚನೆಯನ್ನು ಅನೇಕರು ಸಮರ್ಥಿಸಿದರು. ಸರಕಾರದ ಪರವಾಗಿ ಸಚಿವ ಶ್ರೀ ಪಾಮಿಡಿ ಸುಬ್ಬರಾಯ ಶೆಟ್ಟರು ಉತ್ತರ ಕೊಡುತ್ತ, ಈ ಬಗ್ಗೆ ಪರ್ಯಾಲೋಚನೆ ನಡೆದಿದ್ದು ಲಂಡನದಿಂದ ಆ ಬಿರುಕು ಮುಚ್ಚಲು ವಿಶೇಷ ಔಷಧಿ ತರಿಸಲಾಗುತ್ತಿದೆ ಎಂದು ಹೇಳಿದರು. ಹೀಗೆ ಭರವಸೆ ಕೊಟ್ಟ ಮೇಲೆ ಈ ಬಗ್ಗೆ ತಂದ ನಿರ್ಣಯವನ್ನು ತಿರುಗಿ ತೆಗೆದುಕೊಳ್ಳಲಾಯ್ತು.

ಇಂದಿನ ಸರಕಾರದ ವಿಶೇಷಾಜ್ಞೆಗಳನ್ನೆತ್ತಿ ಶ್ರೀ ಭೂಪಾಳಂ ಅವುಗಳನ್ನು ಉಗ್ರವಾಗಿ ಖಂಡಿಸಿದರು. ಈ ಬಗ್ಗೆ ಉತ್ತರ ಕೊಡುತ್ತ ಮಾನ್ಯ ಮರಿಯಪ್ಪನವರು, ವ್ಯಕ್ತಿ ಸ್ವಾತಂತ್ರ್ಯಕ್ಕಾಗಲೀ ಪತ್ರಿಕಾ ಸ್ವಾತಂತ್ರ್ಯಕ್ಕಾಗಲೀ ಸರಕಾರವು ಅಡ್ಡಿ ತಂದಿಲ್ಲ. ಉದ್ವೇಗ ಕಂಪಕವಾಗಿದ್ದಾಗ ಮಾತ್ರ ಸರಕಾರವು ಕ್ರಮ ತೆಗೆದುಕೊಂಡಿದೆ ಎಂದು ಹೇಳಲು ಈ ಬಗ್ಗೆ ತಂದ ಅವಸರದ ಗೊತ್ತುವಳಿಯು ಬಹುಮತದಿಂದ ತಿರಸ್ಕೃತವಾಯ್ತು.

ಮ. ಗಾಂಧೀಜಿ ಸ್ಮಾರಕ ನಿಧಿಗೆ ನಾನಾ ರೀತಿಯಿಂದ ಸಂಸ್ಥೆಗಳು ಉದಾರ ಸಹಾಯ ಮಾಡಲು ಅವಕಾಶ ಕಲ್ಪಿಸುವ ಮಸೂದೆಯೂ ವಿದೇಶಿ ನಾಣ್ಯಗಳನ್ನು ವಿನಿಮಯ ಮಾಡಿಕೊಳ್ಳುವ ಮಸೂದೆಯೂ ಅಂಗೀಕೃತವಾದವು.



ಕವಿರಾಜ ಜೋಶಿ ಅಭಿನಯದ ಮೂಲಕ ಲಾವಣಿ ಹಾಡುತ್ತ "ತಮಾಷೆಗೆ" ನಡೆಸುತ್ತಿರುವ ದೃಶ್ಯ.

ರೂಪರಂಗ

(ಗಂಡಿನ ಪುಟದಿಂದ)

[illegible] ಎಂದು ಕೆಲಸಕ್ಕೆ ಸೇರಿಕೊಂಡಿದ್ದಳು. ಅಲ್ಲಿಗೆ ಹೋಗಿ ಅಲ್ಲಿ ನಾಟಕದ ಸಹ ಬೆಂಕಿ ಹತ್ತಿದಾಗ ಅದರಿಂದ ಅವನು ಲೀಲೆಯನ್ನು ಪಾರುಮಾಡಿ ಗಾಯಗೊಂಡು ಮಲಗಿದ; ಲೀಲೆ ತಾನು ಅವನಿಗೆ ಕಾಣಿಸಿಕೊಳ್ಳಬಾರದೆಂದು ಎಚ್ಚರಾಗುವುದರೊಳಗೆ ಅವನಿಗೆ ನಮಸ್ಕರಿಸಿ ಕಾಣದಾದಳು. ಎಚ್ಚತ್ತ ನರೇಶನೂ ಕಾಣದಾದ. ಅವಳ ಹತ್ತಿರ ಹೋಗುತ್ತಿದ್ದಾಗ ಬಿದ್ದ. ಯತ್ನವಿಲ್ಲದೆ ಅವಳು ಕಾಣಿಸಿಕೊಂಡು ಇವನನ್ನು ಉಪಚರಿಸಿದಳು. ಪಶ್ಚಾತ್ತಾಪಕ್ಕೆ ಗುರಿಯಾದ ಇಂದಿರೆ ಹುಡುಕುತ್ತ ಅಲ್ಲಿಗೆ ಬಂದು ಇವರಿಬ್ಬರಿಗೆ ಕೈಕೈ ಹಿಡಿಸಿ ತಾನು ದೂರವಾದಳು.

ಇಂದಿರೆಯ ಮೊದಲಿನ ಸ್ವಾರ್ಥ, ನರೇಶನ ಧೈರ್ಯಗೇಡಿತನ, ಅವನ ತಾಯಿಯ ಸ್ವಾರ್ಥ, ಲೀಲೆಯ ಮೊದಲಿನ ಮಾನಸ್ಸೇತರ ಪ್ರೇಮ ತ್ಯಾಗ, ಇವುಗಳಿಂದಾದ ದುಃಖ ಪರಂಪರೆಯನ್ನು ಇಂದಿರೆಯ ಅಂತ್ಯದ ತ್ಯಾಗ ನಿವಾರಿಸಿದ್ದೇ ಕಥಾಸಾರ. ಈ ಜಮೀನುದಾರರ ಜೀವನವನ್ನು, ಶ್ರೀಮಂತರ ಪ್ರಣಯ ವಿಹಾರವನ್ನು, ಹೊತ್ತಿಲ್ಲದ ಹೊತ್ತಿನಲ್ಲೆಲ್ಲ ಹುಡುಗಿಯರು ಕುಣಿವುದನ್ನು ಈಗಿನ ಚಿತ್ರಗಳಲ್ಲಿ ಕಂಡರೆ ತಲೆ ಬೇಸರ ಬರುತ್ತದೆ. ಒಟ್ಟಿನ ಮೇಲೆ ಬುದ್ಧಿವಂತರಿಗೆ ಒಳ್ಳೆಯದನ್ನು ಕಂಡರೂ ಅದರಿಂದ ತಿಳಿಯಬೇಕಾದ್ದನ್ನು ತಿಳಿವಂತೆ ಅಸಂಬದ್ಧವನ್ನು ಕಂಡರೂ ತಿಳಿಯಬೇಕಾದ್ದನ್ನು ತಿಳಿಯಲಾಗುತ್ತದೆ. ಪಾಮರರಿಗೆ ಹಾಡು, ನೃತ್ಯ, ವಿಲಾಸಗಳನ್ನು ಕಂಡರೆ ಸೈ; ಅಂತೂ ಆ ದೃಷ್ಟಿಯಿಂದ ಚಿತ್ರ ಚೆನ್ನಾಗಿದೆ ಎಂದೇ ಹೇಳಬೇಕು.

(ಕರ್ಮವೀರದ ಪ್ರತಿನಿಧಿಯಿಂದ)

× × ×

ರಾಮಜೋಶಿ

ಇದು "ರಾಜಕಮಲ"ದ ನಿರ್ಮಿತಿ ಮಹಾರಾಷ್ಟ್ರದ ಕವಿಶ್ರೇಷ್ಠ ರಾಮಜೋಶಿಯ ಜೀವನೇತಿಹಾಸ. ಅವನು ಬ್ರಾಹ್ಮಣನಿದ್ದು ಶೂದ್ರ ಸಹವಾಸಕ್ಕೆಬಿದ್ದು "ತಮಾಷೆ" ಎಂಬ ಮರಾಠೀ ಗ್ರಾಮ ನಾಟಕದಲ್ಲಿ ಭಾಗವಹಿಸತೊಡಗಿದ. ಅದರಲ್ಲಿ ಯಶಸ್ಸನ್ನು ಪಡೆದ ಆದರೆ ತನ್ನ ಅಣ್ಣ, ಮಠಾಧಿಕಾರಿ ಮತ್ತು ಇತರ ಬಂಧುಬಾಂಧವರಿಂದ ಪರಿತ್ಯಕ್ತನಾಗಿ ಬ್ರಾಹ್ಮಣರು ಅಂದು ಇತರರನ್ನು ಬಹಿಷ್ಕೃತರಂತೆನಡೆಸಿಕೊಂಡು ಅವರಿಗೆಜ್ಞಾನದಾನಮಾಡಿ ಉದ್ಧರಿಸದಿದ್ದು, ದಂಭಾಚಾರಕ್ಕೆ ಬಿದ್ದುದನ್ನು [illegible] ಆಗ ಆವನ ಬ್ರಾಹ್ಮಣ ಮಿತ್ರನೊಬ್ಬನು ಸಾವಕಾರನಿಂದ ಸಾಲಕೊಡಿಸಿ [illegible]. ಆದರೂ ಸುರಾಪಾನ ಬಿಡದೆ ನಾಟಕಗಳನ್ನು ಮಾಡದೆ ಕವಿ ತನ್ನ ತಂಡದ ಸದಸ್ಯರನ್ನು ಉಪವಾಸ ಕೆಡಹಿದ್ದರಿಂದ ಅವರು ಬಿಟ್ಟು ಹೋದರು. ಆಗ ಸಾವಕಾರನ ಸಾಲ ತೀರಿಸಲು ತುರಾಯಿವಾರರಲು ಮನಸ್ಸುಮಾಡಿ ಒಲಿದ ಮನದನ್ನೆಯು ಮತ್ತು ಮಿತ್ರನ ಒತ್ತಾಯದಿಂದ ಮೂರನೆ ಸಾವಕಾರನ ಮನೆಗೆ ಬಂದಿದ್ದ ಮಹಾಕವಿ ಮೋರೋಪಂತರಿಂದ ಪಾರಮಾರ್ಥಿಕ ಗೀತ ಹಾಡಿ ಮೆಚ್ಚುಗೆ ಪಡೆದ. ಇದೇ ನಿನ್ನ ದಾರಿ ಎಂದು ಪಂತರಿಂದ ಉಪದೇಶ ಪಡೆದು ಅವನು ಸನ್ಯಾಸ್ಯನಾಗಿ ಅನೇಕ ಉತ್ತಮ ಕವಿತೆಗಳನ್ನು ಬರೆದು ಅಮರನಾದನು.

[illegible]

ಇದು ಕಥಾಸಾರ. ದೃಶ್ಯಗಳಲ್ಲಿ ಜೀವಂತ ತಮಾಷೆಯು ಗ್ರಾಮೀಣ ರಸಿಕತೆಯ ಸರಿಸ್ವರೂಪವನ್ನು ವರ್ಣರಂಜನೆಯಲ್ಲಿ ಕಾಣಬಹುದಾಗಿದೆ. ಸ್ವತಃ ರಾಮಜೋಶಿಯ ಕವಿತೆಗಳನ್ನೇ ಹಾಕಿರುವುದು ಮತ್ತಷ್ಟು ರಸಪ್ರದವಾಗಿದೆ. ನಾಯಕ ನಾಯಿಕೆಯರ ಮತ್ತು ಇತರ ಪಾತ್ರಗಳ ಹಂಚುವಿಕೆಯಲ್ಲಿ ತೋರುವ ಔಚಿತ್ಯ ಶ್ರೀ ಶಾಂತಾರಾಮರ ಪ್ರತಿಭೆಯನ್ನು ಬೊಟ್ಟು ಮಾಡಿ ತೋರಿಸುತ್ತದೆ.

ಈ ಐತಿಹಾಸಿಕ ಕಥಾನಕದಲ್ಲಿ To feel but not to feel excess ಆಸಕ್ತಿ ಇರಬೇಕು, ಆದರದು ಅತಿಯಾಗಬಾರದು.— ಎಂಬ ಪ್ರಾಪಂಚಿಕ ನೀತಿ ಅಡಕವಾಗಿದೆ. ಪ್ರಾಪಂಚಿಕ ಸುಖದಿಂದಲುನ್ಮತ್ತರಾದರೆ ಅಧಃಪಾತ ಹಿಡಿವದೆಂಬುದನ್ನು, ದೇವರ ಹೆಸರಲ್ಲಿ ಮಾಡಿದ್ದೆಲ್ಲ ಭಕ್ತಿ ಪ್ರದರ್ಶನವಾಗಲಾರದೆಂಬುದನ್ನು ಜ್ಞಾನಿಗಳೆಂದು ದಂಭದ ಜಂಭದಿಂದ ಅಜ್ಞರನ್ನು ತಿರಸ್ಕರಿಸುವುದು ಅನುಚಿತವೆಂಬುದನ್ನು ಮತ್ತು ಪ್ರಾಪಂಚಿಕತೆಗೆ ಪಾರಮಾರ್ಥಿಕ ನಿಯಂತ್ರಣವಿದ್ದರೆ ಮಾತ್ರ ಅದು ಆರೋಗ್ಯಕರವಾದೀತೆಂಬುದನ್ನು ಈ ಕಥೆ ಕಲಿಸುತ್ತದೆ. ಅಪಾರ ಪ್ರೇಮ ಹೃದಯವನ್ನು ಹಿಡಿದಂತೆ ದುರಂತ ದುರಭ್ಯಾಸವೂ ಹಿಡಿಯುವದೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಹೀಗೆ ನಾನಾ ವಿಧದಿಂದ ಸಾಮಾಜಿಕರಿಗೆ ಸದಸದ್ವಿವೇಕವನ್ನು ಕೊಡಬಲ್ಲ ಇಂಥ ಐತಿಹಾಸಿಕ ಚಿತ್ರಗಳು ಎಷ್ಟಿದ್ದರೂ ಬೇಕು. ಅಭಿನಯದಲ್ಲಿ ಆಯಾ ನಟನಟಿಯರು ರಸಭಾವ ಪ್ರದರ್ಶನವನ್ನು ಬಹಳ ಚನ್ನಾಗಿ ಮಾಡಿದ್ದು ಹೃದಯಕ್ಕೆ ಮುಟ್ಟುವದು.

ಛಾಯಾಗ್ರಹಣದಲ್ಲಿ ಕೂಡ ನ್ಯೂನತೆಗಳು ದುರ್ಲಭ. ದಿಗ್ದರ್ಶಕರಾದ ಬಾಬುರಾವ್ ಪೆಂಟರ್ ಮತ್ತು ವಿ. ಶಾಂತಾರಾಮರ ಯಶಸ್ಸು ಇದರಿಂದ ಮತ್ತಷ್ಟು ಹೆಚ್ಚದಿರದು. ಹುಬ್ಬಳ್ಳಿಯ ಡೆಕ್ಕನ್ ಸಿನೇಮಾದಲ್ಲಿ ಚಿತ್ರ ವೀಗ ಪ್ರದರ್ಶಿಸಲ್ಪಡುತ್ತಿದೆ.

(ಕರ್ಮವೀರದ ಪ್ರತಿನಿಧಿಯಿಂದ)

ಹಿಂದುಸ್ತಾನ

ಮುಂಬಯಿ

ಭಾರತದ ಉಪಮುಖ್ಯ ಪ್ರಧಾನರಾದ ಸರದಾರ ವಲ್ಲಭಭಾಯಿಯವರು ಮುಂಬಯಿ ಚೌಪಾಟಿಯಲ್ಲಿ ತಮ್ಮ ೭೪ನೇ ಜನ್ಮದಿನದ ನಿಮಿತ್ತ ನೆರೆದ ೫ ಲಕ್ಷ ಜನಸ್ತೋಮದ ಸಭೆಯಲ್ಲಿ ಭಾಷಣ ಮಾಡುತ್ತ ಶ್ರೀ. ಕಾಂಗ್ರೆಸದವರಿದ್ದು ಜನರಿಗೆ ಹಿಂದುಸ್ತಾನದ ಕಾರಭಾರದಲ್ಲಿ ಇನ್ನು ಕೈಹಾಕಬಾರದೆಂದು ಎಚ್ಚರಿಸಿ ಚರ್ಚಿಲರ ಇಂದಿನ ಅಧಃಪತನಕ್ಕಾಗಿ ಮರುಕ ವ್ಯಕ್ತಪಡಿಸಿದರು. ಅತಿಪ್ರಸರಣದ ರಾಕ್ಷಸನ ಸಂಹಾರ ಕಾರ್ಯದಲ್ಲಿ ಮುಂಬಯಿ ಪಾಲಿಗೊಂಡರೆಂದು ಹಾರೈಸಿದರು. ಶಾಂತಿ ಸುವ್ಯವಸ್ಥೆ ಸ್ಥಾಪನೆಗಾಗಿ ಸಕಲರೂ ಹೆಣಗಬೇಕೆಂದು ಬೇಡಿಕೊಂಡರು.

ಜವಳಿ ವ್ಯಾಪಾರಿಗಳು ಇದ್ದ ಸರಕನ್ನು ಡಿಸೆಂಬರ ೧ ರವರೆಗೆ ಮಾರಿಕೊಳ್ಳಬಹುದೆಂದು ಹಿಂದುಸ್ತಾನ ಸರಕಾರದ ಪ್ರಕಟನೆ ಹೊರಟಿದೆ. ಅನಂತರ ಉಳಿದ ಮಾಲಿನ ವರದಿಯನ್ನು ಜಿಲ್ಹಾ ಮ್ಯಾಜಿಸ್ಟ್ರೇಟರಿಗೆ ತಿಳಿಸಬೇಕು. ಈ ಅವಧಿಯನ್ನು ಇನ್ನು ಹೆಚ್ಚಿಸುವದಿಲ್ಲೆಂದು ಹೇಳಲಾಗಿದೆ.

ಪೂಪೇರಾನದಲ್ಲಿ ಶಾಂತಿಕ್ಕೆ ಪಾಂಡೆ ಸ್ಮಾರಕ ಶಾಲೆಯ ಉದ್ಘಾಟನಾ ಸಮಾರಂಭದ ಬಗ್ಗೆ ನೆರೆದ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಶ್ರೀ. ಕೆ. ಎಂ. ಮುನಸಿಯವರು, ಹೈದರಾಬಾದದ ತೊಡಕು ಬಿಡಿಸಿದ ಶ್ರೇಯಸ್ಸು ಸರದಾರ ವಲ್ಲಭಭಾಯಿ ಪಟೇಲರಿಗೆ ಸಲ್ಲತಕ್ಕದ್ದೆಂದು ಹೇಳಿದರು.

ಹಿಂದುಸ್ತಾನ ಸರಕಾರದ ಉಪಮುಖ್ಯ ಮಂತ್ರಿ ಸರದಾರ ವಲ್ಲಭಭಾಯಿ ಪಟೇಲರಿಗೆ ಪತ್ರಿಕಾಕರ್ತರು ಕೊಟ್ಟ ಸತ್ಕಾರ ಸಮಾರಂಭದಲ್ಲಿ ಮಾತನಾಡುತ್ತ ಸರದಾರರು, ಪತ್ರಿಕೆಗಳು ಸರಕಾರದ ಕಣ್ಣುಗಳಿದ್ದಂತೆಯೆಂದೂ ಎಲ್ಲ ಪತ್ರಿಕಾಕರ್ತರೂ ಸರಕಾರದೊಡನೆ ಸಹಕರಿಸಿ ನಾಡಿನ ಏಳಿಗೆಗೆ ಕಾರಣರಾಗಬೇಕೆಂದೂ ಹೇಳಿದರು.

ಮುಂಬಯಿ ಮುಖ್ಯ ಮಂತ್ರಿಗಳಾದ ಶ್ರೀ. ಬಿ. ಜಿ. ಖೇರರು ನಾಸಿಕದಲ್ಲಿ ೨೨ನೇ ಮಹಾರಾಷ್ಟ್ರ ಮಹಿಳಾ ಪರಿಷತ್ತಿನ ಉದ್ಘಾಟನ ಮಾಡುತ್ತ ಮಾಧ್ಯಮಿಕ ಶಾಲೆಯಲ್ಲಿ ಫೀ ಹೆಚ್ಚಿಸಿದ ವಿಷಯವನ್ನೆತ್ತಿ ಒತ್ತಾಯದ ಪ್ರಾಥಮಿಕ ಶಿಕ್ಷಣದ ಹಿತದ ದೃಷ್ಟಿಯಿಂದ ಹೀಗೆ ಮಾಡಲಾಗಿದೆಯೆಂದು ಹೇಳಿದರು.

ವ್ಹಿಕ್ಟೋರಿಯಾ ಟರ್ಮಿನಸ್‌ದಲ್ಲಿ ಪಟಾಕ್ಷಿ ಹಾರಿಸಿದ್ದೇ ನೆವವಾಗಿ ಒಂದು ಗುದಾಮು ಸುಟ್ಟು ಸುಮಾರು ೮ಲಕ್ಷ ರೂ.ಗಳ ಹಾನಿಯಾಗಿದೆ.

ಪಶ್ಚಿಮ ಬಂಗಾಲ

ಕಲಕತ್ತೆಯಲ್ಲಿ ತಾ. ೨೫ ರಂದು ಒಂದು ಬ್ಯಾಂಕಿನಲ್ಲಿಯ ನೌಕರರಿಗೆ ರಿವಾಲ್ವರ ತೋರಿಸಿ ೧೨೩ ಸಾವಿರ ರೂ. ಗಳ ಹಗಲು ದರೋಡೆಯಾದ ವರದಿ ಬಂದಿದೆ. ಪೋಲೀಸರು ಶೋಧ ನಡೆಸಿದ್ದಾರೆ.

ಈಸ್ಟ ಇಂಡಿಯಾ ರೇಲ್ವೆಯಲ್ಲಿ ತಿಕೀಟಿಲ್ಲದೆ ಪ್ರವಾಸಮಾಡುವವರಿಂದ ಅಗಸ್ಟ ತಿಂಗಳೊಂದರಲ್ಲಿಯೇ ೨ ಲಕ್ಷ ೨ ಸಾವಿರ ೬೩೯ ರೂ. ಹಣ ವಸೂಲಾಗಿರುವದೆಂದು ತಿಳಿಯುತ್ತದೆ.

ಕಲಕತ್ತಾ ಟೆಲಿಫೋನ ಕಟ್ಟಡಕ್ಕೆ ತಾ. ೨೭ ರಂದು ಬೆಂಕಿಹತ್ತಿ ಅಂದಾಜು ೨ ಕೋಟಿಯವರೆಗೆ ಹಾನಿಯಾಗಿದೆಯೆಂದೂ ಅಲ್ಲಿಯ ಕೆಲಸಗಾರರನ್ನೆಲ್ಲ ಪಾರುಮಾಡಲಾಯ್ತೆಂದೂ ತಿಳಿಯುತ್ತದೆ. ಮುಖ್ಯ ಪ್ರಧಾನರಾದ ಡಾ. ಬಿ. ಸಿ. ರಾಯರು ಈ ಅನಾಹುತದ ಸ್ಥಳಕ್ಕೆ ಭೆಟ್ಟಿಕೊಟ್ಟು ಎಲ್ಲವನ್ನೂ ನೋಡಿಕೊಂಡು ಹೋದರು. ಹಿಂದುಸ್ತಾನ ಸರಕಾರದವರು ಈ ಬಗ್ಗೆ ವಿಚಾರಣೆ ನಡೆಸಲು ಒಂದು ಸಮಿತಿಯನ್ನು ನೇಮಿಸುವರಾಗಿ ತಿಳಿಯುತ್ತದೆ.

ಪ್ರಸಿದ್ಧ ನರ್ತಕರಾದ ಶ್ರೀ ಉದಯಶಂಕರರು ತಮ್ಮ ಪತ್ನಿಯೊಡನೆ ರಶಿಯನ್ ಸರಕಾರದ ಆಮಂತ್ರಣದ ಮೇರೆಗೆ ಮಾಸ್ಕೋಕ್ಕೆ ತೆರಳಿದರು ಅಲ್ಲಿ ಮಾಸ್ಕೋ ಆರ್ಟ ಥಿಯೇಟರಿನ ೫೦ ನೇ ವಾರ್ಷಿಕೋತ್ಸವದಲ್ಲಿ ಇವರ ಕಾರ್ಯಕ್ರಮವಿದೆಯೆಂದು ತಿಳಿಯುತ್ತದೆ.

ದೀಪಾವಳಿ ಪಟಾಕ್ಷಿ ಹಾರಿಸುವಾಗ ಕಲಕತ್ತೆಯಲ್ಲಿ ೧೦ ಕಡೆಗೆ ಬೆಂಕಿಹತ್ತಿ ೬೦ ಜನರಿಗೆ ಗಾಯವಾಗಿರುವದಾಗಿ ವರದಿಬಂದಿದೆ.

ಹೊಸದಿಲ್ಲಿ

ಕಾಶ್ಮೀರದಲ್ಲಿ ಹಿಂದೀ ಸೈನ್ಯವು ವಿಜಯ ದೊರಕಿಸುತ್ತ ಸಾಗಿದ್ದು ಕಾಶ್ಮೀರ ಕಂಪರದನ್ನು ಶತ್ರು ಮುಕ್ತಮಾಡಲಾಗಿದೆಯೆಂದೂ ಇನ್ನು ಶತ್ರುಗಳನ್ನು ಸಂಪೂರ್ಣ ಓಡಿಸುವದು ಮಾತ್ರ ಉಳಿದಿದೆಯೆಂದೂ ಕಾಶ್ಮೀರ ಯುದ್ಧದ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಫೆಬ್ರುವರಿ ೬ ನೇ. ತಾ. ಜರೆಗಿದ ನೌಶೇರಾ ಕಾಳಗದಲ್ಲಿ ೨ ಸಾವಿರ ಶತ್ರುಗಳು ಹತರಾಗಿದ್ದಾರೆಂದೂ ಅದಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆಂದೂ ಅದರಲ್ಲಿ ಹೇಳಿದೆ.

ಎಷ್ಟು ಕಷ್ಟವಾದರೂ ಕಾಶ್ಮೀರವನ್ನು ದಾಳಿಗಾರರಿಂದ ವಿಮುಕ್ತಮಾಡಲು ನಾವು ಬದ್ಧಪ್ರತಿಜ್ಞರಾಗಿದ್ದೇವೆಂದು ಕೇಂದ್ರದ ಸಂರಕ್ಷಣ ಮಂತ್ರಿ ಸರದಾರ ಬಲದೇವಸಿಂಗರು ತಾ. ೨೭ ರಂದು ಹಿಂದೀ ಭೂ ವಾಯು ದಲಗಳನ್ನು ಕುರಿತು ಸಂದೇಶ ಕಳಿಸಿದ್ದಾರೆ.

ಡಾ. ಪಟ್ಟಾಭಿ ಸೀತಾರಾಮಯ್ಯನವರು ೧೦೫ ಹೆಚ್ಚು ಮತಗಳಿಂದ ಕಾಂಗ್ರೆಸ ಅಧ್ಯಕ್ಷ ಪದಕ್ಕೆ ಆರಿಸಿಬಂದಿದ್ದಾರೆಂದು ತಾ. ೨೭ ಕ್ಕೆ ಅಧಿಕೃತವಾಗಿ ಸಾರಲ್ಪಟ್ಟಿತ್ತು. ಡಾ. ಪಟ್ಟಾಭಿಯವರಿಗೆ ೧೮೯೯ ಮತಗಳೂ ಶ್ರೀ ಪುರುಷೋತ್ತಮದಾಸ ತಂಡನರಿಗೆ ೧೦೮೫ ಮತಗಳೂ ಬಿದ್ದಿವೆ.

ಗಡಿನಾಡ ಪ್ರಾಂತದಲ್ಲಿ ಕ್ರಾಂತಿಯ ಚಿನ್ಹಗಳು ತೋರುತ್ತಿರುವದರಿಂದ ಪಾಕಿಸ್ತಾನ ಸರಕಾರಕ್ಕೆ ಚಿಂತೆಯುಂಟಾಗಿದೆಯೆಂದೂ ಈ ಬಗ್ಗೆ ಜೇಲಿನಲ್ಲಿದ್ದ ಖಾನಅಬ್ದುಲ್ ಗಫಾರಖಾನರೊಡನೆ ಸಂಧಾನದ ಪ್ರಯತ್ನ ನಡೆದಿದೆಯೆಂದೂ ಗೊತ್ತಾಗುತ್ತದೆ.

ಕಾಂಗ್ರೆಸ ಅಧ್ಯಕ್ಷರಾಗಿ ಆರಿಸಿಬಂದ ಡಾ. ಪಟ್ಟಾಭಿ ಸೀತಾರಾಮಯ್ಯನವರು ತಾ. ೨೯ ರಂದು ಮದ್ರಾಸದಿಂದ ವಿಮಾನಮಾರ್ಗವಾಗಿ ದಿಲ್ಲಿಗೆ ತೆರಳಿದರು. ಜೊತೆಗೆ ಮದ್ರಾಸದ ಅರ್ಥಸಚಿವರಾದ ಶ್ರೀ ಬಿ. ಗೋಪಾಲರೆಡ್ಡಿಯವರೂ ಇದ್ದರು.

ರಾಷ್ಟ್ರಕ್ಕೆ ಅನ್ನದಂತೆ ವಿದ್ಯೆ ಮತ್ತು ಆನಂದವೂ ಅವಶ್ಯವೆಂದು ಗವರ್ನರ ಜನರಲ ಶ್ರೀ ರಾಜಗೋಪಾಲಾಚಾರಿಯವರು ದೇಶಕ್ಕೆ ದೀಪಾವಳಿಯ ಸಂದೇಶಕೊಟ್ಟಿದ್ದಾರೆ.

ಹಿಂದ ಸರಕಾರದ ಅರ್ಥಸಚಿವರಾದ ಡಾ. ಜಾನಮಥಾಯಿರು ಕರೆದ ಪ್ರಾಂತಿಕ ಅರ್ಥಸಚಿವರ ಪರಿಷತ್ತು ತಾ. ೩೦ ಮತ್ತು ತಾ. ೩೧ ಈ ಎರಡು ದಿನ ಸೇರಿ ಕೇಂದ್ರ ಮತ್ತು ಪ್ರಾಂತಗಳ ಆರ್ಥಿಕ ಸಂಬಂಧ ಸಹಕಾರದ ಬಗ್ಗೆ ಚರ್ಚೆ ಮಾಡಿತು. ಕೇಂದ್ರದೊಡನೆ ಸಹಕರಿಸಲು ಎಲ್ಲರೂ ಒಪ್ಪಿದರು.

ಮದ್ರಾಸ

ಫ್ರೆಂಚ ಹಿಂದುಸ್ತಾನ ವಸಾಹತುಗಳಲ್ಲಿ ನಡೆದ ಮುನಸಿಪಲ ಚುನಾವಣೆಗೆ ಅ. ಭಾ. ಕಾಂಗ್ರೆಸ ಸಮಿತಿಯ ಪರವಾಗಿ ನಿರೀಕ್ಷಕರಾಗಿ ಹೋಗಿದ್ದ ಡಾ. ಪಿ. ಸುಬ್ಬರಾಯನ್ನರು ಮದ್ರಾಸದ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ, ಫ್ರೆಂಚ ಪೋರ್ತುಗೀಜ ವಸಾಹತುಗಳು ಹಿಂದುಸ್ತಾನದಲ್ಲಿ ವಿಲೀನ ಹೊಂದದೆ ಗತ್ಯಂತರವಿಲ್ಲೆಂದು ಹೇಳಿದರು.

ತಾ. ೩೧ರಂದು ಮದ್ರಾಸ ಗವರ್ನರರು ಮದ್ರಾಸ ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಸರದಾರ ವಲ್ಲಭಭಾಯಿಯವರ ಭಾವಚಿತ್ರವನ್ನು ಅನಾವರಣ ಮಾಡಿದರು. ಆಗ ಸರದಾರರ ಮುತ್ಸದ್ದಿತನವನ್ನು ಬಾಯ್ತುಂಬ ಕೊಂಡಾಡಿದರು.

ಡಿವಿಡೆಂಡ ನಿಯಂತ್ರಣ
ಕೇಂದ್ರ ಸರಕಾರದ ಸುಗ್ರೀವಾಜ್ಞೆ

ಅತಿಪ್ರಸರಣವನ್ನು ಎದುರಿಸಲು ಹಿಂದುಸ್ತಾನ ಸರಕಾರದವರು ತಾ. ೨೯ ರಂದು ಒಂದು ಸುಗ್ರೀವಾಜ್ಞೆ ಹೊರಡಿಸಿ ಸಾರ್ವಜನಿಕ ಕಂಪನಿಗಳು ಹಂಚುವ ಡಿವಿಡೆಂಡನ್ನು ಪಸೂಲಾದ ಬಾಂಡವಲದಲ್ಲಿ ೧೦೦ಕ್ಕೆ ೬ ರಷ್ಟು ಇಲ್ಲವೆ ಮಾರ್ಚ ೧೯೪೮ಕ್ಕೆ ಮುಗಿದ ೨ ವರ್ಷಗಳಲ್ಲಿ ಹಂಚಿದ ಡಿವಿಡೆಂಡಿನ ವಾರ್ಷಿಕ ಸರಾಸರಿ ಹಣದಲ್ಲಿ ಯಾವುದು ಹೆಚ್ಚೋ ಅಷ್ಟಕ್ಕೆ ಮಿತಗೊಳಿಸಿದ್ದಾರೆ. ಶಾಸನಸಭೆಯ ಮುಂದಿನ ಮುಂಗಡ ಪತ್ರಿಕೆಯ ಅಧಿವೇಶನದಲ್ಲಿ ಈ ಸುಗ್ರೀವಾಜ್ಞೆಯು ಕಾಯದೆಯಾಗಿ ಮಾಡಲ್ಪಟ್ಟು ೨ವರ್ಷ ಜಾರಿಯಲ್ಲಿ ಉಳಿಯುವದು.

ಹೈದರಾಬಾದ

ಮುಂಬಯಿಯಲ್ಲಿ ಸರದಾರ ವಲ್ಲಭಭಾಯಿಯವರ ಅಧ್ಯಕ್ಷತೆಯಲ್ಲಿ ಹೈದರಾಬಾದದ ಭವಿತವ್ಯದ ಬಗ್ಗೆ ೨ ದಿನ ವಿಚಾರವಿನಿಮಯ ನಡೆದಿತು. ತಾ. ೩೦ ರಂದು ಶ್ರೀ. ವಿ. ಪಿ. ಮೆನನ್ನರ ಅಧ್ಯಕ್ಷತೆಯಲ್ಲಿ ಬಿಕಾನೇರ ಭವನದಲ್ಲಿ ಸೇರಿದ ಸಭೆಯಲ್ಲಿ ಈ ಚರ್ಚೆಗೆ ಕೊನೆಯ ಮೂರ್ತಸ್ವರೂಪ ಕೊಡಲಾಯಿತೆಂದು ತಿಳಿಯುತ್ತದೆ. ಈ ಸಭೆಯ ಸೂಚನೆಗಳನ್ನು ಹಿಂದುಸ್ತಾನ ಮಂತ್ರಿಮಂಡಲದ ಮುಂದಿಡಲಾಗುವದು. ಸಂಸ್ಥಾನ ಶಾಖೆಯ ಕಾರ್ಯದರ್ಶಿ ಶ್ರೀ ವೆಲ್ಲೋಡಿ, ಹೈದರಾಬಾದದ ಮಿಲಿಟರಿ ಗವರ್ನರರಾದ ಮೇ. ಜ. ಚೌಧರಿ, ಮುಖ್ಯ ಆಡಳಿತಗಾರ ಶ್ರೀ ಡಿ. ಎಸ್. ಬಖಲೆ ಮತ್ತು ಉಪಮುಖ್ಯ ಆಡಳಿತಗಾರ ಶ್ರೀ ಡಿ. ಆರ್. ಪ್ರಧಾನ ಮೊದಲಾದವರು ಈ ಸಭೆಯಲ್ಲಿ ಭಾಗವಹಿಸಿದರು.

ಹೈದರಾಬಾದದ ಭವಿತವ್ಯವನ್ನು ಕೊನೆಯದಾಗಿ ಘಟನಾ ಸಮಿತಿಯೇ ನಿರ್ಧರಿಸಬಲ್ಲದೆಂದು ತೀರ್ಮಾನಿಸಲಾಯಿತು.

ಹೈದರಾಬಾದದ ಹಿಂದಿನ ಅರ್ಥಸಚಿವರೂ ಈಗ ಪಾಕಿಸ್ತಾನದ ಅರ್ಥಸಚಿವರೂ ಆಗಿದ್ದ ಗುಲಾಮ ಮಹಮ್ಮದರಿಗೆ ಹೈದರಾಬಾದ ಸರಕಾರವು ಪ್ರತಿತಿಂಗಳ ಕೊಡುತ್ತಿದ್ದ ೧ ಸಾವಿರ ರೂ. ಪಿಂಚಣಿಯನ್ನು ತಾ. ೨೮ ರಿಂದ ನಿಲ್ಲಿಸಿಬಿಡಲಾಗಿದೆ.

ಹೈದರಾಬಾದ ಪೋಲೀಸ ಕ್ರಮದಲ್ಲಿ ೧೩೭೩ ರಜಾಕಾರರು ಮಡಿದರೆಂದೂ ೧೯೧೧ ರಜಾಕಾರರು ಬಂಧಿತರಾದರೆಂದೂ ಇದರಂತೆ ೮೦೭ ಹೈದರಾಬಾದ ಸೈನಿಕರು ಮಡಿದರೆಂದೂ ೧೦೪೭ ಸೈನಿಕರು ಬಂಧಿತರಾದರೆಂದೂ ಅಂತೂ ೨೧೭೦ ಜನರು ಆಗ ಹತರಾಗಿದ್ದಾರೆಂದೂ ಅಧಿಕೃತವಾಗಿ ಪ್ರಕಟಿಸಲಾಗಿದೆ.

ಮುಂಬಯಿಯಿಂದ ಕೋಲಂಬೋಕ್ಕೆ ಹೋಗುವ ವಿಮಾನಗಳು ನಡುವೆ ಹೈದರಾಬಾದದ ಹತ್ತಿರ ಹಕೀಮಪೇಟ ವಿಮಾನ ನಿಲ್ದಾಣದಲ್ಲಿ ಇನ್ನುಮೇಲೆ ಇಳಿದು ಮುಂದೆ ಹೋಗುವವೆಂದು ತಿಳಿಯುತ್ತದೆ.

ಈ ಮೊದಲು ಸಸ್ಪೆಂಡಿನಲ್ಲಿ ಇಡಲಾಗಿದ್ದ ನಿಜಾಂ ಸರಕಾರ ಯೋಜನಾ ಶಾಖೆಯ ಕಾರ್ಯದರ್ಶಿ ಶ್ರೀ ಅಬ್ದುಲ ಚಿಡಾ ಹಾಗೂ ಸುದ್ದಿ ಶಾಖೆಯ ಅಸಿಸ್ಟಂಟ ಡಾಯರೆಕ್ಟರ ಶ್ರೀ ಮಹಮ್ಮದ ಮೋಮಿನ ಖಾನರನ್ನು ಹೈದರಾಬಾದ ಸಂರಕ್ಷಣ ಕಾಯದೆಯನ್ವಯ ತಾ ೨೮ ರಂದು ಬಂಧಿಸಲಾಗಿದೆ.

ವರ್ಹಾಡದ ರಾಜಕುಮಾರರು ತಾ. ೩೧ ರಂದು ಮುಂಬಯಿಯಲ್ಲಿ ಸರದಾರ ಪಟೇಲರನ್ನು ಕಂಡು ಹೈದರಾಬಾದದ ಬಗ್ಗೆ ಮಾತುಕತೆಯಾಡಿದರು. ಆದರು ಒಂದು ಸಂದರ್ಶನದಲ್ಲಿ, ಹೈದರಾಬಾದದಲ್ಲಿ ಶಾಂತಿ ಸುವ್ಯವಸ್ಥೆ ನೆಲಸತೊಡಗಿದೆಯೆಂದೂ ಮಿಲಿಟರಿ ಗವರ್ನರರಾದ ಮೇ. ಜ. ಚೌಧರಿಯವರು ಒಳ್ಳೆ ದಕ್ಷತೆಯಿಂದಲೂ ನಿಷ್ಪಕ್ಷಪಾತದಿಂದಲೂ ಆಡಳಿತೆ ನಡೆಸುತ್ತಿದ್ದಾರೆಂದೂ ಅದಕ್ಕಾಗಿ ತಾವೂ ಹೈದರಾಬಾದದ ಪ್ರಜರೂ ಹಿಂದುಸ್ತಾನ ಸರಕಾರಕ್ಕೆ ಉಪಕೃತರೆಂದೂ ಹೇಳಿದರಾಗಿ ತಿಳಿಯುತ್ತದೆ.

ನಿಜಾಮರನ್ನು ಪದಚ್ಯುತ ಮಾಡಲಾಗುವದೆಂಬ ಸುದ್ದಿಯು ನಿರಾಧಾರವೆಂದು ಮುಂಬಯಿಯಲ್ಲಿ ಶ್ರೀ. ವಿ. ಪಿ. ಮೆನನ್ನರು ಹೇಳಿದರು.

ಹೈದರಾಬಾದದಲ್ಲಿ ಏಜೆಂಟ ಜನರಲರಾಗಿದ್ದ ಶ್ರೀ. ಕೆ. ಎಂ. ಮುನಸಿಯವರು ಸರದಾರರನ್ನು ಕಂಡು ತಮ್ಮನ್ನು ಆ ಕೆಲಸದಿಂದ ನಿವೃತ್ತಿಗೊಳಿಸಬೇಕೆಂದು ಕೇಳಿದರಾಗಿ ತಿಳಿಯುತ್ತದೆ.

ಹೈದರಾಬಾದ ಆಯ್ಕೆಗೆ ೪೦ ಲಕ್ಷ ರೂ.

ಹೈದರಾಬಾದದಲ್ಲಿ ಹೊಸದಾಗಿ ನಡೆಯಬೇಕೆಂದ ಚುನಾವಣೆಗೆ ೩೦ ರಿಂದ ೪೦ ಲಕ್ಷ ರೂಪಾಯಿಗಳ ವೆಚ್ಚ ಬರಬಹುದೆಂದು ಚುನಾವಣೆ ಅಧಿಕಾರಿಗಳಾದ ಶ್ರೀ ಶೇಷಾದ್ರಿಯವರು ಅಂದಾಜು ಮಾಡಿದ್ದಾರೆ. ಸಂಸ್ಥಾನದಲ್ಲಿ ೯೫ ಲಕ್ಷ ಮತದಾರರಾಗಬಹುದೆಂದು ಅವರು ಲೆಕ್ಕ ಹಾಕಿದ್ದಾರೆ. ಚುನಾವಣೆಯ ಪೂರ್ವ ಸಿದ್ಧತೆಯ ಮಹಾಕಾರ್ಯವನ್ನು ವಿವರಿಸುತ್ತ, ಮತದಾರರ ಯಾದಿ ಮತ್ತು ಮತ ಪತ್ರಿಕೆಗಳನ್ನು ಮುದ್ರಿಸಲು ೧೪೦ ಟನ್ ಕಾಗದ ಬೇಕೆಂದು ಓರ್ವ ಅಧಿಕಾರಿ ತಿಳಿಸಿದರು.

ಬೇಕಾದ ಭಾಷೆಯಲ್ಲಿ ತಂತಿ ಕಳಿಸಬಹುದು

ಬೇಕಾದ ಭಾಷೆಗಳಲ್ಲಿ ಇನ್ನು ಮೇಲೆ ತಂತಿಗಳನ್ನು ಸ್ವೀಕರಿಸಲಾಗುವದೆಂದು ಸರಕಾರಿ ಪ್ರಕಟನೆ ಹೊರಟಿದೆ. ಆದರೆ ಬರಹ ರೋಮನ್ ಲಿಪಿಯಲ್ಲಿರಬೇಕಲ್ಲದೆ ತಂತಿ ಕಳಿಸುವ ಅಂಚೆ ಕಚೇರಿಯಲ್ಲಾಗಲೀ ಸ್ವೀಕರಿಸುವ ಅಂಚೆ ಕಚೇರಿಯಲ್ಲಾಗಲಿ ಆ ಭಾಷೆ ತಿಳಿದಂತಿರಬೇಕೆಂದು ನಿರ್ದಿಷ್ಟ ಪಡಿಸಲಾಗಿದೆ.

ಸರದಾರರ ೭೪ ನೆಯ ವರ್ಧಂತಿ
ಚಿನ್ನದ ಅಶೋಕ ಸ್ತಂಭದ ಅರ್ಪಣೆ

ಭಾರತದ ಉಪ ಮುಖ್ಯ ಮಂತ್ರಿಗಳೂ ಶ್ರೇಷ್ಠ ಮುತ್ಸದ್ದಿಗಳೂ ಆದ ಸರದಾರ ವಲ್ಲಭಭಾಯಿ ಪಟೇಲರ ೭೪ ನೆಯ ವರ್ಧಂತಿಯ ನಿಮಿತ್ತ ಮುಂಬಯಿ ಪ್ರಾಂತಿಕ ಕಾಂಗ್ರೆಸ ಸಮಿತಿಯವರು ತಾ. ೩೧ಕ್ಕೆ ಚೌಪಾಟಿಯಲ್ಲಿ ಜಾಹೀರ ಸತ್ಕಾರ ಸಮಾರಂಭ ಏರ್ಪಡಿಸಿದ್ದರು. ಈ ಕಾಲಕ್ಕೆ ೫ ಲಕ್ಷ ಜನರು ಸೇರಿದ್ದರು.

ಮುಂಬಯಿ ಗವರ್ನರರಾದ ಸರ್ ರಾಜಾ ಮಹಾರಾಜಸಿಂಗರು ಸರದಾರರಿಗೆ ತಾ. ೩೦ ರಂದು ಉಪಾಹಾರ ಏರ್ಪಡಿಸಿ ಸತ್ಕರಿಸಿದರು.

ತಾ. ೩೧ ರಂದು ಮುಂಬಯಿ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರರು ಸರದಾರ ಪಟೇಲರ ಗೌರವಾರ್ಥವಾಗಿ ಕೌನ್ಸಿಲ ಭವನದ ತೋಟದಲ್ಲಿ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಮಂತ್ರಿಗಳೂ ಮುಂಬಯಿ ಹಾಯಕೋರ್ಟಿನ ನ್ಯಾಯಾಧೀಶರೂ ಗವರ್ನರ ಸರ್ ರಾಜಾ ಮಹಾರಾಜ ಸಿಂಗರೂ ರಾಣಿ ಮಹಾರಾಜಸಿಂಗರೇ ಮೊದಲಾದ ಗಣ್ಯ ವ್ಯಕ್ತಿಗಳು ಅತಿಥಿಗಳಾಗಿ ಆಗಮಿಸಿದ್ದರು.

ಸರದಾರರ ೨೦೦೦ ದಷ್ಟು ಸ್ನೇಹಿತರು ಅವರನ್ನು ಅವರ ನಿವಾಸದಲ್ಲಿ ಕಂಡು ಮಾತನಾಡಿದರು. ಮುಂ. ಪ್ರಾಂ. ಕಾಂ. ಸಮಿತಿಯ ಅಧ್ಯಕ್ಷ ಶ್ರೀ ಎಸ್. ಕೆ ಪಾಟೀಲರೂ ಮುಂಬಯಿ ಮೇಯರರೂ ಸರದಾರರು ಇದ್ದಲ್ಲಿ ಆಗಮಿಸಿದ್ದರು. ಸರದಾರರು ಎಲ್ಲರಿಗೂ ಸಂದರ್ಶನವಿತ್ತು ಎಲ್ಲರ ಶುಭಾಶಯಗಳನ್ನೂ ಸ್ವೀಕರಿಸಿದರು. ಸರದಾರರಿಗೆ ಅವರ ಸ್ನೇಹಿತರು ೬೦೦ ತೊಲೆಯ ಸುಮಾರು ೧ ಲಕ್ಷ ಬೆಲೆಯ ಸುವರ್ಣದ ಅಶೋಕ ಸ್ತಂಭವನ್ನು ಕಾಣಿಕೆಯಾಗಿ ಅರ್ಪಿಸಿದರು. ಮುಂಬಯಿ ಪ್ರಾಂತಿಕ ಕಾಂಗ್ರೆಸ ಸಮಿತಿಯವರು ಅವರಿಗೆ ಗಾಂಧೀಜಿಯ ರಜತ ಪುತ್ಥಳಿಯನ್ನು ಅರ್ಪಿಸಿದರು.

ಅಹಮ್ಮದಾಬಾದ ಗಿರಣಿ ಒಡೆಯರ ಸಂಘದವರು ಸರದಾರರಿಗೆ ಅವರ ರಾಷ್ಟ್ರ ಸೇವೆಯ ಕುರುಹೆಂದು ೬೩ ಸಾವಿರ ರೂಪಾಯಿಗಳ ಹಮ್ಮಿಣಿ ಅರ್ಪಿಸಬೇಕೆಂದು ನಿರ್ಧರಿಸಿದ್ದಾರೆ.

೫೫ ನೇ ಕಾಂಗ್ರೆಸ— ಪ್ರಕಟನೆ

ಅ. ಭಾ. ಕಾಂಗ್ರೆಸದ ೫೫ ನೆಯ ಅಧಿವೇಶನವು ಜಯಪುರದಲ್ಲಿ ಇದೇ ಡಿಸೆಂಬರ ತಾ. ೧೮-೧೯ ದಿನಗಳಲ್ಲಿ ಜರಗುವದು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಇದೇ ಮೊದಲ ಅಧಿವೇಶನ. ಆದ್ದರಿಂದ ದಿಕ್ಕು ದಿಕ್ಕುಗಳಿಂದ ಜನರು ಈ ಅಧಿವೇಶನಕ್ಕೆ ಬರಲು ತವಕಿಸುತ್ತಿದ್ದಾರೆ. ಆದ್ದರಿಂದ ಪ್ರವೇಶಶುಲ್ಕಾದಿಗಳ ಬಗ್ಗೆ ಕೆಳಗಿನ ವಿಷಯ ಉಪಯುಕ್ತವಾಗಬಹುದು.

(೧) ಸ್ವಾಗತ ಸಮಿತಿಯ ಸದಸ್ಯತ್ವಕ್ಕೆ ೨೫ ರೂ. ಶುಲ್ಕವಿದ್ದು ಅಧಿವೇಶನ ಕೂಡುವವರೆಗೂ ಸದಸ್ಯರಾಗಬಹುದು. ಇವರಿಗೆ ಬಹಿರಂಗ ಅಧಿವೇಶನಕ್ಕೆ ಪಾಸುಕೊಡಲಾಗುವದು.

(೨) ಬಹಿರಂಗ ಅಧಿವೇಶನದ ಪ್ರೇಕ್ಷಕ ಶುಲ್ಕ ರೂ. ೧೦, ೫೦, ೧೦೦, ೨೫೦, ೫೦೦, ೧೦೦೦ ಹೀಗೆ ಇಡಲಾಗಿದೆ. ಒಮ್ಮೆ ಕೊಂಡ ತಿಕೀಟು ಅಧಿವೇಶನ ಮುಗಿವ ವರೆಗೂ ನಡೆಯುವದು. ಸ್ಥಳಗಳನ್ನು ರಿಝರ್ವ ಮಾಡಲಾಗುವದಿಲ್ಲ. ಆದರೆ ಶುಲ್ಕಾನುಗುಣವಾಗಿ ಸ್ಥಳಗಳಲ್ಲಿ ತರಗತಿ ಕಲ್ಪಿಸಲಾಗಿದೆ.

(೩) ಬಹಿರಂಗ ಅಧಿವೇಶನಕ್ಕೆ ಒಂದೇ ದಿನದ ತಿಕೀಟು ಸಿಗಲಾರದು.

(೪) ವೃತ್ತ ಪತ್ರಗಳ ಅಧಿಕೃತ ಪ್ರತಿನಿಧಿಗಳಿಗೂ ಛಾಯಾ ಚಿತ್ರಕಾರರಿಗೂ ಕೊಡಲಾಗುವ ಪಾಸು ಅಧಿವೇಶನದ ಎಲ್ಲ ಭಾಗಗಳಿಗೂ ನಡೆಯುವವು.

(೫) ಕಾಂಗ್ರೆಸ ಕಾರ್ಯಕರ್ತರಿಗೆ ಬಹಿರಂಗ ಅಧಿವೇಶನಕ್ಕೆ ಪಾಸು ಕೊಡಲಾಗುವದು. ಈ ಬಗ್ಗೆ ಪ್ರಾಂತಿಕ ಕಾಂಗ್ರೆಸ ಸಮಿತಿಗೆ ಬರೆದು ತಿಳಿದುಕೊಳ್ಳಬೇಕು.

ಯಾವದೇಬಗೆಯ ಪಾಸುಗಳನ್ನು ಪ್ರಾಂತಿಕ ಕಾಂಗ್ರೆಸ ಸಮಿತಿಯ ಶಿಫಾರಸಿನ ಮೇರೆಗೆ ಕೊಡಲಾಗುವದು. ಪ್ರೇಕ್ಷಕರಾಗುವವರು ಪ್ರವೇಶ ಧನಕೊಟ್ಟು ಸ್ವಾಗತ ಸಮಿತಿಯಿಂದ ಪಾಸು ಪಡೆದುಕೊಳ್ಳಬೇಕು. ಊಟ ವಸತಿಗಳ ಬಗ್ಗೆ ಪ್ರತ್ಯೇಕ ವಿಚಾರ ಮಾಡಿಕೊಳ್ಳಬೇಕು.

ವಾರದ ಭವಿಷ್ಯ

ಜ್ಯೋತಿಷಿ– ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯಕಥನ ಆಫೀಸ ಖಡೇಬಝಾರ, ಬೆಳಗಾವಿ

ನವಂಬರ ೮ ರಿಂದ ೧೪ ರ ವರೆಗೆ

ಮೇಷ

ಸ್ವತಃ ನಿಮಗೆ ಮತ್ತು ನಿಮ್ಮ ಹೆಂಡತಿಗೆ ಬಹಳ ಕ್ಲೇಶ. ಪ್ರಾಪಂಚಿಕ ವಿಷಯಗಳಲ್ಲಿ ಬಗೆ ಬಗೆಯ ತೊಂದರೆ. ಹೆಂಡತಿಯೊಡನೆ ವಿರೋಧ. ಅಲ್ಲದೆ ಸ್ತ್ರೀ ವರ್ಗದಲ್ಲಿ ಅನಾದರ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಅವಚಿತ ಲಾಭದ್ದೂ ಸಂಭವ. ಮಿತ್ರಸುಖ ಉತ್ತಮ. ಬಂಧುವರ್ಗದವರಲ್ಲಿ ಉನ್ನತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಯಾವದೋ ಒಂದು ಕುತರ್ಕದಿಂದ ಮನಸ್ಸು ಖಿನ್ನವಾಗುವದು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೮, ೯, ೧೦, ೧೧ ಅನುಕೂಲ.

ವೃಷಭ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ. ಚಾಡಿ ಹೇಳುವವರ ಸಹವಾಸದಿಂದ ಎಲ್ಲರ ಬಗ್ಗೆ ಮನಸ್ಸು ಕಲುಷಿತ. ಸ್ಥಾವರದಲ್ಲಿ ಸ್ವಲ್ಪ ಹಾನಿ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆಯ ಬಗ್ಗೆ ಕೆಲ ಜನರದು ಉತ್ತಮ. ಆದರೆ ಕೆಲ ಜನರದು ಕೆಟ್ಟ ಈ ಬಗೆಯ ಇಬ್ಬಗೆಯ ಅಭಿಪ್ರಾಯ. ಮಿತ್ರ ಸುಖ ಉತ್ತಮ. ಹೊರಗಿನವರಿಗಿಂತ ಮನೆಯಲ್ಲಿಯೆ ಹೆಚ್ಚು ಶತ್ರುತ್ವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಬಹಳ ದೂರಿನದು. ಆದರೆ ತೊಂದರೆಯದು. ಭೆಟ್ಟಿ ಯಶಸ್ವಿ ಆದರೆ ಪತ್ರವ್ಯವಹಾರ ತೊಂದರೆಯದು. ಕೃತ್ತಿಕೆಯ ೨ ಮತ್ತು ೪ ಮತ್ತು ರೋಹಿಣಿಯ ೧ ಮತ್ತು ೩ ಚರಣಕ್ಕೆ ತೊಂದರೆ ಕಡಮೆ. ತಾ. ೮, ೯, ೧೦, ೧೨ ಅನುಕೂಲ.

ಮಿಥುನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮಕ್ಕಳಿಗೆ ಸ್ವಲ್ಪ ಕ್ಲೇಶ. ಸ್ಥಾವರದಲ್ಲಿ ಹೆಚ್ಚಳ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಹಿತದ್ದು. ಬಂಧು ವರ್ಗದವರಲ್ಲಿ ವಿಶೇಷ ಉನ್ನತಿಯ ಘಟನೆಗಳು. ಸ್ವತಃ ನಿಮ್ಮಿಂದ ಹೆಚ್ಚು ಪರಾಕ್ರಮದ ಒಂದೆರಡು ಕೆಲಸ ಸಂಭವಿಸಿ ಅದರಲ್ಲಿ ಒಳ್ಳೆ ಯಶಸ್ಸು ಸಿಕ್ಕುವದು. ಉದ್ಯೋಗದಲ್ಲಿಯೂ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಬಗೆ ಬಗೆಯ ವಸ್ತುಗಳ ಸಂಗ್ರಹ ಮಾಡುವಲ್ಲಿ ವಿಪರೀತ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪೂರ್ಣ ಅನುಕೂಲತೆ. ಮಿತ್ರರಿಂದ ಮಾತ್ರ ಸ್ವಲ್ಪ ಛಲನೆ. ಪ್ರವಾಸಾದಿ ಕೆಲಸ ಹಿತದ್ದು. ಆದರೆ ಆರಿದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೧, ೧೨, ೧೩, ೧೪ ಅನುಕೂಲ.

ಕರ್ಕ

ಪ್ರಕೃತಿ ಉತ್ತಮ. ಮಕ್ಕಳಲ್ಲಿ ಉನ್ನತಿ ಆದರೆ ಉಳಿದ ಅನೇಕ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ ಸಂಭವಿಸಿ ಎಲ್ಲರ ಉಪಹಾಸ. ಆಪ್ತರು ಮತ್ತು ನೆರೆಹೊರೆಯವರಿಂದ ಕಿರಕುಳ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಸ್ಥಾವರದಲ್ಲಿ ಕೆಲ ಹೊಸ ಹೊಸ ಕಿಟಿಕಿಟಿ ಉತ್ಪನ್ನವಾಗುವ ಭೀತಿ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಪುಷ್ಯದ ಕೊನೆಯ ೩ ಮತ್ತು ಅಶ್ಲೇಷಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೮, ೧೨ ೧೩ ಅನುಕೂಲ.

ಸಿಂಹ

ಪ್ರಕೃತಿ ಸಾಧಾರಣವೇ. ಹೆಂಡತಿ ಕೂಡ ಮೇಲಿಂದ ಮೇಲೆ ಮತಭೇದ ಪ್ರಾಪಂಚಿಕ ಸುಖದಲ್ಲಿ ಕೆಲ ಉತ್ಸಾಹದ ಕೆಲ ನಿರುತ್ಸಾಹದ ಸಂಗತಿಗಳು. ಮಕ್ಕಳಲ್ಲಿ ಉನ್ನತಿ. ಬಂಧು ವರ್ಗದವರಿಂದ ಕೆಲ ಗೈರವರ್ತನ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಮನಸ್ಸಿನಂತೆ; ಆದರೆ ವೆಚ್ಚವೂ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಮಘಾದ ಕೊನೆಯ ೩ ಮತ್ತು ಪೂರ್ವಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೦, ೧೧, ೧೪, ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ. ಕಿರಕಳ ವೆಚ್ಚ ಬಹಳ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಬಹಳ ಕೆಲಸಗಳಲ್ಲಿ ಇಬ್ಬಗೆಯ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಪ್ರವಾಸಾದಿ ಕೆಲಸ ಸಾಧಾರಣ ಅನುಕೂಲ. ಚಿತ್ತಾದ ೨ ಮತ್ತು ೪ ಹಸ್ತಾದ್ದಕ್ಕಿ ಮತ್ತು ೩ ಈ ಚರಣಗಳಿಗೆ ತೊಂದರೆ ಕಡಮೆ. ತಾ. ೮, ೧೨, ೧೩ ಅನುಕೂಲ,

ತುಲಾ

ನಿಮ್ಮ ಪ್ರಕೃತಿಗೆ ಸ್ವಲ್ಪ ಕ್ಲೇಶ ಆದರೆ ಹೆಂಡತಿ ಮತ್ತು ಮಕ್ಕಳ ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ಬಹಳ ಉತ್ತಮ ತಿಸ್ನಸಕ ಆದರೆ ಕೃತಜ್ಞ ಜನರ ಸಹವಾಸ. ವಾಹನ ಸುಖ ಬಹಳ. ಉದ್ಯೋಗದಲ್ಲಿ ಬಹಳ ಪ್ರಗತಿ ಒಳ್ಳೆ ಪ್ರತಿಷ್ಠೆ ಮತ್ತು ತುಂಬ ಲಾಭ. ಹೌಸಿಗಾಗಿ ಬಹಳ ವೆಚ್ಚ. ಮಿತ್ರಸುಖ ಅನುಕೂಲ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಹಿತಾನಹ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೯, ೧೦, ೧೧, ೧೪ ಅನುಕೂಲ.

ವೃಶ್ಚಿಕ

ಪ್ರಕೃತಿ ನಿರೋಗಿ ಆದರೆ ಪ್ರಕೃತಿಯಲ್ಲಿ ಬಹಳ ಕಾವು ಆದಂತೆನಿಸುವ ಸಂಭವ. ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ ಆದರೆ ಬಂಧುವರ್ಗದವರಲ್ಲಿ ಮತ್ತು ವರಿಷ್ಠ ಇಲ್ಲವೆ ಆಶ್ರಯದಾತರಲ್ಲಿ ಅಲ್ಪಸ್ವಲ್ಪ ವಿರೋಧ. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆ ಹೆಚ್ಚಿಸುವದಕ್ಕಾಗಿ ಕುಚೇಷ್ಟೆ ಮಾಡಬೇಕಾದ ಪ್ರಸಂಗ. ದ್ರವ್ಯಲಾಭ ಅನುಕೂಲ. ಆದರೆ ವೆಚ್ಚ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ ಪ್ರವಾಸ ಸುಖದ್ದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠಾದ ೧ ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೮, ೧೨, ೧೩ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮಕ್ಕಳಲ್ಲಿ ಅಲ್ಪಸಲ್ಪ ಕ್ಲೇಶ ಪ್ರಾಪಂಚಿಕ ಸುಖ ಅನುಕೂಲ. ಆದರೆ ಬಹಳ ಸಂಗತಿಗಳಲ್ಲಿ ನಿಮತಿಂತ ಎರಡನೆಯವರ ಮತದಂತೆ ನಡೆಯಬೇಕಾದ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚವೂ ಅಂದಾಜಿಗಿಂತ ಬಹಳ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಸಾಧಾರಣ ಅನುಕೂಲ. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢದ ೧ನೆ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೮, ೯, ೧೦, ೧೧ ಅನುಕೂಲ.

ಮಕರ

ಪ್ರಕೃತಿ ಸಾಧಾರಣವೆ. ಹೆಂಡತಿ ಮತ್ತು ಮಕ್ಕಳ ಸುಖ ಅನುಕೂಲ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖದ ಅಭಾವ. ಕೆಲ ವಸ್ತು ಇಲ್ಲವೆ ಒಡವೆ ಕಳವಾಗಿ ಹೋಗುವ ಅಂಜಿಕೆ. ಸ್ವತಃ ನಿಮ್ಮ ಮೇಲೆಯೂ ಅನೇಕರು ಸುಳ್ಳುಂದು ಸೊಟ್ಟೊಂದು ಆರೋಪ ಮಾಡುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ವೆಚ್ಚ ವಿಪರೀತವಾಗುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಕೂಲತೆ ಆದರೆ ಶತ್ರುಗಳಿಗೆ ಪಣ ಭಾರಿ ಕೆಲ ಮಟ್ಟಿಗೆ ಹಾನಿ. ಪ್ರವಾಸಾದಿ ಕೆಲಸ ಅನುಕೂಲ. ಉತ್ತರಾಷಾಢಾದ ೨ನೇ ಮತ್ತು ೪ನೇ ಮತ್ತು ಶ್ರವಣಾದ ೧ ಮತ್ತು ೩ನೇ ಚರಣಗಳಿಗೆ ತೊಂದರೆ ಕಡಮೆ. ತಾ. ೮, ೧೨, ೧೩ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣ. ಆದರೆ ಹೆಂಡತಿ ಮತ್ತು ಮಕ್ಕಳ ಆರೋಗ್ಯ ಅನುಕೂಲ. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಮನಸ್ಸಿನಂತೆ. ಆದರೆ ಬಂಧು ವರ್ಗದ ಪರಿವಾರದವರಿಗೆ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೇ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆ ಬಹಳ; ಆದರೆ ಅನುಕೂಲತೆ ನಿಶ್ಚಿತ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಆದರೆ ಶತತಾರಿಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ೧ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೦, ೧೧, ೧೨, ೧೩ ಅನುಕೂಲ.

ಮೀನ

ಪ್ರಕೃತಿ ಉತ್ತಮ. ಕನಾಟಕ ಹೆಂಡತಿಯ ಪ್ರಕೃತಿಯಲ್ಲಿ ಕುರಕುರಿ. ಮಕ್ಕಳಲ್ಲಿ ಹೆಚ್ಚಿಗೆ ಸಮಾಧಾನ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ವೆಚ್ಚವೂ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಹೆಚ್ಚು ಅನುಕೂಲ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೮, ೧೨, ೧೩, ೧೪ ಅನುಕೂಲ.

ಮದ್ಯಪಾನದ ದುಷ್ಪರಿಣಾಮಗಳು

ಮದ್ಯಪಾನದ ಪರಿಣಾಮ ಬಹಳಷ್ಟು ಇದ್ದರೂ ಅವು ಅನೇಕ್ಷಿತವಾದವು. ಅವರ ಮುಖ್ಯ ಕೆಲವು ಗಳಿಗೆ ತಿಳಿಸಲಾಗಿದೆ. ಅವರಲ್ಲಿ ಡಾಕ್ಟರರು ಹೇಳಿದ್ದು ಕೆಲವು ಸೂಚನೆಗಳು ತಿಳಿಸಿರುತ್ತಾರೆ. ಅವರ ಸಿದ್ಧಾಂತಗಳನ್ನು (ಡಾಕ್ಟರ ಗ್ರಂಥ)ಗಳಲ್ಲಿ ಅಲ್ಲದೆ ಆಯಾ ಗ್ರಂಥದಿಂದ ಮದ್ಯದ ದುಷ್ಪರಿಣಾಮಗಳನ್ನು ಇಲ್ಲಿ ಕೊಡಲಾಗಿದೆ.

ವಿಷವೂ ಮದ್ಯವೂ ಸಮಾನವಾದವುಗಳು. ವಿಷ ವಿಧವಾಗಿ ಕೆಲವು ಉಂಟಾಗುವಂತೆ ಮದ್ಯಪಾನದ ... ಆದರೆ ಬೇಗನೆ ತಗೆಯಬೇಕೆಂದಾಗ ಅದರಿಂದ ಹಾಡೋಣ, ... ಮಾಂದ್ಯ, ಗುಟ್ಟೆ ... ಪರವಶತೆ, ಅಂಗಗಳಲ್ಲಿ ಮೂರ್ಛೆ ಇವು ಸಂಭವಿಸುತ್ತವೆ. ಮದ್ಯಾಭ್ಯಾಸಿಗಳಾದ ... ಯರಿಗೆ ... ಅಂಜಿಕೆ, ... ಆಯಾಸ, ... ಕ್ರಮವಾಗಿ ಪ್ರಾಪ್ತವಾಗುವವು. ... ಅನೇಕಗಳಿಂದ ಮುಖ್ಯಕಾಲಗೊಳ್ಳುತ್ತವೆ.

ಒಂದು ವಿಧದ ಮದವಿಕಾರದಲ್ಲಿ ದಪ್ಪ, ಶ್ವಾಸ, ತಲೆನಡುಗು, ಪಕ್ಕೆಲುಬು ಮತ್ತು ಹೊಟ್ಟೆಗಳ ಸೂಲೆ, ಪಿತ್ತಾಸಾರ, ಬಡಬಡಿಕೆಗಳು ಉಂಟಾಗುತ್ತವೆ. ಎರಡನೆಯ ವಿಕಾರದಲ್ಲಿ ನೀರಡಿಕೆ, ಮೈಯುರಿ, ಜ್ವರ, ಬೆವರು, ಮೂರ್ಛೆ, ಅತಿಸಾರ, ಬವಳಿ, ... ಬರುತ್ತದೆ. ಮೂರನೆಯ ವಿಕಾರದಲ್ಲಿ ಓಕರಿಕೆ, ಅರುಚಿ, ಎದೆಯ ಮುಳಮುಳಿ, ಅರಿಷಿ, ಮೈಸಸಿ ಎನಿಸುವಿಕೆ, ಮೈಭಾರ, ಚಳಿ, ಮಲ ಮೂತ್ರಾದಿಗಳ ತ್ರಾಸ, ಕಲಿಶೂಲೆ, ಸಂಧು ನೋವು, ಕಫಸ್ರಾವ, ಅಸ್ವಸ್ಥತೆ ಇವು ಸಂಭವಿಸುತ್ತವೆ. ಮದ್ಯಪಾನದ ಕಡೆಯ ಪರಿಣಾಮ ಅಸಾಧ್ಯ; ಅಂದರೆ ಯಾವ ಔಷಧೋಪಚಾರದಿಂದಲೂ ಗುಣ ಹೊಂದದ ಸ್ಥಿತಿ. ಅದರಲ್ಲಿ ಕುಡಿದ ವ್ಯಕ್ತಿಯ ಮೇಲ್ತುಟಿ ಕೆಳತುಟಿಗಿಂತ ಉದ್ದವಾಗುತ್ತದೆ, ಯಾವಾಗಲೂ ಹೊರಮೈ ಚಳಿಯಿರುತ್ತದೆ, ಅತಿಶಯ ಉರಿ ನೀರಡಿಕೆ, ಮುಖದ ಮೇಲೆ ಎಣ್ಣೆ ಹಚ್ಚಿದಂತೆ ತೋರುವುದು, ನಾಲಿಗೆಯ ತುದಿ ಮತ್ತು ಹಲ್ಲುಗಳು ಕಪ್ಪು ಅಥವಾ ನೀಲವಾಗುವುವು, ಕಣ್ಣು ಹಳದಿ ಇಲ್ಲವೆ ಕೆಂಪಾಗುವುವು.

ಹಿಂದೀ ವಿಮಾನ ಪಡೆಯೊಡನೆ ಮೊದಲಿನಿಂದಲೂ ನಿಕಟ ಸಂಬಂಧವಿಟ್ಟುಕೊಂಡವರೂ ಹಿಂದುಸ್ತಾನದಲ್ಲಿ ವಿಮಾನ ಹಾಗಿಗೆಯನ್ನು ಮೊದಲು ಪ್ರಾರಂಭಿಸಿದರೂ ಸುಶಿಕ್ಷ ವೈಮಾನಿಕರೂ ಆದ ಶ್ರೀ ಜೆ. ಆರ್. ಡಿ. ಟಾಟಾ ಅವರಿಗೆ ಹಿಂದುಸ್ತಾನ ಸರಕಾರದವರು ಹಿಂದೀ ವಿಮಾನ ಪಡೆಯ “ಗ್ರುಪ್ ಕ್ಯಾಪ್ಟನ್” ಎಂಬ ಗೌರವದ ಪದವಿಯನ್ನು ದಯಪಾಲಿಸಿದ್ದಾಗಿ ಸರಕಾರಿ ಪ್ರಕಟನೆ ಹೊರಟಿದೆ.

ಪುಸ್ತಕ ಪರಿಚಯ

ದರ್ಶನ

ಬರೆದವರು ಶ್ರೀ ಬಿ. ಜಿ. ಕುಲಕರ್ಣಿ ಬಿ. ಏ. ಆನರ್ಸ್ ಪ್ರಕಾಶಕರು ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ ಪುಟ ೧೨೨, ಬೆಲೆ ೨-೦-೦

'ದರ್ಶನ'ವು ಜೀವನದಲ್ಲಿ ಸ್ವಾಭಾವಿಕ ವೆನಿಸಬಹುದಾದ ಅಕಸ್ಮಿಕ ಘಟನೆಗಳಿಂದ ಹೆಣೆದ ಒಂದು ಅತಿ ಸರಳವಾದ ಆದರೆ ಅತಿ ಮುಗ್ಧವಾದ ಕಲ್ಪನಾವಿಲಾಸವನ್ನು ಕನ್ನಡಿ ಸುವ ಒಂದು ಕಥೆ. ಪದ್ಮನಾಭ ಪದ್ಮಜೆಯರು ನಾಯಕ ನಾಯಕಿಯರು. ಪದ್ಮನಾಭನು ಅಧುನಿಕನಂತೆ ತೋರಿದರೂ ಎಂದಿನಂತೆ ಸ್ತ್ರೀಯನ್ನು ಸುಂದರಿಯೆಂದೇ ಮೊದಲು ಗುರುತಿಸ ಬಲ್ಲ ೧೮ನೆಯ ಶತಮಾನದ ಹಳೆಯ ಪರಾಕಿನ ರಸಿಕ. ಅಥವಾ ಅದೇ ಮಾರ್ಗ ಹಿಡಿದ ಇಂದಿನ ಕಾಲೇಜು ಹುಡುಗರ ಅಥವಾ ಸಿನೆಮಾ ಕಥಾನಾಯಕರ ಜಾತಿಗೆ ಸೇರಿದವ; ದೇಶ ಪ್ರೇಮಿ. ಅರೆಮುಗ್ಧ ಅಥವಾ ಮಧ್ಯೆ (Semi-bold, Semi stupid and Semi-effeminate). ಅವಳ ಮತ್ತು ಅವನ ಪ್ರಣಯ ಮುಖದರ್ಶನದಿಂದ ಪ್ರಾರಂಭ ವಾಗುವದು. ಎಂದಿನಂತೆ ಚರ್ವಿತಚರ್ವಣ. ಆದರೆ ಅವರಿಬ್ಬರಲ್ಲಿ ಮಹಾ ಸತ್ವಸಂಪನ್ನತೆ ಯಿಲ್ಲದಿದ್ದರೂ ಮಧ್ಯವರ್ಗದ ಇಂದಿನ ತರುಣ ತರುಣಿಯರಲ್ಲಿ ಇದ್ದದ್ದರೊಳಗೆ ಉದಾರರೂ ಸರಳರೂ ಎನಿಸುವ ಸ್ನಿಗ್ಧರ ನಡೆನುಡಿ ಇರು ವದು ರಸಾವಹವಿದೆ. ಮೃದುಲಾಬೆಹೆನ್ ಮತ್ತು ಶಕ್ರುಪತಿಗಳ ಜೋಡಿಯಾದರೂ ಹೀಗೇ. ಅಲ್ಪಸ್ವಲ್ಪ ಸುಧಾರಿಸಿ ಅಧುನಿಕತೆ ಗೆಳೆದು ಮುಟ್ಟಿದಂತೆ ಮಾಡಿರುವ ಪಾತ್ರ ಯುಗ.

"Every Beauty has a dog" !—ಪ್ರತಿ ಯೊಬ್ಬ ಬಿನ್ನಾಣಗಿತ್ತಿಗೂ ಒಬ್ಬ ಬಾಲಬಡಿ ಯುವವನಿದ್ದಾನೆ" ಎಂಬಂತಿರುವ ಮೂಢರು ಪದ್ಮಜೆಯ ಬೆನ್ನುಹತ್ತುವ ಸಂಗತಿ ಇಂದಿನ ಸಮಾಜದ ಅಚಾರದ ಮೇಲೆ ಬೆಳಕು ಬೀರು ವಂಥದಿದೆ; ಹೊಲಸನ್ನು ಬೀದಿಗೆಳೆಯು ವಂತಿದೆ! ಪದ್ಮನಾಭನ ರೂಪಕ್ಕೆ ಮನಸೋಲಿ ದಿದ್ದರೂ ಅವನ ಇತರ ಗುಣಗಳಿಗೇ ಹೆಚ್ಚಾಗಿ ಮನಸೋತಂತೆ ತೋರುವ ಪದ್ಮಜೆಯಿಂದ ಪದ್ಮ ನಾಭನಂಥ ರೂಪನ್ಯಾಧರಾದ ತರುಣರು ಬುದ್ಧಿಗಲಿಯಬಹುದಾಗಿದೆ; ಸ್ವರೂಪದರ್ಶನ ಮಾಡಿಕೊಳ್ಳಬಹುದು! ಸೌಂದರ್ಯ ಅರೋಗ್ಯ ದಲ್ಲಲ್ಲದೆ ಮೈಬಣ್ಣದಲ್ಲಿಲ್ಲ ಎಂದು ಸಿದ್ಧಮಾಡಿ ತೋರಿಸುವ ಕನಕಲತೆಯ ವರ್ಣನೆ ಸುಂದರ ವಾಗಿದೆ. ಅವಳನ್ನು ವಿದುಷಿಯನ್ನಾಗಿ ಮಾಡುವ ಸಲಹೆ ನಿಜವಾಗಿ ಅಧುನಿಕವಿದೆ. ಆದರೆ ಅವಳ ದ್ವಿತೀಯ ವಿವಾಹದ ಸಂಗತಿ ಕಥೆಗಳಲ್ಲಿ ಪುನರ್ಲಿಖಿತ ದೋಷಕ್ಕೆ ಗುರಿ ಯಾಗಿದೆ. ಸ್ತ್ರೀಯರು ಕೂಡ ಪುರುಷರಂತೆ ಧೈರ್ಯ ತೋರಿ ವೈರಿಗಳನ್ನು ಹಿಂದಕ್ಕಟ್ಟಿದ ವೈಭವದ ಮುಂದೆ ಅಲ್ಲಿಯ ವಾರಾಂಗನೆಯ ರಲ್ಲಿ ನಾಲ್ವರು ಶಾಹೀರನನ್ನು ಕಪಟ ಪ್ರೇಮ ದಿಂದ ಮೋಹಿಸಿ ರಾಜಸೇವೆ ಮಾಡಿದ ಉದಾ ಹರಣೆ ಸ್ವಾಭಾವಿಕವಾದರೂ ಸ್ತ್ರೀಯರಿಗೆ ಮರ್ಯಾದೆ ತರತಕ್ಕಂಥದಲ್ಲ.

'ಮುಸಲ್ಮಾನ ಹೆಂಗಸರಂತೆ ಹಿಂದು ಹೆಂಗ ಸರು ಶಕ್ತಿಸಂಪನ್ನರಾಗಬೇಕು' ಎಂಬುದು ಮಿಥ್ಯೋಪವಾದಕಲ್ಪನೆಯಾದರೂ ಪ್ರೊ. ಅವ ಧಾನಿಯವರು ಹೇಳುವಂತೆ ಸ್ತ್ರೀ ವರ್ಗವನ್ನು ದೇವತೆಗಳ ಪಟ್ಟಕ್ಕೆ ಒಯ್ದು ಪೂಜಿಸಿ ಅವ ರಲ್ಲಿ ಮಾನವಸಹಜ ರಸಿಕತೆ, ಸ್ವತಂತ್ರ ಕರ್ತೃತ್ವಶಕ್ತಿ ಇಲ್ಲದಂತೆ ಹಿಂದು ಸಮಾಜ ಮಾಡಿದೆ ಎಂಬುದು ವಿಚಾರಭರಿತವಾದ ಮಾತು. ಹಿಂದುಸ್ಥಾನದ ಸ್ತ್ರೀಯರ ಮೇಲೆ ಅವರ ತೂಕದಷ್ಟು ಬಂಗಾರ ಮತ್ತು ರತ್ನ ವೈಡೂರ್ಯಗಳನ್ನಿಡುತ್ತಿದ್ದುದು ಇತಿಹಾಸ ದಲ್ಲಿ ಅವರ ಅಪಹಾರಕ್ಕೆ ಕಾರಣವಾಯಿತೆಂಬ ಮಾತಿನಲ್ಲಿ ಅದೇ ಕಾರಣದಿಂದ ಸ್ತ್ರೀಯರು ಕೇವಲ ಪರಾವಲಂಬಿಗಳೂ ಮೂಢರೂ ಆಗಿ ಉಳಿದವರಾದರೆಂಬ ಮಾತು ಹೊಳೆಯುತ್ತದೆ.

ಇದು ಪ್ರೀತಿಗಿಂತ ಉಡಿಗೆತೊಡಿಗೆಯೇ ಹೆಚ್ಚೆಂಬ ವಿಲಾಸಿನಿಯರಿಗೊಂದು ಪಾಠ; 'ಮಧ್ಯಮ್ಮಕನ' ಉಳ್ಳವರ ಕಣ್ಣುಗಂಜನ. ಮುಂಬಯಿಯ ಯಾಂತ್ರಿಕಜೀವನದ ಅರಸಿ ಕತೆ ಚೆನ್ನಾಗಿ ಚಿತ್ರಿತವಾಗಿದೆ. "ಇದು ಹಿಂದುಸ್ಥಾನ ಮರೆಯಬೇಡ. ಇಲ್ಲಿ ವ್ಯಕ್ತಿಗೆ ಬೆಲೆಯಿಲ್ಲ. ಜಾತಿಗೆ ಕುಲಕ್ಕೆ, ರೂಢಿ ಪರಂಪರೆಗೆ ಇದೆ. ತಲೆ ಇಲ್ಲದವಳನ್ನು ಮಾಡಿಕೊಂಡರೆ ನಡೆದೀತು ಆದರೆ ತಾಳಿ ಹರಿದವಳನ್ನು ಮುಟ್ಟ ಲಿಕ್ಕಾಗದು" ಎಂಬ ಮಾತು ಸನಾತನಿಗಳಿ ಗೊಂದು ಅಹ್ವಾನವಾಗಿದೆ. ಬೇಸರಬೀಳುವಂಥ ಅಚ್ಚಿನ ದೋಷಗಳಿಲ್ಲದಿದ್ದರೆ ಚೆನ್ನಾಗಿತ್ತು; ಪುಸ್ತಕ ಸಮಾಜನೀತಿಯನ್ನು ವಿವೇಚಿಸುವ ವರಿಗೆ ಒಳ್ಳೆಯ ಅಧಾರವೆನಿಸಬಹುದಾಗಿದೆ. ಶೈಲಿ ಪಳಗಿದ್ದರೆ 'ಕಾದಂಬರಿ' ಇನ್ನಷ್ಟು ಸುಂದರ ದರ್ಶನ ಉಳ್ಳವಳಾಗುತ್ತಿದ್ದಳು.

ಸೆರೆಮನೆಯ ಮಾತುಕತೆ

ಮೂಲ ಲೇಖಕರು, ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು. ಅನುವಾದ ಕರು, ಶ್ರೀ. ಗರಣಿ ಶ್ರೀನಿವಾಸನ್. ಪ್ರಕಾಶ ಕರು, ಹಿಂದ ಕಿತಾಬ್ಸ ಲಿಮಿಟೆಡ್ ಬೆಂಗ ಳೂರು. ೧೧, ಜವಾಹರಲಾಲ ರಸ್ತೆ ಶೇಷಾ ದ್ರಿಪುರಂ ಬೆಂಗಳೂರು ೩ ಪುಟಗಳು ೧೨೦. ಬೆಲೆ ೧-೮-೦.

ಈ ಪುಸ್ತಕದಲ್ಲಿರುವ ವಿಷಯವನ್ನು ಈಗ ಸ್ವತಂತ್ರ ಹಿಂದುಸ್ಥಾನದ ಗವರ್ನರ ಜನರಲ ರಾದ ಹಾಗು ೧೬ ವರ್ಷಗಳ ಮೊದಲು ಸೆರೆ ಯಾಳಾದ ಶ್ರೀ. ಚಕ್ರವರ್ತಿ ರಾಜಗೋಪಾಲಾ ಚಾರ್ಯರು ಸೆರೆಮನೆಯ ಸಂಗಾತಿಗಳಿಗೆ ಸತ್ಕಥಾ ಲಾಪಕ್ಕೂ ಕಾಲಕ್ಷೇಪಕ್ಕೂ ನಿರೂಪಿಸಿದರು. ಇಂಗ್ಲೀಷಭಾಷೆಯಲ್ಲಿ ಪ್ರಕಟವಾದ ಈ ಮಾತು ಕತೆಗಳು ೧೬ ವರ್ಷಾನಂತರ ಕನ್ನಡದಲ್ಲಿ ಪ್ರಕ ಟವಾಗಿವೆ. ತಡವಾಗಿಯಾದರೂ ಪ್ರಕಟವಾದು ದಕ್ಕೆ ಸಂತೋಷಪಡಬೇಕಾಗಿದೆ. ಇದಕ್ಕಾಗಿ ಅನುವಾದಕರನ್ನು ಅಭಿನಂದಿಸಬೇಕು. ವರ್ಷ ಉರುಳಿದವೆಂದು ನಿರೂಪಿತ ವಿಷಯ ಹಳತಾಗ ಲಿಲ್ಲ. ಶ್ರೀ. ರಾಜಾಜಿಯವರು ಅಸಾಧಾರಣ ರಾಜಕಾರಣಿಗಳಿದ್ದಂತೆ ಅಸಾಮಾನ್ಯ ಸಾಹಿತ್ಯ ಕರೂ ಇದ್ದಾರೆ. ಮಾತುಗಾಂಕೆಯಲ್ಲಿಯೂ ಅವರದು ಎತ್ತಿದ ಕೈ. ಇಲ್ಲಿ ಬಗೆಬಗೆಯ ವಿಷ ಯಗಳನ್ನೆತ್ತಿ ಗುಂಜಾಗಂಟು ಇಲ್ಲದೆ ನಯ ವಾಗಿ ನೂಲು ತೆಗೆದಂತೆ ಅತಿ ಸುಲಭವಾಗಿ ಅವುಗಳನ್ನು ತಿಳಿಸಿಹೇಳಲಾಗಿದೆ. ಚಿಕ್ಕವರಿಗೂ ದೊಡ್ಡವರಿಗೂ ಕೂಡಿಯೇ ಈ ಮಾತುಗಳು ಉಪಯುಕ್ತವಾಗುವಂತಿವೆ. ಗಿಡಮರಗಳನ್ನು ಮೊದಲು ಮಾಡಿ ಕೆಡುಕನ್ನು ಎದುರಿಸಬೇಕು, ಸಮಾಜ ಸುಧಾರಣೆ, ರಾಷ್ಟ್ರಯಣ, ತಾರೆ ಗಳೂ ಪರಿಮಾಣುಗಳೂ, ಜೋಲ್ಸೆವಿಝಂ ಹೀಗೆ ಬಗೆಬಗೆಯ ವಿಷಯಗಳಿವೆ. ವಿಷಯ ಗಳನ್ನು ಚನ್ನಾಗಿ ಅರಗಿಸಿಕೊಂಡವರಿಗೆ ಮಾತ್ರ ಇಷ್ಟು ಸುಲಭವಾಗಿ ಸ್ಪಷ್ಟವಾಗಿ ತಿಳಿಸಿ ಹೇಳಲು ಸಾಧ್ಯ. ವಿವೇಚನೆಯ ಕಾಲಕ್ಕೆ ರಾಜಾಜಿಯವರು ಕಥೆಗಳನ್ನೂ ಉದಾಹರಣೆ ಗಳನ್ನೂ ತುಂಬ ಬಳಸಿದ್ದಾರೆ, ಕನ್ನಡ ಅನು ವಾದವೂ ಸರಳವಾಗಿದೆ. ಶಾಲೆಯ ಹುಡುಗರಿಗೆ ಓದಲು ಇದು ಒಳ್ಳೆಯ ಸಾಹಿತ್ಯ.

ಹೆಮ್ಮೆಗಳು

ಬರೆದವರು ಶ್ರೀ. ಜ. ಚೆನ್ನಬಸವ ರಾಜ ದೇಶಿಕೇಂದ್ರ ಮಹಾಸ್ವಾಮಿಗಳು. ಪ್ರಕಾ ಶಕರು ಜ, ಸಿ. ಪ್ರಬೋಧ ಪುಸ್ತಕ ಮಾಲೆ, ಜೆ. ವಿ. ಛತ್ರ, ಚಿಕ್ಕಪೇಟೆ, ಬೆಂಗ ಳೂರು ೩೬, ಪುಟ ೫೧, ಬೆಲೆ ೧೦ ಅಣೆ.

ಗದ್ಯಪದ್ಯ ಮಯಿಯಾದ ಈ 'ಹೆಮ್ಮೆಗಳು' ದೇವಲೋಕದ ಸುಂದರಿ ಎನ್ನಲೂ ಬಾರದು, ಮಾನವ ಲೋಕದವಳೆನ್ನಲೂಬಾರದು. ಇವಳ (ಶಿವ) ಪತಿಭಕ್ತಿ ಈ ರೀತಿಯದು. ಅಲ್ಲದೆ ಇವಳ ರೂಪದಲ್ಲಿ ತನ್ನನ್ನು ಚಿತ್ರಿಸಿಕೊಂಡ ಕವಿ ಗಂಡನಾದ ಶಿವನ ರುದ್ರತೆಯನ್ನಲ್ಲದೆ ಇನ್ನಾವ ಉದಾತ್ತ ಗುಣಗಳನ್ನೂ ಕಂಡವ ಳಿಲ್ಲ. ಅಲ್ಲದೆ ಅವನನ್ನು ಅತಿಕಾಮಿಯೆಂದು ಈ ಕಥಾನಾಯಿಕೆಗೆ ಇವಳ ತಾಯಿ ಬೋಧಿಸು ತ್ತಾಳೆ. ಆದುದರಿಂದ ನಿರರ್ಥಕವಾಗಿ ಗಂಡ ಬೇಕೆಂದು ಹೇಳುವ ನಿಷ್ಕಾಮ ಭಕ್ತಿ— ಅದೂ ಗಂಡನಿಗಂಜಿ ತೋರುವ ಭಕ್ತಿಗೆ ಯಾವ ಬೆಲು ವಿದೆಯೋ ಅರಿದವರೇ ಬಲ್ಲರು! ಇಂಥ ತರ್ಕ ಶುದ್ಧವಲ್ಲದ ಆತ್ಮದೌರ್ಬಲ್ಯಕಾರಕವಾದ ಭಕ್ತಿಯ ಆದರ್ಶವನ್ನು ಹೆಮ್ಮೆ ಕ್ಕಳೆದುರು ಇಟ್ಟಿರುವುದು ಸಮಾಜಘಾತಕವೆನ್ನದಿರಲಾ ರೆವು.

ಕಾಲೊರಸುವ ಚಾಪೆ!

'ರಾಷ್ಟ್ರೀಯ ಸ್ತ್ರೀಸಂಘ' ಎಂಬ ಸಂಸ್ಥೆ ಲಂಡನ್ನಿನಲ್ಲಿದೆ. ಇದೂ ಒಂದು ಜಾತೀಯ ಸಂಸ್ಥೆ. ಜಗತ್ತಿನಲ್ಲಿ ತಾವೇ ಬಹುಸಂಖ್ಯ ರಿದ್ದು ಅಲ್ಪಸಂಖ್ಯರಂತೆ ಸಮಾಜ, ಸಂಘ ಕಟ್ಟಿಕೊಂಡು ಪಕ್ಕನಹಕ್ಕ ಬೇಟೆಗೆ ನಮ್ಮಲ್ಲಿ ಹಲವರು ಹೊರಟಿರುವುದಕ್ಕೆ ಇದೊಂದು ನಿದ ರ್ಶನ. ೫೦೦ ಪ್ರತಿನಿಧಿಗಳಲ್ಲಿ ೪೯೯ ಜನರು 'ಇಂಥವನ ಹೆಂಡತಿ' ಎಂದು ಸರಕಾರದ ರಿಕಾರ್ಡುಗಳಲ್ಲಿರುವುದನ್ನು ತೆಗೆದುಹಾಕಿ ಕೇವಲ ಹೆಂಗಸಿನ ಹೆಸರಷ್ಟನ್ನೇ ಬರೆವ ಪದ್ಧತಿ ತರಬೇಕೆಂದು ನಿರ್ಣಯಿಸಿದರು. ಇದೂ ಒಂದು ಸ್ವಾತಂತ್ರ್ಯ ಚಳವಳದ ಬಗೆ!

ಸ್ತ್ರೀಯಲ್ಲಿ ಬಹುಸಂಖ್ಯರು ತಾಯ್ತನವನ್ನು ಬಯಸುವ ಹೆಂಡತಿಯರಾಗಿರಲು ಆಶೆಪಡುತ್ತಿ ರುವ ವರೆಗೆ ಅವರಿಗೆ ಗಂಡಂದಿರಂತೆ ತೋರಿಕೆಯಲ್ಲಿ "ಸ್ವತಂತ್ರ"ರೆನಿಸಿ ಗೃಹೇ ತರ ವ್ಯವಹಾರದಲ್ಲಿ ಸಮಸ್ಪರ್ಧಿಗಳಾಗಲು ಸಾಧ್ಯವಿಲ್ಲ. ಸ್ಪರ್ಧಿಗಳಾದರೂ ಬಹಳ ಜನ ರಿಗೆ ಯಶಸ್ಸೂ ಸಿಗದು, ಸಿಕ್ಕಿದರೂ ಗಂಡ ಬೇಕೆನ್ನುವ ಅವರಿಗೆ ಅವನನ್ನು ಅಸಂತೋಷ ಗೊಳಿಸಿದ್ದರಿಂದ ಯಾವ ಗೃಹಸುಖವೂ ಸಿಗದು, ತಮಗೇನಾದರೂ ಗೃಹಸುಖ ವಿರಲಿ, ಗೃಹೇತರ ಸ್ವಾತಂತ್ರ್ಯವಿರಲಿ ಯಾವುದನ್ನೇ ಆದರೂ ಸೃಷ್ಟಿಯಲ್ಲಿ ತಮ್ಮ Counter Part ಅರ್ಧಾಂಗರೆನಿಸಿದ ಗಂಡ ಸರನ್ನು ದ್ವೇಷಿಸಿ ಪಡೆಯಲು ಸಾಧ್ಯವುಂಟೇ? ಅಥವಾ ಅದರಿಂದ ನಿಜವಾದ ಸುಖಶಾಂತಿ ಲಭಿಸೀತೇ? ಎಂದಿಗೂ ಲಭಿಸಲಾರದೆಂಬುದು ಬಹುಜನರ ಅನುಭವ. ಹೀಗಿರುವಾಗ ತಮ ಗೇನು ಬೇಕಾದರೂ ಒಲವಿನಿಂದ ಪಡೆಯುವ ಒಂದೇ ಅತ್ಯುತ್ತಮ ಮಾರ್ಗ ಹೆಂಗಸರಿಗುಳಿ ದಿದೆಯಲ್ಲದೆ ಛಲದ ಹಿಂಸಾತ್ಮಕ ಮಾರ್ಗವಿಲ್ಲ ಎಂಬುದನ್ನು ಅವರು ಲಕ್ಷದಲ್ಲಿಡಬೇಕು. ಹೆಂಗಸು ಗಂಡಸಿನ Helpmate ಸಹಾಯಕ ಎಂದರೇನು, ಗಂಡಸು ಹೆಂಗಸಿನ ಸಹಾಯಕ ಅಂದರೇನು, ಮಾತಿನಲ್ಲಲ್ಲದೆ ಅರ್ಥದಲ್ಲಿ ಭೇದ ವಿಲ್ಲ ಹಾಗೆಯೇ "ಹೆಂಗಸಿಗೆ ಮನೆ" ಎಂದ ಕೂಡಲೆ "ಗಂಡಸು ಹೊರಗೆ" ಎಂದು ಅದೇ ಭಾವ ಅದೇ ಅರ್ಥದಲ್ಲಿ ಹೇಳಿ ಬಿಡಬಹುದ ದವೆ? ಹಾಗೆ ಹೇಳಿದಿರದು ನಿಜವೆ? ವಾಕ್ಯ ವ್ಯವಹಾರದ ಕೌಶಲ್ಯವಿಲ್ಲದೆ, ಅರ್ಥಗ್ರಹಣಶಕ್ತಿಯಿಲ್ಲದೆ ಹಕ್ಕನ್ನೇ ಬಾಧ್ಯತೆ ಯೆಂದು ತಿಳಿದು, ಇರುವ ಅಧಿಕಾರವನ್ನೇ ಅಲ್ಪವೆಂದುಕೊಂಡು, ಈಗಿರುವ ಹೆಚ್ಚಿನ ಸ್ವಾತಂತ್ರ್ಯವನ್ನೇ ಗುಲಾಮಗಿರಿಯೆಂದು ಕೊಂಡು, ಭಾಗಿತರಂತೆ ಉರಿದೇಳುವ ಮಂಕುತನದಿಂದ ಇದ್ದದ್ದು ಹೋದೀತಲ್ಲದೆ, ಹೆಚ್ಚು ಲಭಿಸಲಾರದು. ಲಭಿಸಿದರೂ ಅದನ್ನು ನಾವು ಉಳಿಸಿಕೊಳ್ಳಲಾರೆವು, ಉಳಿಸಿ ಕೊಂಡರೂನಮಗದರಿಂದಸುಖವಾಗದು ಎಂಬ ಮಾತು ಪ್ರಗತಿಪರವಲ್ಲ ಎಂಬವರು ತಾಯ್ತನ, ಗೃಹಾಧಿಕಾರ, ಮಕ್ಕಳ ಮಮತೆ, ಪತಿಪ್ರೀತಿ, ಮುಂತಾದ ಉತ್ತಮವಾದ ಜೀವನಾನಂದ ಗಳಿಂದ ದೂರ ಇರಲು ಬಯಸುವ ಮತ್ಸರ ಗ್ರಸ್ತ ಅಲ್ಪಸಂಖ್ಯ ಮಹಿಳಾಮಣ್ಯರಲ್ಲದ ಮಹಿಳೆಯರೆಂದು ಯಾರೆಂದಾರು?

"ನಾವೇನು ಕಾಲೊರಸುವ ಚಾಪೆಗಳಾದ ವೇನು?" ಎಂದು ಹೂಂಕರಿಸಿ ಎದ್ದಿದ್ದರಂತೆ ಲಂಡನ್ನಿತಿಯರು! ಯಾರ ಮೇಲೆ ಆ ಹೂಂಕಾರ? ಗಂಡಸರೆಂದರೆ ಯಾರು? ಹೆಂಗಸರೂ ಗಂಡಸರೂ ಪರಸ್ಪರರ ಬಗ್ಗೆ ಪ್ರತ್ಯೇಕತಾಭಾವನೆಯಿಂದ ವಿಚಾರ ಮಾಡು ವಾಗ ತಂತಮ್ಮ ತಂದೆ, ತಾಯಿ, ಅಣ್ಣ ತಮ್ಮ, ಅಕ್ಕ ತಂಗಿ, ಗೆಳೆಯ ಗೆಳತಿ, ಗಂಡ ಹೆಂಡತಿ ಯರನ್ನು ಮರೆತು ಬಿಡುವದೇ ಜಗತ್ತಿನಲ್ಲಿ ಇಂದು ಕೇಳಿ ಬರುವ ಸ್ತ್ರೀ ಪುರುಷ ಸಮಸ್ಯೆ ಗಳ ಭೂತಾಕಾರದ ಚರ್ಚೆಗೆ ಕಾರಣ. ಆ ಮರೆವೊಂದನ್ನು ಹೊಡೆದೋಡಿಸಿದ ದಿನ ಜಗ ತ್ತಿನಲ್ಲಿ ಇಂಥ ಸಮಸ್ಯೆ ಬುಡಸಹಿತ ಕಿತ್ತು ಕೊಂಡು ಬೀಳದಿರದು. ಈ ಅಮೂಲ್ಯಾಂಶ ವನ್ನು ನಮ್ಮ ಬಂಧು ಭಗಿನಿಯರು "ಶ್ರೋತವ್ಯ, ಮಂತವ್ಯ, ನಿಧಿಧ್ಯಾಸಿತವ್ಯ" ಸೂತ್ರದಂತೆ ಪರಿಗ್ರಹಿಸಿ ಆಚರಣೆಗೆ ತರುವದು ಸರ್ವಸುಖಕ್ಕೆ ಅತ್ಯವಶ್ಯಕವಾದುದು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.